



ಮೆಜೆಸ್ಟಿಕ್‌ನಲ್ಲಿ ರಸ್ತೆಗೆ ಕುಸಿದು ಬಿದ್ದಿರುವ ತಡೆಗೋಡೆ (ಎಡಚಿತ್ರ), ಬೊಮ್ಮನಹಳ್ಳಿಯ ಕೋಡಿಚಿಕ್ಕನಹಳ್ಳಿಯಲ್ಲಿ ಅಪಾರ್ಟ್‌ಮೆಂಟ್ ಪಕ್ಕದ ಗೋಡೆ ಕುಸಿದಿರುವುದು –ಪ್ರಜಾವಾಣಿ ಚಿತ್ರಗಳು

ಶೇಷಾದ್ರಿಪುರದಿಂದ ಮೆಜೆಸ್ಟಿಕ್‌ಗೆ ತೆರಳುವ ಮುಖ್ಯ ರಸ್ತೆಯಲ್ಲಿ ಮನೆ ಕುಸಿಯುವ ಭೀತಿಯಲ್ಲಿ ನಿವಾಸಿಗಳು

ಅಬ್ಬರದ ಮಳೆ: ಹಲವೆಡೆ ಗೋಡೆ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರವೂ ಧಾರಾಕಾರವಾಗಿ ಮಳೆ ಸುರಿದಿದ್ದು, ಮೂರು ಕಡೆ ಗೋಡೆ ಕುಸಿದು ಆತಂಕ ಸೃಷ್ಟಿಯಾಗಿದೆ.

ಇಂದಿರಾನಗರದಲ್ಲಿ ಸೋಮವಾರ ಮಿಲಿಟರಿ ಕಾಂಪೌಂಡ್ ಕುಸಿದು 10ಕ್ಕೂ ಹೆಚ್ಚು ವಾಹನಗಳು ಜಖಂಗೊಂಡಿವೆ. ಬೆಳಗಿನ ಜಾವ ಗೋಡೆ ಕುಸಿದಿರುವುದರಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಕಳೆದ ವರ್ಷವೂ ಇದೇ ಜಾಗದಲ್ಲಿ ಮಹಿಳೆ ಮೇಲೆ ಗೋಡೆ ಕುಸಿದು ಬಿದ್ದಿತ್ತು. ಆಗಾಗ ಈ ರೀತಿಯ ತೊಂದರೆ ಆಗುತ್ತಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.


ಶೇಷಾದ್ರಿಪುರದಿಂದ ಮೆಜೆಸ್ಟಿಕ್‌ಗೆ ತೆರಳುವ ಮುಖ್ಯ ರಸ್ತೆಯ ಪಕ್ಕದಲ್ಲಿ ದೊಡ್ಡ ಗೋಡೆಯೊಂದು ಕುಸಿದು ಆತಂಕ ಹೆಚ್ಚಿಸಿದೆ. ಪಕ್ಕದಲ್ಲೇ ರೈಲ್ವೆ ಮೇಲ್ಸೇತುವೆ ಹಾದು ಹೋಗಿದ್ದು, ಗೋಡೆಗೆ ಹೊಂದಿಕೊಂಡೇ ಇರುವ ಮನೆ ಕುಸಿಯುವ ಭಯದಲ್ಲಿ ನಿವಾಸಿಗಳಿದ್ದಾರೆ.

'ಈ ಹಿಂದೆಯೂ ಮನೆಯ ಒಂದು ಮೂಲೆ ಕುಸಿದಿತ್ತು. ಈಗ ಮತ್ತೊಮ್ಮೆ ಗೋಡೆ ಕುಸಿದಿದೆ. ಸದ್ಯ ಮನೆಯಿಂದ ಖಾಲಿ ಮಾಡಿಸಿ ಅಧಿಕಾರಿಗಳು ತೆರಳಿದ್ದಾರೆ. ಮನೆ ಒಳಗೆ ಹೋಗದೆ ಹೊರಗೆ ನಿಂತಿದ್ದೇವೆ. ಎಲ್ಲಿಗೆ ಹೋಗಬೇಕು ಎಂಬುದೇ ತಿಳಿಯುತ್ತಿಲ್ಲ' ಎಂದು ಮನೆಯ ಮಾಲೀಕರಾದ ವಿಜಯಮ್ಮ ಕಣ್ಣೀರಿಟ್ಟರು.

'ಗೋಡೆ ಬಿದ್ದ ಸಂದರ್ಭದಲ್ಲಿ ಕೆಳಗಿನ ರಸ್ತೆಯಲ್ಲಿ ಯಾವುದೇ ವಾಹನ ಇರಲಿಲ್ಲ. ಹೀಗಾಗಿ, ಯಾವುದೇ ಹಾನಿಯಾಗಿಲ್ಲ. ಮೇಲ್ಭಾಗದಲ್ಲಿನ ನಾಲ್ಕು ಮನೆಗಳಲ್ಲಿನ ಜನರನ್ನು ಮುನ್ನೆಚ್ಚರಿಕೆ ಕ್ರಮವಾಗಿ ಸ್ಥಳಾಂತರ ಮಾಡಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

'50 ವರ್ಷಗಳಷ್ಟು ಹಳೆಯದಾದ ಕಲ್ಲಿನ ಗೋಡೆ ಆಕಸ್ಮಿಕವಾಗಿ ಕುಸಿದಿದೆ. ರೈಲ್ವೆ ಮಾರ್ಗದ ಬಳಿ ಗಟ್ಟಿಯಾಗಿದ್ದು, ಯಾವುದೇ ತೊಂದರೆ ಇಲ್ಲ. ಬಿದ್ದಿರುವ ಗೋಡೆಯನ್ನು ತಾತ್ಕಾಲಿಕವಾಗಿ ಮರಳು ಮೂಟೆಗಳಿಂದ ಭದ್ರಪಡಿಸಲಾಗುತ್ತಿದೆ' ಎಂದು ಪಶ್ಚಿಮ ವಲಯದ ಕಾರ್ಯಪಾಲಕ ಎಂಜಿನಿಯರ್ ಮಾರ್ಕಂಡೇಯ ಹೇಳಿದರು.

ಬೊಮ್ಮನಹಳ್ಳಿಯ ಕೋಡಿಚಿಕ್ಕನಹಳ್ಳಿ ಬಳಿ ಅಪಾರ್ಟ್‌ಮೆಂಟ್ ಪಕ್ಕದ ತಡೆಗೋಡೆ ಭಾನುವಾರ ರಾತ್ರಿ ಕುಸಿದಿದೆ. ಕಟ್ಟಡದ ಪಿಲ್ಲರ್ ಮೇಲೆಯೇ ಗೋಡೆ ಬಿದ್ದಿದ್ದು, ಸ್ಥಳಕ್ಕೆ ಬಿಬಿಎಂಪಿ ಎಂಜಿನಿಯರ್‌ಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.





ನಗರದ ಬಳ್ಳಾರಿ ರಸ್ತೆಯಲ್ಲಿ ಮಳೆಯಿಂದಾಗಿ ವಾಹನ ದಟ್ಟಣೆ ಉಂಟಾಯಿತು (ಎಡಚಿತ್ರ), ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಕಾರಲ್ಲಿ ತೆರಳಲು ಸಾಧ್ಯವಾಗದೆ ಪ್ರಯಾಣಿಕರನ್ನು ಟ್ರಾಕ್ಟರ್‌ನಲ್ಲಿ ಕರೆದೊಯ್ಯಬೇಕಾದ ಪರಿಸ್ಥಿತಿಯೂ ನಿರ್ಮಾಣವಾಯಿತು.

ನಗರದ ವಿವಿಧೆಡೆ ಎಡೆಬಿಡದೆ ಸುರಿದ ಮಳೆ

ನಗರದೆಲ್ಲೆಡೆ ಬೆಳಿಗ್ಗೆಯಿಂದ ತುಂತುರು ಮಳೆ ಸುರಿಯುತ್ತಿತ್ತು. ಸಂಜೆ 6ರ ವೇಳೆಗೆ ಗುಡುಗು ಸಹಿತ ಜೋರಾದ ಮಳೆ ಸತತ ಸುರಿಯಿತು.

ಶಿವಾಜಿನಗರ, ಇಂದಿರಾನಗರ, ಬಸವೇಶ್ವರನಗರ, ರಾಜಾಜಿನಗರದ, ಹಲಸೂರು, ಮಲ್ಲೇಶ್ವರ, ವಿಜಯನಗರ, ಯಶವಂತಪುರ, ಪೀಣ್ಯ, ಮಹಾಲಕ್ಷ್ಮಿ ಲೇಔಟ್, ಸಂಪಂಗಿರಾಮನಗರ, ನಾಗರಬಾವಿ, ಕೆಂಗೇರಿ, ರಾಜರಾಜೇಶ್ವರಿನಗರ, ಅನ್ನಪೂರ್ಣೇಶ್ವರಿನಗರ, ಬನಶಂಕರಿ, ಆರ್‌.ಟಿ.ನಗರ, ಹೆಬ್ಬಾಳ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಭಾರಿ ಮಳೆ ಸುರಿಯಿತು.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಭಾರಿ ಮಳೆಯಿಂದ ರಸ್ತೆಯಲ್ಲಿ ಹೊಳೆಯಂತೆ ನೀರು ಹರಿಯಿತು. ಮುಂದಕ್ಕೆ ಹೋಗಲು ಸಾಧ್ಯವಾಗದೆ ಕಾರುಗಳು ಸಾಲುಗಟ್ಟಿ ನಿಂತಿದ್ದವು.



ಭಾರಿ ಮಳೆಯಿಂದಾಗಿ ದೇವನಹಳ್ಳಿಯ ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣದ ಟರ್ಮಿನಲ್‌ನಲ್ಲಿ ಕೆರೆಯಂತೆ ನೀರು ಸಂಗ್ರಹವಾಯಿತು.



ಪ್ರಯಾಣಿಕರು ತೀವ್ರವಾಗಿ ತೊಂದರೆಗೆ ಒಳಗಾದರು

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಭಾರಿ ಮಳೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲು ಒಂದು ಗಂಟೆ ಕಾಲ ಸುರಿದ ಭಾರಿ ಮಳೆಯಿಂದಾಗಿ ಪ್ರಯಾಣಿಕರು ಪರದಾಡುವಂತಾಯಿತು. ವಿಮಾನ ನಿಲ್ದಾಣದ ಟರ್ಮಿನಲ್‌ಗಳಿಗೆ ನೀರು ನುಗ್ಗಿದ್ದರಿಂದ ವಾಹನ ಸಂಚಾರಕ್ಕೆ ಅಡ್ಡಿಯುಂಟಾಯಿತು.

ಟರ್ಮಿನಲ್ ಮುಂಭಾಗದಲ್ಲಿ ಸುಮಾರು ಎರಡು ಅಡಿಗೂ ಅಧಿಕ ನೀರು ನಿಂತಿದ್ದರಿಂದ ವಿವಿಧ ಕಡೆಗಳಿಂದ ಬರುವ ಪ್ರಯಾಣಿಕರು ಪರದಾಡುವ ಸ್ಥಿತಿ ಇತ್ತು. ಟರ್ಮಿನಲ್ ಮುಂಭಾಗದ ರಸ್ತೆಗಳು ಅಕ್ಷರಶಃ ಕೆರೆಯಂತಾಗಿತ್ತು.

ದೇವನಹಳ್ಳಿ ಬೈಪಾಸ್ ರಸ್ತೆಯಲ್ಲಿ ದಸರಾ ಅಂಗವಾಗಿ ಮಾರಾಟ ಮಾಡಲು ತಂದಿದ್ದ ಬೂದುಕುಂಬಳಕಾಯಿ ಸೇರಿದಂತೆ ತರಕಾರಿ ಮಳೆ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ದೃಶ್ಯ ಕಂಡು ಬಂದಿತು.


ಮಳೆ ನೀರಿನ ಸಮಸ್ಯೆ ಪರಿಶೀಲನೆ

ಬೆಂಗಳೂರು: ಶಾಂತಿನಗರ ಕ್ಷೇತ್ರ ವ್ಯಾಪ್ತಿಯ ದೊಮ್ಮಲೂರು ವಾರ್ಡ್‌ನಲ್ಲಿನ ಅಮರ ಜ್ಯೋತಿ ಲೇಔಟ್‌ನ 5 ಮತ್ತು 6ನೇ ಮುಖ್ಯ ರಸ್ತೆಯಲ್ಲಿ ಮಳೆನೀರು ಸರಾಗವಾಗಿ ಹರಿದು ಹೋಗಲು ಕಲ್ವರ್ಟ್ ನಿರ್ಮಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಮರ ಜ್ಯೋತಿ ಲೇಔಟ್‌ನಲ್ಲಿ ಮಳೆಗಾಲದ ವೇಳೆ ರಸ್ತೆಗಳಲ್ಲಿ ನೀರು ನಿಲ್ಲುವ ಸಮಸ್ಯೆ ಪರಿಶೀಲಿಸಿದ ಅವರು, '5ನೇ ಮುಖ್ಯ ರಸ್ತೆಯ ಕರ್ನಾಟಕ ಗಾಲ್ಫ್ ಅಸೋಸಿಯೇಷನ್ ಆವರಣದಲ್ಲಿ ಸಣ್ಣ ಮೋರಿ ಇದೆ. ಹೊಸದಾಗಿ ಮೋರಿ ನಿರ್ಮಿಸಿದರೆ ರಸ್ತೆಗಳ ಮೇಲೆ ನಿಲ್ಲುವ ನೀರು ಸರಾಗವಾಗಿ ಹರಿದು ಹೋಗಲಿದೆ. ಗಾಲ್ಫ್ ಕ್ಲಬ್ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ಸಮಸ್ಯೆ ಇತ್ಯರ್ಥ ಪಡಿಸಿ' ಎಂದರು.

'ಆಲ್ಬರ್ಟ್ ಸ್ಟ್ರೀಟ್ ರಸ್ತೆ ಬದಿಯ ಮೋರಿಗಳನ್ನು ಪುನರ್ ನವೀಕರಣ ಮಾಡಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು. ಈ ಸಂಬಂಧ ತ್ವರಿತವಾಗಿ ಕಾಮಗಾರಿ ಪ್ರಾರಂಭಿಸಬೇಕು. ರಿಚ್ಮಂಡ್ ರಸ್ತೆ ಪಾದಚಾರಿ ಮಾರ್ಗಗಳಲ್ಲಿ ಅಳವಡಿಸಿರುವ ಸಸಿಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕು' ಎಂದು ಸೂಚಿಸಿದರು. ಶಾಸಕ ಎನ್‌.ಎ.ಹ್ಯಾರೀಸ್, ಮುಖ್ಯ ಎಂಜಿನಿಯರ್‌ಗಳಾದ ಮೋಹನ್ ಕೃಷ್ಣ, ಸುಗುಣಾ, ಲೋಕೇಶ್ ಇದ್ದರು.

ಕನ್ನಡ ಮೂಲೋತ್ಪಾಟನೆ ಬಿಜೆಪಿಯ ರಹಸ್ಯ ಕಾರ್ಯಸೂಚಿಯೇ: ಎಚ್‌ಡಿಕೆ



ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಸಂಸ್ಥೆಯ (ನಿಮ್ಹಾನ್ಸ್) ಘಟಿಕೋತ್ಸವದಲ್ಲಿ ಕನ್ನಡಕ್ಕೆ ಅವಮಾನ ಮಾಡಲಾಗಿದ್ದು, ಕನ್ನಡವು ಕಟುಕರ ಕೈಯಲ್ಲಿ ಸಿಕ್ಕಿಕೊಂಡಿರುವುದಕ್ಕೆ ಇದಕ್ಕಿಂತ ನಿದರ್ಶನ ಬೇಕಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಈ ಬಗ್ಗೆ ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರು ಹಾಗೂ ಸಂಸದರಿದ್ದ ವೇದಿಕೆಯಲ್ಲೇ ಕನ್ನಡವನ್ನು ಮೂರನೇ ಸ್ಥಾನಕ್ಕಿಳಿಸಿರುವುದು ಅಕ್ಷಮ್ಯ' ಎಂದು ಟೀಕಿಸಿದ್ದಾರೆ.

'ನಿಮ್ಹಾನ್ಸ್‌ನ 25ನೇ ಘಟಿಕೋತ್ಸವ ದಲ್ಲಿ ಹಿಂದಿಗೆ ಅಗ್ರಸ್ಥಾನ! ಇಂಗ್ಲಿಷ್‌ಗೆ ದ್ವಿತೀಯ ಸ್ಥಾನ! ಕನ್ನಡಕ್ಕೆ ಮೂರನೇ ಸ್ಥಾನ ನೀಡಲಾಗಿದೆ. ಸಾವಿರಾರು ವರ್ಷ ಗಳ ಇತಿಹಾಸ ಇರುವ ಕನ್ನಡವನ್ನು ಮೂರನೇ ಸ್ಥಾನಕ್ಕಿಳಿಸಿದ್ದ ಆ ವೇದಿಕೆಯ ಮೇಲೆ ಕೂರಲು ಅವರಿಗೆ ಮನಃಸಾಕ್ಷಿಯಾದರೂ ಹೇಗೆ ಬಂತು? ಈ ಮೂವರ ಕನ್ನಡಾಭಿಮಾನ ಶೂನ್ಯತೆಗೆ ನನ್ನ ಧಿಕ್ಕಾರ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕರ್ನಾಟಕದಲ್ಲಿ ಕನ್ನಡವೇ ಮೊದಲು ಎಂದು ಹೇಳಲು ಏನಾಗಿದೆ? ಕನ್ನಡವನ್ನು ಕರ್ನಾಟಕದಿಂದಲೇ ಮೂಲೋತ್ಪಾಟನೆ ಮಾಡಬೇಕು ಎಂಬುದು ಬಿಜೆಪಿಯ ಹಿಡನ್ ಅಜೆಂಡಾವೇ?' ಎಂದೂ ಪ್ರಶ್ನಿಸಿದ್ದಾರೆ.


ಉಪ ಚುನಾವಣೆ: ದಾವಣಗೆರೆಯಲ್ಲಿ ಗುಪ್ತ ಸಭೆ ನಡೆಸಿದ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸಿಂದಗಿ ಮತ್ತು ಹಾನಗಲ್ ಉಪ ಚುನಾವಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಸೋಮವಾರ ದಾವಣಗೆರೆ ಜಿಎಂಐಟಿಯಲ್ಲಿ ಗುಪ್ತ ಸಭೆ ನಡೆದಿದೆ.

ಸೋಮವಾರ ರಾತ್ರಿ ದಾವಣಗೆರೆಗೆ ಬಂದಿರುವ ಮುಖ್ಯಮಂತ್ರಿ ಅವರು, ಸಚಿವರಾದ ಬಿ.ಸಿ. ಪಾಟೀಲ, ಸುನೀಲ್ ಕುಮಾರ್ ಸಹಿತ ಪ್ರಮುಖರ ಜತೆಗೆ ಚುನಾವಣೆ ಬಗ್ಗೆ ಚರ್ಚೆ ನಡೆಸಿದ್ದಾರೆ.

ಮಂಗಳವಾರ ಬೆಳಿಗ್ಗೆ ಹಾವೇರಿ ಜಿಲ್ಲೆಯ ಇನ್ನೂ ಕೆಲವು ನಾಯಕರು ಬರಲಿದ್ದು, ಮತ್ತೊಂದು ಸುತ್ತಿನ ಸಭೆ ನಡೆಯಲಿದೆ. ಚುನಾವಣೆ ನಿರ್ವಹಣೆಗೆ ಪ್ರತ್ಯೇಕ ಸಮಿತಿ ರಚಿಸಲಿದ್ದಾರೆ ಎಂದು ಬಿಜೆಪಿಯ ಪ್ರಮುಖರು ತಿಳಿಸಿದ್ದಾರೆ.



ಬಸವರಾಜ ಬೊಮ್ಮಾಯಿ

ಬಿಎಸ್‌ವೈ ಪ್ರಚಾರ ಮಾಡಲಿದ್ದಾರೆ: ಯಡಿಯೂರಪ್ಪ ಅವರನ್ನ ಯಾರೂ ಮುಖ್ಯಮಂತ್ರಿ ಕುರ್ಚಿಯಿಂದ ಇಳಿಸಿಲ್ಲ. ಅವರೇ ಸ್ಥಾನ ಬಿಟ್ಟು ಕೊಟ್ಟಿದ್ದಾರೆ. ಜೊತೆಗೆ ಲಿಂಗಾಯತರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಯಡಿಯೂರಪ್ಪ ಮತ್ತು ವಿಜಯೇಂದ್ರ ಇಬ್ಬರೂ ಹಾನಗಲ್, ಸಿಂದಗಿಯಲ್ಲಿ ಪ್ರಚಾರ ಮಾಡುತ್ತಾರೆ ಎಂದು ಸಚಿವ ಬಿ.ಸಿ. ಪಾಟೀಲ ಹೇಳಿದ್ದಾರೆ.

'ಎರಡೂ ಸ್ಥಾನಗಳನ್ನು ನಾವು ಗೆಲ್ಲುತ್ತೇವೆ. ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಪೆಟ್ರೋಲ್ ಬೆಲೆ ಏರಿಕೆಯಾಗಿದೆ. ತರಕಾರಿ ಬೆಲೆ ಈಗ ಜಾಸ್ತಿಯಾಗಿದೆ. ಇವೆಲ್ಲ ಉಪ ಚುನಾವಣೆಯ ಮೇಲೆ ಪ್ರಭಾವ ಬೀರುವುದಿಲ್ಲ. ಐಟಿ ದಾಳಿಗಳೆಲ್ಲ ಸಹಜ ಪ್ರಕ್ರಿಯೆ' ಎಂದು ಸೋಮವಾರ ರಾತ್ರಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಬಂದ್ ಯಶಸ್ವಿ

ಬೀದರ್: ಎ.ಜೆ. ಸದಾಶಿವ ಆಯೋಗದ ವರದಿ ಜಾರಿಗೊಳಿಸಬೇಕು ಹಾಗೂ ವರದಿಗೆ ವಿರೋಧಿಸುತ್ತಿರುವ ಪ್ರಭು ಚವಾಣ್ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿ ಮಾದಿಗ ದಂಡೋರ ಹೋರಾಟ ಸಮಿತಿ ಸೋಮವಾರ ಕರೆ ನೀಡಿದ್ದ ಬೀದರ್ ಬಂದ್ ಯಶಸ್ವಿಯಾಯಿತು.

ಶಿಕ್ಷಣಕ್ಕೆ ಸೆಲ್ವಕುಮಾರ್ ಕಾರ್ಯದರ್ಶಿ, ಆರೋಗ್ಯಕ್ಕೆ ರಂದೀಪ್ ಆಯುಕ್ತ

ಬೆಂಗಳೂರು: ರಾಜ್ಯ ಸರ್ಕಾರ 27 ಐಎಎಸ್ ಮತ್ತು 7 ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ ಮಾಡಿದ್ದು, ಬಿ.ಎಚ್‌.ಅನಿಲ್ ಕುಮಾರ್ ಅವರನ್ನು ಮೂಲಭೂತ ಸೌಕರ್ಯ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಮತ್ತೊಬ್ಬ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್ ಅವರನ್ನು ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ವ್ಯವಹಾರ ಹಾಗೂ ಕಾನೂನು ಮಾಪನ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಇತರ ಅಧಿಕಾರಿಗಳನ್ನು ಅವರ ಮುಂದಿನ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಎಸ್‌.ಆರ್‌. ಉಮಾಶಂಕರ್– ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಎಸ್‌.ಸೆಲ್ವಕುಮಾರ್– ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ (ಕೌಶಲ್ಯಾಭಿವೃದ್ಧಿ ಇಲಾಖೆ, ಹೆಚ್ಚುವರಿ ಹೊಣೆ), ನವೀನ್ ರಾಜ್ ಸಿಂಗ್– ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ.(ಬೆಂಗಳೂರು ವಿಭಾಗೀಯ ಆಯುಕ್ತರ ಹೆಚ್ಚುವರಿ ಹೊಣೆ).

ಜೆ. ರವಿಶಂಕರ್– ಕಾರ್ಯದರ್ಶಿ, ವಸತಿ ಇಲಾಖೆ (ಅಬಕಾರಿ ಇಲಾಖೆ ಆಯುಕ್ತ– ಹೆಚ್ಚುವರಿ ಹುದ್ದೆ), ಡಿ. ರಂದೀಪ್– ಆಯುಕ್ತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೆ.ವಿ. ತ್ರಿಲೋಕ್ ಚಂದ್ರ– ವಿಶೇಷ ಆಯುಕ್ತ (ಆರೋಗ್ಯ ಮತ್ತು ಐಟಿ) ಬಿಬಿಎಂಪಿ, ಕೆ.ಪಿ.ಮೋಹನ್ ರಾಜ್– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಬಿ.ಬಿ.ಕಾವೇರಿ– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ.

ಟಿ.ಎಚ್‌.ಎಂ.ಕುಮಾರ್– ಆಯುಕ್ತ, ಜವಳಿ ಅಭಿವೃದ್ಧಿ ಮತ್ತು ನಿರ್ದೇಶಕರು, ಕೈಮಗ್ಗ, ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ, ಪ್ರಿಯಾಂಕ ಮೇರಿ ಫ್ರಾನ್ಸಿಸ್– ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕನಗ ವಲ್ಲಿ– ನಿರ್ದೇಶಕರು, ಸಮಗ್ರ ಶಿಶು ಸಂರಕ್ಷಣಾ ಯೋಜನೆ, ವಿ.ರಾಮ್ ಪ್ರಸಾದ್ ಮನೋಹರ್– ನಿರ್ದೇಶಕ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಆರ್‌.ವೆಂಕಟೇಶ್ ಕುಮಾರ್– ಕಾರ್ಯದರ್ಶಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ, ಚಾರುಲತಾ ಸೋಮಲ್– ಜಿಲ್ಲಾಧಿಕಾರಿ, ರಾಯಚೂರು.

ಶಿಲ್ಪಾನಾಗ್ ಸಿ.ಟಿ– ಆಯುಕ್ತೆ, ಪಂಚಾಯತ್ ರಾಜ್, ಕೆ. ಲಕ್ಷ್ಮಿಪ್ರಿಯಾ– ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು, ಬಿ.ಎಚ್‌. ನಾರಾಯಣರಾವ್– ಸಿಇಒ, ಜಿಲ್ಲಾ ಪಂಚಾಯಿತಿ, ವಿಜಯನಗರ ಜಿಲ್ಲೆ, ಯುಕೇಶ್ ಕುಮಾರ್– ಸಿಇಒ, ಜಿಲ್ಲಾ ಪಂಚಾಯಿತಿ, ಕೋಲಾರ, ಬಿ.ಸಿ.ಸತೀಶ– ಜಿಲ್ಲಾಧಿಕಾರಿ, ಕೊಡಗು, ಎಚ್‌.ಎನ್‌. ಗೋಪಾಲಕೃಷ್ಣ– ಆಯುಕ್ತ, ಯುವಜನ ಸಬಲೀಕರಣ, ಕ್ರೀಡಾ ಇಲಾಖೆ, (ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಭೂ ನಿಗಮ ನಿಯಮಿತ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ).

ಶಿವಾನಂದ ಕಾಪಸಿ– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ, ಎಂ.ಎಸ್‌. ಅರ್ಚನಾ– ನಿರ್ದೇಶಕಿ, ಪೌರಾಡಳಿತ, ಕೆ.ಎಂ.ಗಾಯತ್ರಿ– ಸಿಇಒ, ಜಿಲ್ಲಾ ಪಂಚಾಯಿತಿ, ಚಾಮರಾಜನಗರ, ಕೆ.ಎಂ.ಅನುರಾಧ– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರೇಷ್ಮೆ ಮಾರುಕಟ್ಟೆ ಮಂಡಳಿ, ಎನ್‌.ಎಂ.ನಾಗರಾಜ– ಸಿಇಒ, ಜಿಲ್ಲಾ ಪಂಚಾಯಿತಿ, ಕೋಲಾರ.

ಐಎಫ್‌ಎಸ್ ವರ್ಗಾವಣೆ: ಏಳು ಮಂದಿ ಐಎಫ್‌ಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದು, ಮನೋಜ್ ಕುಮಾರ್ ಅವರನ್ನು ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾಯಿಸಲಾಗಿದೆ.

ಸುಭಾಷ್ ಕೆ.ಮಳಖೇಡ– ಎಪಿಸಿಸಿಎಫ್, ಕಾರ್ಯ ಯೋಜನೆ, ಜಗ್ ಮೋಹನ್ ಶರ್ಮಾ–ಎಪಿಸಿಸಿಎಫ್, ಮಹಾನಿರ್ದೇಶಕ ಇಎಂಪಿಆರ್‌ಐ, ಕುಮಾರ್ ಪುಷ್ಕರ್–ಎಪಿಸಿಸಿಎಫ್, ವನ್ಯಜೀವಿ, ಮನೋಜ್ ಕುಮಾರ್ ತ್ರಿಪಾಠಿ–ಸಿಸಿಎಫ್, ಶಿವಮೊಗ್ಗ ವೃತ್ತ, ಉಪೇಂದ್ರ ಪ್ರತಾಪ್ ಸಿಂಗ್– ಸಿಸಿಎಫ್, ಚಾಮರಾಜನಗರ ವೃತ್ತ, ಆರ್‌. ರವಿಶಂಕರ್– ಸಿಸಿಎಫ್, ಅರಣ್ಯ ಸಂಶೋಧನಾ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ.

ಸುದ್ದಿ 2 ನಿಮಿಷ

ಆಮ್ ಆದ್ಮಿ ಪಕ್ಷಕ್ಕೆ ವಕೀಲ ಜಗದೀಶ್ ಸೇರ್ಪಡೆ

ಬೆಂಗಳೂರು: 'ರಾಜ್ಯದಲ್ಲಿ ಅಭಿವೃದ್ಧಿಪರ ಆಡಳಿತ ನೀಡಲು ವಿಫಲ ಹಾಗೂ ಸದಾ ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜಕೀಯ ಪಕ್ಷಗಳಿಂದ ರಾಜ್ಯವನ್ನು ರಕ್ಷಿಸಲು ಆಮ್ ಆದ್ಮಿ ಪಕ್ಷದ ಅಗತ್ಯವಿದೆ' ಎಂದು ವಕೀಲ ಕೆ.ಎನ್‌.ಜಗದೀಶ್ ಮಹಾದೇವ್ ತಿಳಿಸಿದರು.

ಸೋಮವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಸೇರ್ಪಡೆಯಾದರು.

ಬಳಿಕ ಮಾತನಾಡಿ, 'ಹಲವು ವರ್ಷಗಳಿಂದ ಭ್ರಷ್ಟಾಚಾರದ ವಿರುದ್ಧ ಕಾನೂನಾತ್ಮಕ ಹೋರಾಟ ನಡೆಸುತ್ತಿದ್ದೇನೆ. ಈ ವಿಚಾರವಾಗಿ ರಾಜಕಾರಣಿಗಳನ್ನು ಎದುರು ಹಾಕಿಕೊಂಡು ಮುನ್ನಡೆದಿದ್ದೇನೆ. ಎಎಪಿ ಕೂಡ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿದ್ದು, ಪಕ್ಷಕ್ಕೆ ಸೇರ್ಪಡೆಯಿಂದ ನನ್ನ ಹೋರಾಟ ಹೆಚ್ಚಾಗಲಿದೆ' ಎಂದರು.

ಎಎಪಿ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ, 'ಒಳ್ಳೆಯ ಜನರು ಒಗ್ಗೂಡಿದರೆ ಸಾಮಾನ್ಯರ ಜೀವನದಲ್ಲಿ ಕ್ರಾಂತಿ ಕಾರಿ ಬದಲಾವಣೆ ತರಬಹುದು ಎಂಬುದನ್ನು ದೆಹಲಿ ರಾಜಕೀಯ ನಮಗೆ ತೋರಿಸಿದೆ' ಎಂದರು.



ರಾಷ್ಟ್ರೋತ್ಥಾನ ಪರಿಷತ್‌ನಿಂದ ಐಸಿಯು ಘಟಕ ನಿರ್ಮಾಣ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್, ಯುನಿಸಿಸ್ ಇಂಡಿಯಾ ಸಹಭಾಗಿತ್ವದಲ್ಲಿ ಮಹಾರಾಜ ಅಗ್ರಸೇನ ಆಸ್ಪತ್ರೆಯಲ್ಲಿ 8 ಹಾಸಿಗೆ ಸಾಮರ್ಥ್ಯದ ಐಸಿಯು ಘಟಕ ಸ್ಥಾಪಿಸಿದ್ದು, ಇದನ್ನು ಸೋಮವಾರ ಹಸ್ತಾಂತರಿಸಲಾಯಿತು.

'ಆರೋಗ್ಯಪೂರ್ಣ ಕರ್ನಾಟಕ ನಿರ್ಮಾಣ ಹಾಗೂ ರಾಜ್ಯದಲ್ಲಿ ಕೋವಿಡ್ ಅನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿ ಐಸಿಯು ಘಟಕಗಳನ್ನು ತೆರೆಯಲು ಅನುವಾಗುತ್ತಿದೆ. ಕಳೆದ 4 ತಿಂಗಳಿಂದ ಹಲವು ಕಾರ್ಪೊರೇಟ್ ಕಂಪನಿಗಳು ಹಾಗೂ ನಾಸ್ಕಾಂ ಫೌಂಡೇಷನ್‌ಗಳ ಸಹಯೋಗದಲ್ಲಿ ಒಟ್ಟು 5 ಆಸ್ಪತ್ರೆಗಳಿಗೆ ಅಗತ್ಯ ವೈದ್ಯಕೀಯ ಉಪಕರಣಗಳನ್ನೂ ಒದಗಿಸಲಾಗಿದೆ' ಎಂದು ರಾಷ್ಟ್ರೋತ್ಥಾನ ಪರಿಷತ್‌ನ ಉಪಾಧ್ಯಕ್ಷ ಎ.ಆರ್‌. ದ್ವಾರಕಾನಾಥ್ ತಿಳಿಸಿದರು.

ಯುನಿಸಿಸ್ ಇಂಡಿಯಾ ಸಿಎಸ್‌ಆರ್ ಸಮಿತಿಯ ನಿರ್ದೇಶಕ ಶ್ರೀಕಾಂತ್ ರಾಘವನ್, 'ಕೋವಿಡ್ ಸಮಯದಲ್ಲಿ ಆರೋಗ್ಯ ಕ್ಷೇತ್ರ ಬಲಪಡಿಸುವುದಕ್ಕೆ ನಾವು ಹೆಚ್ಚಿನ ಒತ್ತು ನೀಡಿದ್ದೇವೆ. ಭಾರತೀಯರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಸಲುವಾಗಿ ರಾಷ್ಟ್ರೋತ್ಥಾನ ಪರಿಷತ್ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಜೊತೆಗೂಡಿ ಕೆಲಸ ಮಾಡುತ್ತೇವೆ' ಎಂದರು.

ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ್ ಹೆಗ್ಡೆ, 'ಕೋವಿಡ್ ವಿರುದ್ಧದ ಹೋರಾಟಕ್ಕೆ ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂಬುದು ನಮ್ಮ ಆಶಯ. ಹೀಗಾಗಿ ಪರಿಷತ್ ವತಿಯಿಂದ 150 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಿಸಲು ಮುಂದಾಗಿದ್ದೇವೆ. ಅದಕ್ಕೆ 'ಜಯದೇವ್ ಮೆಮೋರಿಯಲ್ ರಾಷ್ಟ್ರೋತ್ಥಾನ ಆಸ್ಪತ್ರೆ' ಎಂದು ಹೆಸರಿಡಲು ನಿರ್ಧರಿಸಲಾಗಿದೆ' ಎಂದರು. ಸಿಎಸ್‌ಆರ್ ಮುಖ್ಯಸ್ಥ ಸುಮಿತಾ ದತ್, ಅಗರವಾಲ್ ಸೇವಾ ಸಮಿತಿಯ ಮಾಜಿ ಅಧ್ಯಕ್ಷ ಸತೀಶ್ ಜೈನ್, ಹಾಲಿ ಅಧ್ಯಕ್ಷ ರಾಜ ಕುಮಾರ್ ಕಂಡೊಯ್ ಇದ್ದರು.

ಇ–ಕಾಮರ್ಸ್: ವಿಪುಲ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಇ-ಕಾಮರ್ಸ್ ವಲಯ ಇನ್ನೂ ಬೆಳವಣಿಗೆಯ ಹಂತದಲ್ಲಿದ್ದು, ಶೇಕಡ 5ರಷ್ಟು ಮಾತ್ರ ಪಾಲು ಹೊಂದಿದೆ' ಎಂದು ಉಡಾನ್ ಕ್ಯಾಪಿಟಲ್‌ನ ಚೈತನ್ಯ ಅಡಪ ತಿಳಿಸಿದರು.

ನಗರದಲ್ಲಿ ಸೋಮವಾರ ನಡೆದ 'ಉದ್ಯಮಿಯಾಗು– ಉದ್ಯೋಗ ನೀಡು' ಕಾರ್ಯಾಗಾರದಲ್ಲಿ 'ಇ-ಕಾಮರ್ಸ್ ವಲಯದಲ್ಲಿನ ಅವಕಾಶಗಳು' ಕುರಿತು ಮಾತನಾಡಿದ ಅವರು, 'ಶೇ 95ರಷ್ಟು ವಾಣಿಜ್ಯ ವಹಿವಾಟು ಮೊದಲಿನಂತೆಯೇ ನಡೆಯುತ್ತಿದೆ. ಆದ್ದರಿಂದ, ಇ-ಕಾಮರ್ಸ್ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿರುವುದರಿಂದ ಯುವಕರು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಜಾಗತಿಕವಾಗಿಯೂ ಸಹ ಈ ಕ್ಷೇತ್ರ ಇನ್ನೂ ವಿಸ್ತಾರಗೊಂಡಿಲ್ಲ. ಅಮೆರಿಕದಲ್ಲಿ ಶೇ 20, ರಷ್ಯಾ ಮತ್ತು ಬ್ರೆಜಿಲ್‌ನಲ್ಲಿ ಶೇ 10ರಿಂದ 15ರಷ್ಟು ವಹಿವಾಟು ನಡೆಯುತ್ತಿದೆ. ಹೀಗಾಗಿ, ನಿರ್ದಿಷ್ಟ ಯೋಜನೆ ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ಅರಿತುಕೊಂಡು ಹೆಜ್ಜೆ ಇರಿಸಬೇಕು' ಎಂದು ಸಲಹೆ ನೀಡಿದರು.

'ಡಿಜಿಟಲ್ ಮಾರುಕಟ್ಟೆಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳುವುದು ಮತ್ತು ವಿವಿಧ ಕಂಪನಿಗಳ ಸಹಭಾಗಿತ್ವ ಪಡೆದುಕೊಳ್ಳುವುದು ಮುಖ್ಯವಾಗುತ್ತದೆ. ಡಿಜಿಟಲ್ ವ್ಯವಸ್ಥೆಯ ಮೂಲಕವೇ ದೇಶದ ಅರ್ಧದಷ್ಟು ಸ್ಥಳಗಳನ್ನು ಸುಲಭವಾಗಿ ತಲುಪಬಹುದು' ಎಂದು ತಿಳಿಸಿದರು.

'ಭಾರತದ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಮಾಡಲು ಆದ್ಯತೆ ನೀಡಬೇಕಾಗಿದೆ. ಬ್ರ್ಯಾಂಡಿಂಗ್‌ನಲ್ಲಿ ವಿಫಲವಾದರೆ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿಸುವುದು ಕಷ್ಟಸಾಧ್ಯವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಎಲೆಕ್ಟ್ರಿಕ್ ವಾಹನಗಳು ಮತ್ತು ಸುಸ್ಥಿರ ಇಂಧನ ವಲಯದಲ್ಲಿನ ಅವಕಾಶಗಳು ಕುರಿತು ಮಾತನಾಡಿದ ಬೌನ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಹ–ಸಂಸ್ಥಾಪಕ ವಿವೇಕಾನಂದ ಹಳ್ಳೆಕೆರೆ ಅವರು, 'ಯಾವುದೇ ಉದ್ಯಮದಲ್ಲಿ ಯಶಸ್ಸು ಸಾಧಿಸಲು ಆಸಕ್ತಿ ಮತ್ತು ಪರಿಶ್ರಮ ಮುಖ್ಯ' ಎಂದು ಹೇಳಿದರು.

'ಬೌನ್ಸ್‌ನ 25 ಸಾವಿರ ವಾಹನಗಳಿದ್ದು, ಇದುವರೆಗೆ 30 ಕೋಟಿ ಮಂದಿ ವಾಹನಗಳನ್ನು ಚಲಾಯಿಸಿದ್ದಾರೆ. ಉದ್ಯಮಶೀಲರಾಗುವ ಬಯಸುವ ಹತ್ತು ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಮಾರ್ಗದರ್ಶನ ನೀಡಲಾಗುವುದು. ಬೌನ್ಸ್ ವೆಬ್‌ಸೈಟ್ ವೀಕ್ಷಿಸಿ ಹೆಸರು ನೋಂದಾಯಿಸಿಕೊಳ್ಳಬೇಕು' ಎಂದರು.

'ಉದ್ಯಮಿಯಾಗು– ಉದ್ಯೋಗ ನೀಡು' ಕಾರ್ಯಾಗಾರದಲ್ಲಿ ಸಚಿವ ಎಂ.ಟಿ.ಬಿ. ನಾಗರಾಜು

ಪೀಣ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ₹100 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೀಣ್ಯ ಕೈಗಾರಿಕಾ ಪ್ರದೇಶದ ಮೂಲ ಸೌಕರ್ಯಗಳ ಅಭಿವೃದ್ಧಿಗೆ ₹100 ಕೋಟಿ ಮೀಸಲಿಡಲಾಗಿದೆ' ಎಂದು ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳ ಸಚಿವ ಎಂ.ಟಿ.ಬಿ. ನಾಗರಾಜು ತಿಳಿಸಿದರು.

ನಗರದಲ್ಲಿ ಸೋಮವಾರ ನಡೆದ 'ಉದ್ಯಮಿಯಾಗು– ಉದ್ಯೋಗ ನೀಡು' ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪ್ರಸಕ್ತ ವರ್ಷ ಚೆನ್ನೈ– ಬೆಂಗಳೂರು ಮತ್ತು ಬೆಂಗಳೂರು–ಮುಂಬೈ ಕಾರಿಡಾರ್‌ಗಳಲ್ಲಿ ಸರ್ಕಾರ ಮತ್ತು ಖಾಸಗಿ ಕ್ಷೇತ್ರದ ಸಹಭಾಗಿತ್ವದಲ್ಲಿ ಕೈಗಾರಿಕಾ ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ತಿಳಿಸಿದರು.

'ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ₹4 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಿದ್ದು, ಕೈಗಾರಿಕೆ ಬೆಳವಣಿಗೆಯಲ್ಲಿ ದೇಶದಲ್ಲಿಯೇ ಕರ್ನಾಟಕ ಐದನೇ ಸ್ಥಾನದಲ್ಲಿದೆ. ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಎಂಎಸ್‌ಎಂಇ ಉದ್ದಿಮೆಗಳ ಪಾತ್ರ ಬಹಳ ಪ್ರಮುಖವಾಗಿದೆ. ದೇಶದ ಒಟ್ಟು ಆಂತರಿಕ ಉತ್ಪಾದನೆಗೆ (ಜಿಡಿಪಿ) ಎಂಎಸ್‌ಎಂಇ ವಲಯದ ಕೊಡುಗೆ ಶೇಕಡ 40ರಷ್ಟು ಇದೆ' ಎಂದು ವಿವರಿಸಿದರು.

'ರಾಜ್ಯ ಸರ್ಕಾರವು ಹೊಸ ಪೀಳಿಗೆಯ ಉದ್ಯಮಶೀಲರಿಗೆ ಅಗತ್ಯ ನೆರವು ನೀಡಲು ಯೋಜನೆಗಳನ್ನು ರೂಪಿಸಲಾಗಿದೆ. ರಾಜ್ಯದಲ್ಲಿ ಕೈಗಾರಿಕೆ ಕ್ಲಸ್ಟರ್‌ಗಳ ಸ್ಥಾಪನೆಗೆ ಅವಕಾಶವಿದೆ. ಅಗತ್ಯ ಅನುದಾನ ನೀಡಿ ಈಗಾಗಲೇ 11 ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗಿದೆ. ಇನ್ನೂ ಏಳು ಕೈಗಾರಿಕಾ ಕ್ಲಸ್ಟರ್‌ಗಳು ಸ್ಥಾಪನೆಯ ಹಂತದಲ್ಲಿವೆ' ಎಂದು ನಾಗರಾಜು ಅವರು ತಿಳಿಸಿದರು.



ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು –ಪ್ರಜಾವಾಣಿ ಚಿತ್ರ



ಉದ್ಯಮಿಯಾಗಬೇಕು ಎನ್ನುವ ಹಂಬಲ ಇದೆ. ಈ ನಿಟ್ಟಿನಲ್ಲಿ ಕಾರ್ಯಾಗಾರ ಸ್ಫೂರ್ತಿಯಾಯಿತು. ಯಾವ ರೀತಿ ಹೆಜ್ಜೆ ಇರಿಸಬೇಕು ಎನ್ನುವ ಬಗ್ಗೆ ತಿಳಿಯಿತು
ಸೃಜನಾ, ವಿದ್ಯಾರ್ಥಿನಿ, ಬಿಎಂಎಸ್ ಕಾಲೇಜು



ಕಾರ್ಯಾಗಾರದಲ್ಲಿ ಉದ್ಯಮಗಳ ಬಗ್ಗೆ ಮಾಹಿತಿ ತಿಳಿಯಿತು. ನವೋದ್ಯಮಗಳಲ್ಲಿನ ಅವಕಾಶಗಳು ಮತ್ತು ಯಾವ ರೀತಿ ಆರಂಭಿಸಬೇಕು ಎನ್ನುವ ಮಾಹಿತಿ ಲಭ್ಯವಾಯಿತು
ಹಿತೇಶ್ ಕುಮಾರ್
ಕೆಎಲ್‌ಇ ಕಾಲೇಜು ವಿದ್ಯಾರ್ಥಿ, ನಾಗರಬಾವಿ



ಉದ್ಯೋಗ ಹುಡುಕುವ ಹೋಗುವ ಬದಲು ನಾವೇ ಉದ್ಯಮಿಗಳಾಗಬಹುದು ಹಾಗೂ ಸರ್ಕಾರದ ಯೋಜನೆಗಳನ್ನು ಯಾವ ರೀತಿ ಸದುಪಯೋಗ ಪಡಿಸಿಕೊಳ್ಳಬಹುದು ಎಂದು ತಿಳಿಯಿತು
ಮಂಜುನಾಥ್
ವಿದ್ಯಾರ್ಥಿ, ಬಿಎಂಎಸ್ ಕಾಲೇಜು



ಕಾರ್ಯಾಗಾರಕ್ಕೆ ಉದ್ಯಮಗಳ ಬಗ್ಗೆ ಹೆಚ್ಚು ಆಸಕ್ತಿ ಇರುವವರನ್ನು ಮಾತ್ರ ಕರೆಯಿಸಬೇಕಾಗಿತ್ತು. ಉದ್ಯಮಗಳ ಸ್ಥಾಪನೆ, ಯೋಜನೆಗಳ ಬಗ್ಗೆ ಇನ್ನೂ ಹೆಚ್ಚಿನ ಸಮಯ ನೀಡ ಬೇಕಾಗಿತ್ತು.
ಕಿಶೋರ್ ಕುಮಾರ್, ಸಿಬಿಐಟಿ ಎಂಜಿನಿಯರಿಂಗ್ ಕಾಲೇಜು, ಕೋಲಾರ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ ಕಲ್ಲಿದ್ದಲು ಕೊರತೆ ಕೋಲಾಹಲ

ರಾಜ್ಯದಲ್ಲೂ ₹ 100 ದಾಟಿದ ಡೀಸೆಲ್ 10

ಬಾಂಡ್: ಪ್ರಾದೇಶಿಕ ಪಕ್ಷಗಳಿಗೆ ₹447 ಕೋಟಿ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,135 ▲	17,945 ▲	₹48,560 (ಬೆಂಗಳೂರು)	₹63,200 (ಬೆಂಗಳೂರು)	75.36 ▼

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲಖಿಂಪುರ–ಖೇರಿ: ವಕೀಲರ ಸಮ್ಮುಖದಲ್ಲೇ ಆರೋಪಿ ವಿಚಾರಣೆಯ ಷರತ್ತು

ಆಶಿಶ್ 3 ದಿನ ಪೊಲೀಸ್ ವಶಕ್ಕೆ

ಲಖಿಂಪುರ-ಖೇರಿ/ಬಹರೈಚ್ (ಪಿಟಿಐ): ಲಖಿಂಪುರ-ಖೇರಿಯಲ್ಲಿ ರೈತರ ಮೇಲೆ ಎಸ್‌ಯುವಿ ಹರಿಸಿದ ಪ್ರಕರಣದ ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರನ್ನು ಮೂರು ದಿನ ಪೊಲೀಸ್ ವಶಕ್ಕೆ ಸೋಮವಾರ ಒಪ್ಪಿಸಲಾಗಿದೆ. ಇದೇ 3ರಂದು ನಡೆದ ಪ್ರಕರಣದಲ್ಲಿ ನಾಲ್ವರು ರೈತರು ಸೇರಿ ಎಂಟು ಮಂದಿ ಮೃತಪಟ್ಟಿದ್ದರು.

'ಆಶಿಶ್ ಅವರನ್ನು 14 ದಿನ ವಶಕ್ಕೆ ಕೊಡುವಂತೆ ಪೊಲೀಸರು ಕೇಳಿದ್ದರು. ಆದರೆ, ಮಂಗಳವಾರದಿಂದ ಶುಕ್ರವಾರದ ವರೆಗೆ ಮಾತ್ರ ವಶಕ್ಕೆ ಕೊಡಲಾಗಿದೆ' ಎಂದು ತನಿಖಾಧಿಕಾರಿ ಎಸ್.ಪಿ. ಯಾದವ್ ತಿಳಿಸಿದ್ದಾರೆ.

ಆಶಿಶ್ ಅವರಿಗೆ ಕಿರುಕುಳ ನೀಡಬಾರದು ಮತ್ತು ಅವರ ವಕೀಲರ ಉಪಸ್ಥಿತಿಯಲ್ಲಿಯೇ ತನಿಖೆ ನಡೆಸಬೇಕು ಎಂಬ ಷರತ್ತನ್ನು ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಹಾಕಿದೆ. ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಭಾನುವಾರ ಒಪ್ಪಿಸಲಾಗಿತ್ತು.

ಶನಿವಾರ ಸುಮಾರು 12 ತಾಸು ವಿಚಾರಣೆಯ ಬಳಿಕ ಆಶಿಶ್ ಅವರನ್ನು ಬಂಧಿಸಲಾಗಿತ್ತು. ರೈತರ ಮೇಲೆ ಹರಿಸಿದ ಎಸ್‌ಯುವಿಯನ್ನು ಆಶಿಶ್ ಅವರೇ ಚಾಲನೆ ಮಾಡುತ್ತಿದ್ದರು ಎಂದು ರೈತರು ಆರೋಪಿಸಿದ್ದಾರೆ. ಆದರೆ, ಈ ಆರೋಪವನ್ನು ಅಜಯ್ ಮಿಶ್ರಾ ಮತ್ತು ಆಶಿಶ್ ಅಲ್ಲಗಳೆದಿದ್ದಾರೆ. ಆರೋಪಿಗಳನ್ನು ಇನ್ನೂ ಏಕೆ ಬಂಧಿಸಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಅಸಮಾಧಾನ ವ್ಯಕ್ತಪಡಿಸಿತ್ತು.

ರಾಜಕಾರಣಿಗಳಿಗಿಲ್ಲ ಸ್ಥಾನ: ಎಸ್‌ಯುವಿ ಹರಿದು ಮೃತಪಟ್ಟ ನಾಲ್ವರು ರೈತರಿಗೆ ಅಂತಿಮ ನಮನ ಸಲ್ಲಿಸಲು ಸಂಯುಕ್ತ ಕಿಸಾನ್ ಮೋರ್ಚಾ ಹಮ್ಮಿಕೊಂಡಿರುವ ಕಾರ್ಯಕ್ರಮದ ವೇದಿಕೆಯಲ್ಲಿ ರಾಜಕಾರಣಿಗಳಿಗೆ ಅವಕಾಶ ನೀಡುವುದಿಲ್ಲ ಎಂದು ಭಾರತೀಯ ಕಿಸಾನ್ ಯೂನಿಯನ್ ಪದಾಧಿಕಾರಿಗಳು ತಿಳಿಸಿದ್ದಾರೆ.



ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸೋಮವಾರ ಲಖನೌನಲ್ಲಿ ಮೌನವ್ರತ ನಡೆಸಿದರು – ಪಿಟಿಐ ಚಿತ್ರ

ಕೇಂದ್ರ ಸಚಿವ ಅಜಯ್ ಮಿಶ್ರಾ ವಜಾಕ್ಕೆ 'ಮೌನವ್ರತ'

ಲಖನೌ (ಪಿಟಿಐ): ಆಶಿಶ್ ತಂದೆ, ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ಸೋಮವಾರ ಮೌನವ್ರತ ನಡೆಸಿದ್ದಾರೆ.

ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರು ಹಾಗೂ ಇತರರು ಜಿಪಿಒ ಪಾರ್ಕ್‌ನಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯ ಎದುರು ಧರಣಿ ನಡೆಸಿದರು.

ಮೌನವ್ರತಕ್ಕೆ ಪ್ರತಿಕ್ರಿಯೆ ನೀಡಿರುವ ಉತ್ತರ ಪ್ರದೇಶದ ಸಚಿವ ಸಿದ್ಧಾರ್ಥನಾಥ್ ಸಿಂಗ್ ಅವರು, ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ. ಕಾನೂನು ಪ್ರಕಾರವೇ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ. ಮೌನವ್ರತ ಅಥವಾ ಪ್ರತಿಭಟನೆ ನಡೆಸುವುದು ಕಾಂಗ್ರೆಸ್ ನಾಯಕರ ಪ್ರಜಾಸತ್ತಾತ್ಮಕ ಹಕ್ಕು ಎಂದಿದ್ದಾರೆ.

ರಾಜಸ್ಥಾನ ಮತ್ತು ಛತ್ತೀಸಗಡದಲ್ಲಿ ದಲಿತರು ಮತ್ತು ರೈತರ ಮೇಲೆ ನಡೆದ ದೌರ್ಜನ್ಯದ ವಿರುದ್ಧ ಕಾಂಗ್ರೆಸ್ಸಿಗರು ಏಕೆ ಪ್ರತಿಭಟನೆ ನಡೆಸಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಲೇವಡಿ ಮಾಡಿರುವ ಉತ್ತರ ಪ್ರದೇಶ ಸರ್ಕಾರದ ವಕ್ತಾರ, ಈ ದೇಶದಲ್ಲಿ 10 ವರ್ಷ ಮೌನವ್ರತ ಆಚರಿಸಿದ ಪ್ರಧಾನಿ ಇದ್ದರು ಎಂದಿದ್ದಾರೆ.

ದೆಹಲಿ, ಹರಿಯಾಣ, ಪಂಜಾಬ್, ಗೋವಾ ಸೇರಿದಂತೆ ದೇಶದ ಎಲ್ಲೆಡೆಯೂ ಕಾಂಗ್ರೆಸ್ ಮುಖಂಡರು ಮೌನವ್ರತ ನಡೆಸಿದ್ದಾರೆ.

ತಿಕೋನಿಯ ಗ್ರಾಮದಲ್ಲಿ ಹಿಂಸಾಚಾರ ನಡೆದ ಸ್ಥಳದ ಸಮೀಪದಲ್ಲಿಯೇ ಅಂತಿಮ ನಮನ ಕಾರ್ಯಕ್ರಮ ನಡೆಯಲಿದೆ. ಅದರ ಸಿದ್ಧತೆಗಳು ನಡೆಯುತ್ತಿವೆ. ಕಾರ್ಯಕ್ರಮದ ವೇದಿಕೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ ನಾಯಕರು ಮಾತ್ರ ಇರಲಿದ್ದಾರೆ ಎಂದು ಬಿಕೆಯು ಜಿಲ್ಲಾ ಅಧ್ಯಕ್ಷ ಅಮನ್‌ದೀಪ್ ಸಿಂಗ್ ಸಂಧು ತಿಳಿಸಿದ್ದಾರೆ.

ರೈತ ನಾಯಕ ರಾಕೇಶ್ ಟಿಕಾಯತ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾಧ್ಯತೆ ಇದೆ.

ಮಹಾರಾಷ್ಟ್ರ ಬಂದ್ 09

ಪರಸ್ಪರ ದೂಷಣೆ: ಮುಗಿದ ಸಭೆ

ಭಾರತ –ಚೀನಾ ಸೇನಾ ಮಾತುಕತೆಯಲ್ಲಿ ಸಿಗದ ಪರಿಹಾರ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿ 17 ತಿಂಗಳಿಂದ ತಲೆದೋರಿರುವ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಭಾನುವಾರ ನಡೆದ ಭಾರತ-ಚೀನಾ ನಡುವಿನ 13ನೇ ಸುತ್ತಿನ ಸೇನಾ ಮಾತುಕತೆ ವಿಫಲವಾಗಿದೆ. ಪರಸ್ಪರ ದೂಷಣೆಯಲ್ಲಿ ಸಭೆ ಮುಗಿದಿದೆ ಎಂದು ತಿಳಿದುಬಂದಿದೆ.

ಇತ್ತೀಚಿನ ಸೇನಾ ಮಾತುಕತೆಯಲ್ಲಿ ಭಾರತೀಯ ಸೇನೆ ಪ್ರಸ್ತಾಪಿಸಿದ್ದ ರಚನಾತ್ಮಕ ಸಲಹೆಗಳು ಚೀನಾಕ್ಕೆ ಒಪ್ಪಿತವಾಗಿಲ್ಲ ಅಥವಾ ಈ ಸಂಬಂಧ ಯಾವುದೇ ಆಶಾದಾಯಕ ಸೂಚನೆಯನ್ನು ಚೀನಾ ನೀಡಿಲ್ಲ ಎಂದು ಭಾರತ ಸೇನೆ ಹೇಳಿದೆ.

ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಉಂಟಾದ ಪರಿಸ್ಥಿತಿಗೆ ಚೀನಾದ ಏಕಪಕ್ಷೀಯ ಪ್ರಯತ್ನ ಕಾರಣ ಎಂದಿರುವ ಸೇನೆ, ಈ ಪ್ರದೇಶದಲ್ಲಿ ಶಾಂತಿ ಮರುಸ್ಥಾಪಿಸಲು ಚೀನಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ ಎಂದು ಪ್ರಬಲವಾಗಿ ಪ್ರತಿಪಾದಿಸಿದೆ.

ಪೂರ್ವ ಲಡಾಖ್‌ನ ಗಡಿ ವಿವಾದಗಳಿಗೆ ಪರಿಹಾರ ಕಂಡುಕೊಳ್ಳಲು ಚೀನಾದ ವರ್ತನೆಯಿಂದಾಗಿ ಸಾಧ್ಯವಾಗಿಲ್ಲ ಎಂದು ಎಂಟೂವರೆ ಗಂಟೆಗಳ ಕಾಲ ನಡೆದ ಮಾತುಕತೆಯ ಕುರಿತು ಸೇನೆ ಹೇಳಿಕೆ ನೀಡಿದೆ.

ಗಸ್ತು ಪಾಯಿಂಟ್ 15ರಲ್ಲಿ (ಪಿಪಿ 15) ಸ್ಥಗಿತಗೊಂಡಿರುವ ಸೇನಾ ವಾಪಸಾತಿ ಹಾಗೂ ಡೆಪ್‌ಸಾಂಗ್ ಪ್ಲೇನ್ಸ್ ಮತ್ತು ಡೆಮ್‌ಚಾಕ್‌ನಲ್ಲಿನ ಸಮಸ್ಯೆಗಳ ಬಗ್ಗೆ ಭಾರತದ ಕಡೆಯವರು ಪ್ರಸ್ತಾಪಿಸಿದ್ದಾರೆ ಎಂದು ತಿಳಿದುಬಂದಿದೆ.

ಪ್ರಾಮಾಣಿಕ ಪ್ರಯತ್ನ: ಚೀನಾ

ಭಾರತವು ಅಸಮಂಜಸ ಮತ್ತು ಅವಾಸ್ತವಿಕ ಬೇಡಿಕೆಗಳನ್ನು ಮುಂದಿರಿಸುತ್ತಿದ್ದು, ಮಾತುಕತೆಯಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ ಎಂದು ಚೀನಾ ಆರೋಪಿಸಿದೆ. ಗಡಿ ಪರಿಸ್ಥಿತಿಯನ್ನು ತಿಳಿಗೊಳಿಸಲು ತನ್ನ ಕಡೆಯಿಂದ ಪ್ರಾಮಾಣಿಕ ಯತ್ನ ಆಗುತ್ತಿದೆ ಎಂದು ಪ್ರತಿಪಾದಿಸಿದೆ.

ಚೀನಾ ನಿಯೋಗವು ಪೂರ್ವ ನಿರ್ಧರಿತ ಮನಸ್ಥಿತಿಯಲ್ಲಿ ಸಭೆಗೆ ಬಂದಿತ್ತು. ತನ್ನ ನಿಲುವು ಸಡಿಲಿಸಲು ಅದು ಸಿದ್ಧವಿರಲಿಲ್ಲ ಎಂದು ಮಾತುಕತೆಯನ್ನು ಹತ್ತಿರದಿಂದ ಗಮನಿಸಿದವರು ಮಾಹಿತಿ ನೀಡಿದ್ದಾರೆ. ಪೂರ್ವ ಲಡಾಖ್‌ನಲ್ಲಿ ಚೀನಾ ಬದಿಯ ಚುಶುಲ್-ಮೊಲ್ಡೊ ಗಡಿಕೇಂದ್ರದಲ್ಲಿ ಮಾತುಕತೆ ನಡೆಯಿತು.

ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆಯ ಫಲಿತಾಂಶ ಪ್ರಕಟ

ಶುಲ್ಕ ಕಟ್ಟಲಾಗದೇ ಪರಿತಪಿಸಿದ್ದ ಗ್ರೀಷ್ಮಾ ರಾಜ್ಯಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ತಂದಿತ್ತ ಆರ್ಥಿಕ ಸಂಕಷ್ಟದಿಂದಾಗಿ ಶುಲ್ಕ ಕಟ್ಟಲಾಗದೆ ಪರೀಕ್ಷೆಯಿಂದ ವಂಚಿತಳಾಗಿದ್ದ ಮೂಡಬಿದಿರೆಯ ಆಳ್ವಾಸ್ ಶಾಲೆಯ ವಿದ್ಯಾರ್ಥಿನಿ ಗ್ರೀಷ್ಮಾ 2020-21ನೇ ಸಾಲಿನ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾಳೆ.

ತುಮಕೂರು ಜಿಲ್ಲೆ ಕೊರಟಗೆರೆ ನಿವಾಸಿಯಾಗಿರುವ ಗ್ರೀಷ್ಮಾ 625ಕ್ಕೆ 599 ಅಂಕ ಗಳಿಸಿ ಈ ಸಾಧನೆ ಮಾಡಿದ್ದಾಳೆ.

ಬಡ ಕುಟುಂಬದ ಗ್ರೀಷ್ಮಾಗೆ ಕೋವಿಡ್ ಲಾಕ್‌ಡೌನ್‌ನಿಂದಾಗಿ ಎಸ್ಸೆಸ್ಸೆಲ್ಸಿ ಶುಲ್ಕ ಪಾವತಿಸಿ ಪ್ರವೇಶ ಪಡೆಯಲು ಆಗಿರಲಿಲ್ಲ. ಪರೀಕ್ಷಾ ಶುಲ್ಕ ಕೂಡ ಕಟ್ಟಿರಲಿಲ್ಲ. ಹೀಗಾಗಿ ಜುಲೈ 19 ಹಾಗೂ 22ರಂದು ನಡೆದಿದ್ದ ಪರೀಕ್ಷೆಗೆ ಹಾಜರಾಗಲು ಅವಕಾಶ ನಿರಾಕರಿಸಲಾಗಿತ್ತು. ಇದರಿಂದ ಮನನೊಂದು ಆತ್ಮಹತ್ಯೆಗೂ ಮುಂದಾಗಿದ್ದಳು ಎನ್ನಲಾಗಿತ್ತು. ಈ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿತ್ತು.



ಗ್ರೀಷ್ಮಾ

ಇದನ್ನು ಗಮನಿಸಿದ್ದ ಆಗಿನ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಅವರು ಬಾಲಕಿಯ ಮನೆಗೆ ಭೇಟಿ ನೀಡಿ ಸಮಸ್ಯೆ ಆಲಿಸಿದ್ದರು. ಆಕೆಗೆ ಧೈರ್ಯ ಹೇಳುವ ಜೊತೆಗೆ ಪೂರಕ ಪರೀಕ್ಷೆ ಬರೆಯಲೂ ಅವಕಾಶ ಮಾಡಿಕೊಟ್ಟಿದ್ದರು.

ಬಾಲಕಿಯ ಸಾಧನೆಗೆ ಸುರೇಶ್‌ಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ. 'ಗ್ರೀಷ್ಮಾ, ನೀನು ಛಲ ಬಿಡಲಿಲ್ಲ. ನಮ್ಮ ನಂಬಿಕೆ ಹುಸಿಗೊಳಿಸಲಿಲ್ಲ. ನಿನ್ನ ಸಾಧನೆಯಿಂದ ಮನಸ್ಸು ಹಗುರಾಗಿದೆ. ನಿನಗೆ ಅಭಿನಂದನೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

8ನೇ ಪುಟ ನೋಡಿ

'ಕಲ್ಲಿದ್ದಲು ಕೊರತೆ ಎರಡು ದಿನಗಳಲ್ಲಿ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉಂಟಾಗಿರುವ ಕಲ್ಲಿದ್ದಲು ಕೊರತೆಯ ಸಮಸ್ಯೆ ಎರಡು ದಿನಗಳಲ್ಲಿ ಪರಿಹಾರವಾಗಲಿದೆ ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದರು.

ಕೆಪಿಟಿಸಿಎಲ್ ಕಚೇರಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಕಿರಿಯ ಪವರ್ ಮ್ಯಾನ್‌ಗಳಿಗೆ ನೇಮಕಾತಿ ಪತ್ರ ವಿತರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಡಿಶಾದ ಮಹಾನದಿ ಗಣಿಯಿಂದ ಕಲ್ಲಿದ್ದಲು ತುಂಬಿಕೊಂಡು ಹೊರಟಿರುವ ಒಂದು ರೇಕ್ ಮಂಗಳವಾರ ರಾಜ್ಯಕ್ಕೆ ತಲುಪಲಿದೆ. ಮತ್ತೊಂದು ರೇಕ್ ಬುಧವಾರ ಬರಲಿದೆ. ಇದರಿಂದ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದರು.

ಸದ್ಯ ಹತ್ತು ರೇಕ್ ಕಲ್ಲಿದ್ದಲು ಪೂರೈಕೆ ಆಗುತ್ತಿತ್ತು. ಅದನ್ನು 14 ರೇಕ್‌ಗಳಿಗೆ ಹೆಚ್ಚಿಸಲು ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ ಅವರಿಗೆ ಮನವಿ ಮಾಡಲಾಗಿದೆ. ಎರಡು ರೇಕ್ ತಕ್ಷಣ ಬರಲಿದ್ದು, ಇನ್ನೆರಡು ರೇಕ್‌ಗಳನ್ನು ನವೆಂಬರ್ ತಿಂಗಳಲ್ಲಿ ನೀಡುವಂತೆ ಮನವಿ ಮಾಡಲಾಗಿದೆ ಎಂದರು.

ಕಲ್ಲಿದ್ದಲು ಕೊರತೆಯಿಂದ ಸಮಸ್ಯೆ ಆಗಬಹುದು ಎಂಬ ಆತಂಕವಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ದೆಹಲಿಗೆ ತೆರಳಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರ ತ್ವರಿತವಾಗಿ ಸ್ಪಂದಿಸಿದೆ ಎಂದರು.

ಕೆಲವು ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದನೆಯ ಅವಧಿಯನ್ನು ತುಸು ಕಡಿಮೆ ಮಾಡಲಾಗಿತ್ತು. ಯಾವುದೇ ಉಷ್ಣ ವಿದ್ಯುತ್ ಸ್ಥಾವರದಲ್ಲೂ ಉತ್ಪಾದನೆ ಸಂಪೂರ್ಣ ಸ್ಥಗಿತವಾಗಿರಲಿಲ್ಲ ಎಂದು ಅವರು ತಿಳಿಸಿದರು.

ಮಹಾರಾಷ್ಟ್ರದ ಮಂದಾಕಿನಿ ಮತ್ತು ಬಾರಂಜಿಯಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಿರುವ ಕಲ್ಲಿದ್ದಲು ಗಣಿಗಳಲ್ಲಿ ಉತ್ಪಾದನೆ ಆರಂಭಿಸಲು ಅರಣ್ಯ ಇಲಾಖೆಯ ಅನುಮತಿ ಬೇಕಿದೆ. ಅದನ್ನು ಕೊಡಿಸುವಂತೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಭೂಪೇಂದ್ರ ಯಾದವ್ ಅವರಿಗೆ ಮನವಿ ಮಾಡಲಾಗಿದೆ. ಅನುಮತಿ ದೊರೆತರೆ ಕಲ್ಲಿದ್ದಲು ತೆಗೆಯಲು ಅಗತ್ಯವಿರುವ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಲಿದೆ ಎಂದು ಸುನೀಲ್ ಕುಮಾರ್ ತಿಳಿಸಿದರು.

21 ಮಂದಿಗೆ ನೇಮಕಾತಿ ಪತ್ರ



ಸುನೀಲ್ ಕುಮಾರ್

ಕಿರಿಯ ಪವರ್ ಮ್ಯಾನ್ ಮತ್ತು ಸ್ಟೇಷನ್ ಪರಿಚಾರಕ ವೃಂದದ 1,899 ಹುದ್ದೆಗಳ ಭರ್ತಿಗೆ ಪ್ರಕ್ರಿಯೆ ಆರಂಭಿಸಲಾಗಿತ್ತು. ಈ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 21 ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಆಯ್ಕೆಯಾಗಿರುವ 21 ಮಂದಿಗೆ ಇಂಧನ ಸಚಿವ ವಿ. ಸುನೀಲ್ ಕುಮಾರ್ ಅವರು ನೇಮಕಾತಿ ಆದೇಶದ ಪತ್ರಗಳನ್ನು ವಿತರಿಸಿದರು.

ಎರಡು ಪ್ರಕರಣಗಳಲ್ಲಿ ನ್ಯಾಯಾಲಯ ಮತ್ತು ಕ್ರಿಮಿನಲ್ ಪ್ರಕರಣಗಳ ತೊಡಕಿದೆ. ಉಳಿದ ಹುದ್ದೆಗಳ ಭರ್ತಿಗೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು ಎಂದು ಸಚಿವರು ತಿಳಿಸಿದರು.

ಕಲ್ಲಿದ್ದಲು: ಉತ್ಪಾದನೆ ಹೆಚ್ಚಳಕ್ಕೆ ಶಾ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂಧನ ಸಚಿವ ಆರ್.ಕೆ.ಸಿಂಗ್ ಮತ್ತು ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಷಿ ಅವರ ಜತೆ ದೇಶದಲ್ಲಿನ ಕಲ್ಲಿದ್ದಲು ಕೊರತೆ ಸಂಬಂಧ ಸೋಮವಾರ ಸಭೆ ನಡೆಸಿದ್ದಾರೆ.

ಪಂಜಾಬ್, ದೆಹಲಿ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಕಲ್ಲಿದ್ದಲು ಪೂರೈಕೆ ಹೆಚ್ಚಿಸುವಂತೆ ಮತ್ತೆ ಮನವಿ ಮಾಡಿಕೊಂಡಿವೆ. ಇದರ ಬೆನ್ನಲ್ಲೇ ಶಾ ಅವರು ಸಭೆ ನಡೆಸಿದ್ದಾರೆ.

ದೇಶದಲ್ಲಿನ ಕಲ್ಲಿದ್ದಲಿನ ಸಂಗ್ರಹ, ಪ್ರತಿನಿತ್ಯ ಕಲ್ಲಿದ್ದಲಿಗೆ ಇರುವ ಬೇಡಿಕೆ, ಪ್ರತಿದಿನ ವಿದ್ಯುತ್‌ಗೆ ಇರುವ ಬೇಡಿಕೆ ಬಗ್ಗೆ ಅವರು ಇಬ್ಬರೂ ಸಚಿವರಿಂದ ಮಾಹಿತಿ ಪಡೆದಿದ್ದಾರೆ.

ಕಲ್ಲಿದ್ದಲಿನ ಉತ್ಪಾದನೆಯನ್ನು ಶೀಘ್ರವೇ ಹೆಚ್ಚಿಸಿ ಎಂದು ಶಾ ಅವರು ಕಲ್ಲಿದ್ದಲು ಸಚಿವರಿಗೆ ಸೂಚನೆ ನೀಡಿದ್ದಾರೆ. ದೇಶದಲ್ಲಿ ಜಲವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಿ, ಆ ಮೂಲಕ ಕಲ್ಲಿದ್ದಲಿನ ಮೇಲಿನ ಅವಲಂಬನೆಯನ್ನು ತಗ್ಗಿಸಿ ಎಂದು ಇಂಧನ ಸಚಿವರಿಗೆ ಸೂಚನೆ ನೀಡಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಕಾಶ್ಮೀರದಲ್ಲಿ ಹಿಂದೆ ಸಕ್ರಿಯರಾಗಿದ್ದ ಉಗ್ರರ ನುಸುಳಿಸಲು ಯತ್ನ

ಉಗ್ರ ಸಂಘಟನೆ: ಪಾಕ್‌ನವರ ನಾಯಕತ್ವ?

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಣಿವೆ ರಾಜ್ಯದ ಗಡಿಯುದ್ದಕ್ಕೂ ಭಯೋತ್ಪಾದನಾ ಚಟುವಟಿಕೆಗಳ ಉಸ್ತುವಾರಿಗೆ ನಾಯಕತ್ವದ ಕೊರತೆ ನೀಗಿಸಲು ಪಾಕ್‌ನ ಹಿರಿಯ ಭಯೋತ್ಪಾದಕನನ್ನು ಕಳುಹಿಸಲು ಸಿದ್ಧತೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

ಜಮ್ಮು ಮತ್ತು ಕಾಶ್ಮೀರದ ಗಡಿಭಾಗದಲ್ಲಿ ಸಕ್ರಿಯವಾಗಿದ್ದ ಲಷ್ಕರ್–ಇ–ತೊಯಬಾ, ಜೈಷ್ –ಇ– ಮೊಹಮ್ಮದ್, ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆಗಳ ನಾಯಕತ್ವವನ್ನು ಭದ್ರತಾ ಪಡೆಗಳು ಇತ್ತೀಚಿನ ವರ್ಷಗಳಲ್ಲಿ ನಿರ್ಮೂಲನೆ ಮಾಡಿದ್ದವು.

ಮೂಲಗಳ ಪ್ರಕಾರ, 30 ವರ್ಷ ಆಸುಪಾಸಿನಲ್ಲಿರುವ, ಈ ಹಿಂದೆ ಕಣಿವೆ ರಾಜ್ಯದ ಕಾರ್ಯಚಟುವಟಿಕೆಯಲ್ಲಿ ಭಾಗಿಯಾಗಿದ್ದ ಪಾಕಿಸ್ತಾನದ ಉಗ್ರರನ್ನು, ಸಂಘಟನೆಗಳ ನಾಯಕತ್ವವನ್ನು ವಹಿಸಿಕೊಳ್ಳಲು ಕಳುಹಿಸಲಾಗುತ್ತಿದೆ.

'ಭೋಟಾ ವಲೀದ್' ಎಂಬ ಅಡ್ಡಹೆಸರುಳ್ಳ ಪಾಕಿಸ್ತಾನದ ಉಗ್ರ ಈ ಪೈಕಿ ಒಬ್ಬ ಎಂದು ಹೇಳಲಾಗಿದೆ. ಈತ ಶ್ರೀನಗರದಲ್ಲಿ ಕಳೆದ ವಾರ ಅಲ್ಪಸಂಖ್ಯಾತ ಸಮುದಾಯದವರ ಮೇಲೆ ನಡೆದಿದ್ದ ದಾಳಿ ಕೃತ್ಯದ ಸೂತ್ರಧಾರಿಯಾಗಿದ್ದ ಎಂದೂ ಹೇಳಲಾಗಿದೆ.



'ಭೋಟಾ ವಲೀದ್' ಕಳೆದ ತಿಂಗಳಷ್ಟೇ ಕಾಶ್ಮೀರಕ್ಕೆ ನುಸುಳಿದ್ದಾನೆ. ಈತನಲ್ಲದೇ, ಇನ್ನೂ ಕೆಲ ಪಾಕ್ ಉಗ್ರರು ಕಣಿವೆ ರಾಜ್ಯಕ್ಕೆ ಈಚಿನ ದಿನಗಳಲ್ಲಿ ನುಸುಳಿದ್ದು, ಉತ್ತರ ಕಾಶ್ಮೀರದ ಅರಣ್ಯ ಭಾಗದಲ್ಲಿ ಅಡಗಿಕೊಂಡಿರಬಹುದು' ಎಂದು ಮೂಲಗಳು ವಿವರಿಸಿವೆ.

ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ, 'ಭೋಟಾ ವಲೀದ್ ಮತ್ತು ಇತರೆ ಕೆಲ ಪಾಕಿಸ್ತಾನದ ಉಗ್ರರು ಸಕ್ರಿಯರಾಗಿದ್ದು, ಈಗಾಗಲೇ ಕೆಲ ದಾಳಿಯನ್ನು ನಡೆಸಿದ್ದಾರೆ. ಈಗ ಸ್ಥಳೀಯವಾಗಿ ಸಕ್ರಿಯರಾಗಿರುವ ಉಗ್ರರಲ್ಲಿ ಯಾರೊಬ್ಬರೂ ಬುರಾನ್ ವಾನಿ, ಸಬ್ಜರ್ ಭಟ್, ರಿಯಾಜ್ ನೈಕೂ, ಅಬ್ಬಾಸ್ ಶೇಖ್‌ರಂತೆ 'ಹೆಸರಾಗಿಲ್ಲ'. ಕಾಶ್ಮೀರದಲ್ಲಿ ಚಟುವಟಿಕೆ ನಡೆಸಿದ ಅನುಭವವುಳ್ಳ ಪಾಕಿಸ್ತಾನದ ಉಗ್ರರು ಈಗ ನಾಯಕತ್ವ ವಹಿಸಿಕೊಳ್ಳುತ್ತಿರುವುದು ಅಪಾಯಕಾರಿ ಮುನ್ಸೂಚನೆಯಾಗಿದೆ' ಎಂದರು.

ಮಾಧ್ಯಮ ವರದಿಗಳ ಪ್ರಕಾರ, ಕಳೆದ ಎರಡು ತಿಂಗಳಲ್ಲಿ ಪಾಕ್ ಆಕ್ರಮಿತ ಕಾಶ್ಮೀರ ಭಾಗದಿಂದ ಉಗ್ರರ 4–5 ಸಂಘಟನೆಗಳು ಗಡಿಯೊಳಗೆ ನುಸುಳಿವೆ. ಪ್ರತಿ ತಂಡದಲ್ಲಿ ನಾಲ್ಕರಿಂದ ಆರು ಮಂದಿ ಉಗ್ರಗಾಮಿಗಳಿದ್ದಾರೆ.

ಉಗ್ರರ ದಾಳಿ: 5 ಯೋಧರು ಹುತಾತ್ಮ

ಜಮ್ಮು: ಭದ್ರತಾ ಸಿಬ್ಬಂದಿ ಮತ್ತು ಗಡಿ ದಾಟಿ ಒಳನುಸುಳಿದ್ದ ಶಸ್ತ್ರಸಜ್ಜಿತ ಉಗ್ರರ ನಡುವೆ ಸೋಮವಾರ ಬೆಳಿಗ್ಗೆ ನಡೆದ ತೀವ್ರ ಗುಂಡಿನ ಚಕಮಕಿಯಲ್ಲಿ ಕಿರಿಯ ಅಧಿಕಾರಿ ಸೇರಿದಂತೆ ಐವರು ಯೋಧರು ಹುತಾತ್ಮರಾಗಿದ್ದಾರೆ.

ಈ ವರ್ಷ ಯೋಧರು ಮೃತಪಟ್ಟ ಗಂಭೀರ ಸ್ವರೂಪದ ದಾಳಿ ಪ್ರಕರಣ ಇದಾಗಿದೆ. ಉಗ್ರರು ಇರುವ ಖಚಿತ ಮಾಹಿತಿಯನ್ನು ಆಧರಿಸಿ ಪೂಂಚ್ ಜಿಲ್ಲೆಯ ಗಡಿ ಗ್ರಾಮವೊಂದರಲ್ಲಿ ಶೋಧ ಕಾರ್ಯ ಕೈಗೊಂಡಿದ್ದ ಭದ್ರತಾ ಸಿಬ್ಬಂದಿ ಮೇಲೆ ದಾಳಿ ನಡೆದಿದೆ.

ಸೇನಾ ವಕ್ತಾರರ ಪ್ರಕಾರ, ಉಗ್ರರು ತೀವ್ರ ಗುಂಡಿನ ದಾಳಿ ನಡೆಸಿದ್ದರು. ಕಿರಿಯ ಅಧಿಕಾರಿ (ಜೆಸಿಒ) ಸೇರಿ ಐವರು ಯೋಧರು ಗಂಭೀರವಾಗಿ ಗಾಯಗೊಂಡರು. ಇವರನ್ನು ಸೇನಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅಲ್ಲಿಯೇ ಮೃತಪಟ್ಟರು.

ಹುತಾತ್ಮ ಯೋಧರನ್ನು ಕಪುರ್ತಲಾದ ಜಸ್ವಿಂದರ್ ಸಿಂಗ್, ಗುರುದಾಸ್‌ಪುರದ ಮನ್‌ದೀಪ್ ಸಿಂಗ್, ರೋಪಾರ್‌ನ ಗಜ್ಜನ್ ಸಿಂಗ್, ಕೊಲ್ಲಂನ ವೈಶಾಖ್, ಉತ್ತರ ಪ್ರದೇಶದ ಶಹಜಹಾನ್‌ಪುರ್‌ನ ಸರಾಜ್ ಸಿಂಗ್ ಎಂದು ಗುರುತಿಸಲಾಗಿದೆ.

ಗುಂಡಿನ ಚಕಮಕಿಯಲ್ಲಿ ಗುರುತು ಪತ್ತೆಯಾಗದ ಇಬ್ಬರು ಉಗ್ರರೂ ಹತರಾಗಿದ್ದಾರೆ ಎಂದು ಹೇಳಲಾಗಿದೆ.

ಮತ್ತೊಂದು ಚಕಮಕಿ: ಸೋಮವಾರ ಸಂಜೆ ಶೋಪಿಯಾನ್ ಜಿಲ್ಲೆಯ ಗ್ರಾಮವೊಂದರಲ್ಲಿ ಭದ್ರತಾಪಡೆ ಮತ್ತೊಂದು ಕಾರ್ಯಾಚರಣೆ ಆರಂಭಿಸಿದೆ. ಈ ಪ್ರದೇಶದಲ್ಲಿ ಮೂರರಿಂದ ನಾಲ್ಕು ಉಗ್ರರು ಅಡಗಿಕೊಂಡಿರುವ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ.

23 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರಬ್ಬಿ ಸಮುದ್ರದ ಪೂರ್ವ ಮಧ್ಯಭಾಗ ಹಾಗೂ ಉತ್ತರ ಅಂಡಮಾನ್ ಭಾಗಗಳಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವುದರಿಂದ ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳು ಸೇರಿದಂತೆ ರಾಜ್ಯದ 23 ಜಿಲ್ಲೆಗಳಲ್ಲಿ ಅ.12 ಮತ್ತು 13ರಂದು ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

'ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸೋಮವಾರ ಧಾರಾಕಾರ ಮಳೆಯಾಗಿದೆ. ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಅ.16ರವರೆಗೆ ಭಾರಿ ಮಳೆಯಾಗಲಿದೆ' ಎಂದು ಹವಾಮಾನ ತಜ್ಞ ಸದಾನಂದ ಅಡಿಗ ತಿಳಿಸಿದರು.

'ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಹಾವೇರಿ, ಗದಗ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಂಗಳವಾರ ಮತ್ತು ಬುಧವಾರದವರೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಮಳೆ–ಎಲ್ಲಿ, ಎಷ್ಟು?: ಸುಬ್ರಹ್ಮಣ್ಯ, ಹೊಸದುರ್ಗ ಹಾಗೂ ಮಡಿಕೇರಿಯಲ್ಲಿ ಸೋಮವಾರ 5 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಮಂಗಳೂರು 4, ರಾಯಚೂರು, ಮಂಡ್ಯ, ಮಳವಳ್ಳಿ 3, ಪುತ್ತೂರು, ಕಲಬುರಗಿ, ಕೊಪ್ಪಳ, ಚಾಮರಾಜನಗರ, ಕೊಳ್ಳೇಗಾಲ, ರಾಮನಗರ, ಮಾಗಡಿ 2, ಅಥಣಿ, ಗಂಗಾವತಿ, ಕಮಲಾಪುರ, ಹಿರಿಯೂರು, ಟಿ.ನರಸೀಪುರ, , ಬೆಂಗಳೂರು ನಗರ, ಕುಣಿಗಲ್, ಹೊಸಪೇಟೆ, ಶ್ರೀರಂಗಪಟ್ಟಣ ಮತ್ತು ನೆಲಮಂಗಲದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಶಿರಾಲಿಯಲ್ಲಿ 33.5 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ತಮಿಳುನಾಡಿಗೆ ನೀರು ಹರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಲಾಶಯಗಳಲ್ಲಿ ನೀರಿನ ಲಭ್ಯತೆ ಆಧರಿಸಿ ಕರ್ನಾಟಕವು ತಮಿಳುನಾಡಿನ ಪಾಲಿನ ನೀರನ್ನು ಹರಿಸಬಹುದಾಗಿದೆ ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಸಲಹೆ ನೀಡಿದೆ.

ನವೀನ್ ಕುಮಾರ್ ಅಧ್ಯಕ್ಷತೆಯ ಸಮಿತಿಯು ಸೋಮವಾರ ನಡೆಸಿದ ಸಭೆಯಲ್ಲಿ ಭಾಗವಹಿಸಿದ್ದ ಕಾವೇರಿ ಕಣಿವೆಯ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿಯ ಪ್ರತಿನಿಧಿಗಳು ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಸುರಿದ ಮಳೆಯ ವಿವರ, ನೀರಿನ ಲಭ್ಯತೆ ಹಾಗೂ ಕೃಷಿ ಮತ್ತು ಕುಡಿಯುವ ನೀರಿನ ಅಗತ್ಯದ ಕುರಿತು ಮಾಹಿತಿ ಒದಗಿಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ರಾಜ್ಯದ ಅಧಿಕಾರಿಗಳು, ಕರ್ನಾಟಕದ ಜಲಾಶಯಗಳಲ್ಲಿ ನೀರಿನ ಕೊರತೆ ಇದೆ ಎಂದು ಪುನರುಚ್ಚರಿಸಿದರು. ಆದರೆ, ತಮಿಳುನಾಡು ನೀರಿಗೆ ಬೇಡಿಕೆ ಇರಿಸಿದ ಕಾರಣ, ಲಭ್ಯ ಪ್ರಮಾಣದಲ್ಲೇ ಒಂದಷ್ಟು ನೀರನ್ನು ತಮಿಳುನಾಡಿಗೆ ಹರಿಸಬಹುದು ಎಂದು ಸಮಿತಿಯು ರಾಜ್ಯಕ್ಕೆ ಸಲಹೆ ನೀಡಿತು.

ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಗಜಾನನ ವಝೆ ಮುಂದಾಳತ್ವದಲ್ಲಿ ಕಾರ್ಯ

ದಾಖಲಾಗುತ್ತಿವೆ ಮುಂಡಾಜೆ ಸಸ್ಯ ಸಂಪತ್ತು

• ಹರ್ಷವರ್ಧನ ಪಿ. ಆರ್.

ಮಂಗಳೂರು: ನಿವೃತ್ತ ಶಿಕ್ಷಕ ಗಜಾನನ ವಝೆ ಮುಂದಾಳತ್ವದಲ್ಲಿ ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಸ್ಯ ಸಂಪತ್ತಿನ ದಾಖಲೀಕರಣ ಆರಂಭಗೊಂಡಿದ್ದು, ಈಗಾಗಲೇ 315ಕ್ಕೂ ಹೆಚ್ಚು ಪ್ರಭೇದಗಳನ್ನು ದಾಖಲಿಸಲಾಗಿದೆ. ಆಗಸ್ಟ್ 15ರಂದು ಪ್ರಕ್ರಿಯೆ ಆರಂಭಗೊಂಡಿತ್ತು.

'ಜೀವವೈವಿಧ್ಯವನ್ನು ದಾಖಲಿಸಬೇಕು' ಎಂಬ ನಿರ್ಣಯವನ್ನು 2002ರಲ್ಲಿ ಬ್ರೆಜಿಲ್‌ನಲ್ಲಿ ನಡೆದಿದ್ದ ವಿಜ್ಞಾನಿಗಳ ಸಮಾವೇಶವು ಅಂಗೀಕರಿಸಿತ್ತು. 2005ರಲ್ಲಿ ಅದಕ್ಕೆ ಮೂರ್ತರೂಪ ಸಿಕ್ಕಿದ್ದು, ಭಾರತದಲ್ಲೂ ವೇದಿಕೆ ದೊರೆಯಿತು. ಆದರೆ, ಇದನ್ನು ಅಚ್ಚುಕಟ್ಟಾಗಿ ಜಾರಿಗೊಳಿಸಿ ದಾಖಲೀಕರಣ ಮಾಡಿದ ಪಂಚಾಯಿತಿ ಅಥವಾ ಅರಣ್ಯ ವಲಯಗಳೇ ವಿರಳ.

ಪ್ರಕೃತಿ ಮತ್ತು ವಿಜ್ಞಾನದ ಮೇಲೆ ಪ್ರೀತಿ ಹೊಂದಿರುವ ಗಜಾನನ ವಝೆ, ತಮ್ಮ ಗ್ರಾಮದ ಸಸ್ಯ ವೈವಿಧ್ಯವನ್ನಾದರೂ ದಾಖಲಿಸಬೇಕು ಎಂಬ ನಿಟ್ಟಿನಲ್ಲಿ ಹೆಜ್ಜೆ ಇಟ್ಟರು. ಅವರ ಜೊತೆ ಗ್ರಾಮ ಪಂಚಾಯಿತಿಯ ದಾಖಲೀಕರಣ ಸಮಿತಿ ಹಾಗೂ ಸ್ಥಳೀಯ ಆಸಕ್ತರು ಕೈ ಜೋಡಿಸಿದ್ದಾರೆ. ಪ್ರಮುಖವಾಗಿ ಸಚಿನ್ ಭಿಡೆ, ಶಶಿಧರ ಖಾಡಿಲ್ಕರ್, ಶಿವಣ್ಣ, ವಾಸುದೇವ ತಾಮ್ಹನ್ಕರ್, ಶಶಾಂಕ ಮರಾಠೆ ಮತ್ತಿತರರು ಕೆಲಸ ಮಾಡುತ್ತಿದ್ದಾರೆ. ಸಸ್ಯಸಂಕುಲ ಕುರಿತು ಜ್ಞಾನ ಹೊಂದಿರುವ ಬಾಲಕೃಷ್ಣ ಗೌಡ, ಸರೋಜಾ ಗೌಡ, ಕೊರಗಪ್ಪ ನಾಯ್ಕ, ಐತ ಮೊದಲಾದವರು ಮಾಹಿತಿ ನೀಡಿದ್ದಾರೆ.



ನಿವೃತ್ತ ಶಿಕ್ಷಕ ಗಜಾನನ ವಝೆ (ಬಲಬದಿಯಲ್ಲಿರುವವರು) ಮುಂದಾಳತ್ವದಲ್ಲಿ ಮುಂಡಾಜೆ ಗ್ರಾಮದಲ್ಲಿ ಸಸ್ಯ ದಾಖಲೀಕರಣ ನಡೆಯುತ್ತಿರುವುದು

ಏನಿದು ಯೋಜನೆ?: 'ನಮ್ಮ ದೇಶದ ಪರಂಪರೆ, ಸಂಪತ್ತಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಸಿಗಬೇಕಾದರೆ ಪೂರಕ ದಾಖಲೆಗಳು ಬೇಕು. ಅರಿಸಿನ ಮತ್ತು ಕಹಿಬೇವಿನ ಪೇಟೆಂಟ್ ಕುರಿತು ಪೂರಕ ದಾಖಲೆ ಇಲ್ಲದಿರುವುದು ಭಾರತಕ್ಕೆ ಆರಂಭಿಕ ಹಿನ್ನಡೆ ಉಂಟು ಮಾಡಿತ್ತು. ನಮ್ಮದು ದೇಶದ ಸಂಪತ್ತನ್ನು ದಾಖಲಿಸುವ ಪ್ರಕ್ರಿಯೆಯೂ ಹೌದು' ಎನ್ನುತ್ತಾರೆ ಗಜಾನನ ವಝೆ.

ಈಗಾಗಲೇ 315 ಸಸ್ಯ ಪ್ರಭೇದಗಳನ್ನು ದಾಖಲಿಸಲಾಗಿದೆ. ಸುಮಾರು 400ಕ್ಕೂ ಅಧಿಕ ಪ್ರಭೇದಗಳನ್ನು ಗುರುತಿಸಲಾಗಿದೆ.

'ಭೌಗೋಳಿಕ ವೈವಿಧ್ಯದ ಆಧಾರದಲ್ಲಿ ತೋಟ, ಗದ್ದೆ, ಅರಣ್ಯ, ಬದು, ನದಿ ತೀರ... ಹೀಗೆ ಪ್ರದೇಶವನ್ನು ವರ್ಗೀಕರಿಸಿಕೊಂಡಿದ್ದೇವೆ. ಇಂತಹ ಒಂದೇ ರೀತಿಯ ಎರಡು ಪ್ರದೇಶವನ್ನು ಆಯ್ದುಕೊಂಡು, ಅಲ್ಲಿನ ಸಸ್ಯ ಸಂಪತ್ತಿನ ಜಿಪಿಎಸ್ ಫೋಟೊ, ಸ್ಥಳೀಯರು (ನಾಟಿ ವೈದ್ಯರು, ಅರಣ್ಯವಾಸಿ, ಮೂಲ ನಿವಾಸಿಗಳು) ನೀಡುವ ಮಾಹಿತಿಯನ್ನು ವೈಜ್ಞಾನಿಕವಾಗಿ ದಾಖಲಿಸುತ್ತೇವೆ. ಕೊರಗ ಮತ್ತಿತರ ಸಮುದಾಯಗಳ ಹಿರಿಯರಲ್ಲಿ ನೆಲದ ಜ್ಞಾನ ಅಪಾರವಾಗಿದೆ' ಎಂದರು.

ಸದಾ ವಿಜ್ಞಾನ, ಕೃಷಿ ಪರಿಕರ ಶೋಧ, ಸಸ್ಯ ಸಂಪತ್ತು ದಾಖಲು ಮತ್ತಿತರ ಕೆಲಸವನ್ನು ವಝೆ ಮಾಡುತ್ತಿರುತ್ತಾರೆ. ಸದ್ಯ ಪಶ್ಚಿಮ ಘಟ್ಟದ ತಪ್ಪಲಿನ ತೋಟ– ಕಾಡುಮೇಡುಗಳಲ್ಲಿ ಅಲೆದು ಸಸ್ಯ ಪ್ರಭೇದ ದಾಖಲಿಸುತ್ತಿರುವ ಅವರನ್ನು ಗ್ರಾಮಸ್ಥರು ಗುರುತಿಸುವುದು '67 ವರ್ಷದ ಯುವಕ' ಎಂದು.

ಪ್ರಜಾವಾಣಿ ವಿಶೇಷ

ಸಸ್ಯ ಸಂಪತ್ತಿನ ರೂಪಾಂತರ

ಒಂದು ಪ್ರದೇಶದ ಸಸ್ಯ ಸಂಪತ್ತು ಎಲ್ಲ ಕಾಲಕ್ಕೂ ಒಂದೇ ರೀತಿ ಇರುವುದಿಲ್ಲ. ನೆಲ್ಲಿ, ನಾಯಿ ತುಳಸಿ, ಕೊಟ್ಟೆ ಇತ್ಯಾದಿ ಈಗ ಅಳಿವಿನಂಚಿನಲ್ಲಿವೆ. ಇನ್ನೊಂದೆಡೆ ಕೃಷಿ, ಜಾನುವಾರು ಸಾಕಾಣಿಕೆ, ಹೊರಗಿನಿಂದ ತಂದ ಗೊಬ್ಬರದ ಮೂಲಕ ಬರುವ ಬೀಜಗಳಿಂದ ಹೊಸ ಸಸ್ಯಗಳು ಬರುತ್ತವೆ. ಈ ನಿಟ್ಟಿನಲ್ಲಿ ಆಯಾ ಕಾಲದ ದಾಖಲಾತಿ ಬಹಳ ಮುಖ್ಯವಾಗಿದೆ.



ಸಚಿವ ಎಂಟಿಬಿ ನಾಗರಾಜ್ ಅವರು ಸಂಸ್ಥೆಯ ಸಿಬ್ಬಂದಿಗೆ ಪ್ರಶಸ್ತಿ ಪತ್ರ ಮತ್ತು ಫಲಕ ವಿತರಿಸಿದರು. ಸಚಿವ ಬೈರತಿ ಬಸವರಾಜ್, ಸಂಸ್ಥೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಎಸ್. ಲತಾ ಇದ್ದರು

ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೆ ಸಿಮ್ಯಾಕ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಉಪಕ್ರಮಗಳಾದ 'ಫ್ಲೈಬಸ್' ಮತ್ತು 'ಸ್ವಚ್ಛತೆಯೇ ಸೇವೆ'ಗೆ ಸಿಮ್ಯಾಕ್(ಸಿಟಿ ಮ್ಯಾನೇಜರ್ಸ್ ಅಸೋಸಿಯೇಷನ್) ಸಂಸ್ಥೆಯ 2018–19ನೇ ಸಾಲಿನ ಮೊದಲನೇ ಮತು 2019–20ನೇ ಸಾಲಿನ ದ್ವಿತೀಯ ಪ್ರಶಸ್ತಿ ಲಭಿಸಿದೆ.

₹1 ಲಕ್ಷ ಮತ್ತು ₹75 ಸಾವಿರ ನಗದು ಒಳಗೊಂಡ ಪ್ರಶಸ್ತಿಯನ್ನು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಮತ್ತು ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಪ್ರದಾನ ಮಾಡಿದರು. ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿ ಪ್ರಯಾಣಿಕರಿಗೆ ಸಮರ್ಪಿಸಲಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದ್ದಾರೆ.

ಬಿಎಂಟಿಸಿಗೆ 2018–19ನೇ ಸಾಲಿನ ದ್ವಿತೀಯ ಮತ್ತು 2019–20ನೇ ಸಾಲಿನ ಪ್ರಥಮ ಬಹುಮಾನ ದೊರೆತಿದೆ. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಪ್ರಶಸ್ತಿ ಸ್ವೀಕರಿಸಿದರು.

ಇದೇ 31ರವರೆಗೆ 'ಸ್ವಚ್ಛ ಭಾರತ' ಕಾರ್ಯಕ್ರಮ

ಬೆಂಗಳೂರು: 'ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಅ.31ರವರೆಗೆ ದೇಶದಾದ್ಯಂತ 'ಸ್ವಚ್ಛ ಭಾರತ' ಕಾರ್ಯಕ್ರಮದಡಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ಕರ್ನಾಟಕ ನೆಹರು ಯುವ ಕೇಂದ್ರದ ರಾಜ್ಯ ನಿರ್ದೇಶಕ ಎಂ.ಎನ್.ನಟರಾಜ್ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಕಾರ್ಯಕ್ರಮದ ಅಂಗವಾಗಿ ಎನ್‌ವೈಕೆಎಸ್ ಯುವ ಕ್ಲಬ್‌ಗಳ ಸಹಕಾರದಲ್ಲಿ ಸುಮಾರು 2.5 ಲಕ್ಷ ಗ್ರಾಮಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವ ಗುರಿ ಹೊಂದಿದ್ದೇವೆ' ಎಂದರು.

'ಕಸ ಸಂಗ್ರಹಣಾ ಅಭಿಯಾನ ಮತ್ತು ಮನೆ ಮನೆಗೆ ಭೇಟಿ ನೀಡಿ, ತ್ಯಾಜ್ಯ ಸಂಗ್ರಹ, ಗ್ರಾಮಗಳ ಸುಂದರೀಕರಣ, ಐತಿಹಾಸಿಕ ಸ್ಮಾರಕಗಳು ಮತ್ತು ಪಾರಂಪರಿಕ ತಾಣಗಳನ್ನು ಸ್ವಚ್ಛಗೊಳಿಸುವ ಹಾಗೂ ನಿರ್ವಹಣೆ ಮಾಡುವ ಅಭಿಯಾನ, ಸಮುದಾಯ ಕೇಂದ್ರಗಳು, ಶಾಲಾ ಮತ್ತು ಪಂಚಾಯಿತಿ ಕಟ್ಟಡಗಳನ್ನು ಸ್ವಚ್ಛಗೊಳಿಸಲಾಗುವುದು' ಎಂದರು.

'ಇಲಾಖೆಗಳು, ಎನ್‌ಎಸ್‌ಎಸ್ ಘಟಕಗಳು, ಸ್ಥಳೀಯ ಸರ್ಕಾರಗಳು ಹಾಗೂ ಸಂಘ ಸಂಸ್ಥೆಗಳ ಸಹಕಾರದಿಂದ ಈ ಕಾರ್ಯಕ್ರಮದಡಿ ಸಂಗ್ರಹಿಸುವ ಕಸವನ್ನು ಸೂಕ್ತವಾಗಿ ವಿಲೇವಾರಿಯೂ ಮಾಡಲಾಗುವುದು' ಎಂದು ವಿವರಿಸಿದರು.

ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಗಡುವು

'ಹೆದ್ದಾರಿಗಳ ದುರಸ್ತಿಗೆ ಕಾಲಮಿತಿ'

ಪ್ರಜಾವಾಣಿ ವಾರ್ತೆ



ಸಿ.ಸಿ. ಪಾಟೀಲ

ಬೆಂಗಳೂರು: ರಾಜ್ಯದ ಕೆಲವು ಕಡೆಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಹದಗೆಟ್ಟಿದ್ದು, ಅವುಗಳನ್ನು ಕಾಲಮಿತಿಯೊಳಗೆ ತುರ್ತಾಗಿ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಬೇಕು ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ರಾಷ್ಟ್ರೀಯ ಹೆದ್ದಾರಿ ನಿರ್ವಹಣಾಧಿಕಾರಿಗಳಿಗೆ ಗಡುವು ನೀಡಿದರು.

ಸೋಮವಾರ ನಡೆದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ಭಾರಿ ಮಳೆಯಿಂದಾಗಿ ಪುಣೆ- ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯೂ ಸೇರಿ ಹಲವು ಹೆದ್ದಾರಿಗಳಲ್ಲಿ ಗುಂಡಿಗಳು ನಿರ್ಮಾಣವಾಗಿವೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಹೆದ್ದಾರಿ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಬೇಕು ಎಂದು ಸಲಹೆ ನೀಡಿದರು.

ಹೆದ್ದಾರಿಗಳಗುಣಮಟ್ಟವನ್ನುಕಾಯ್ದುಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ರಾಜ್ಯ ಸರ್ಕಾರ ಇದಕ್ಕೆ ಅಗತ್ಯ ಸಹಕಾರ ನೀಡಲಿದೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನುತ್ವರಿತವಾಗಿಮುಗಿಸಲು ಅಗತ್ಯಕ್ರಮ ಕೈಗೊಳ್ಳಬೇಕು. ಒಂದು ವೇಳೆ ಗುತ್ತಿಗೆದಾರರಿಂದ ತಡವಾದರೆ ಅವರಿಗೆ ನೋಟೀಸ್ ನೀಡಿ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದೂ ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಮತ್ತು ಇತರ ಕಡೆಗಳಲ್ಲಿ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ನಿರ್ಮಿಸಿರುವುದರಿಂದ ಅಪಘಾತಗಳ ಸಂಖ್ಯೆ ಕಡಿಮೆ ಆಗುವ ಬದಲು ಹೆಚ್ಚಾಗುತ್ತಿದೆ. ಇದರಿಂದ ವಾಹನಗಳ ಸರಾಗ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಈ ಬಗ್ಗೆ ಜನಪ್ರತಿನಿಧಿಗಳಿಂದ ವ್ಯಾಪಕ ದೂರುಗಳು ಬಂದಿವೆ. ಇವುಗಳನ್ನು ಪರಿಶೀಲಿಸಿ ಮತ್ತು ಸ್ಥಳೀಯರ ಮನವೊಲಿಸಿ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆಗೆದು ಹಾಕಬೇಕು ಎಂದು ಪಾಟೀಲ ಸೂಚಿಸಿದರು.

ಹಾಸನ - ಮಂಗಳೂರು, ಬೆಂಗಳೂರು - ಬಿ. ಆರ್. ಹಿಲ್ಸ್, ಬೆಂಗಳೂರು–ಕನಕಪುರ ಹೆದ್ದಾರಿ ಕಾಮಗಾರಿಗಳು ನಿರೀಕ್ಷಿತ ವೇಗದಲ್ಲಿ ನಡೆಯುತ್ತಿಲ್ಲ. ಈ ಕಾಮಗಾರಿಗಳಿಗೆ ಇರುವ ಅಡೆತಡೆಗಳನ್ನು ನಿವಾರಿಸಿ ಆದಷ್ಟು ಶೀಘ್ರವಾಗಿ ಯೋಜನೆಗಳನ್ನು ಪೂರ್ಣಗೊಳಿಸಬೇಕು ಎಂದೂ ಅವರು ನಿರ್ದೇಶನ ನೀಡಿದರು.

ಹೆದ್ದಾರಿಗಳ ಅಕ್ಕ- ಪಕ್ಕದ ಹಳ್ಳಿಗಳಿಗೆ ಮತ್ತು ಪೇಟೆ- ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಹೆದ್ದಾರಿ ಪ್ರಾಧಿಕಾರ ಮತ್ತು ಲೋಕೋಪಯೋಗಿ ಇಲಾಖೆಯು ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕು. ವರ್ತುಲ ರಸ್ತೆಗಳ ಕಾಮಗಾರಿಗಳನ್ನು ತಡ ಮಾಡಿದರೆ ಆಯಾ ಪ್ರದೇಶಗಳ ನಗರಗಳ ಒಳಭಾಗದಲ್ಲಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿ ಅಪಘಾತಗಳಿಗೆ ಕಾರಣವಾಗುತ್ತದೆ ಎಂದು ಸಚಿವರು ಎಚ್ಚರಿಕೆ ನೀಡಿದರು.

ರಾಜಾಜಿನಗರದಲ್ಲಿ ಗ್ಲೋಬಲ್ ಮಾಲ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಬಹುರಾಷ್ಟ್ರೀಯ ಉದ್ಯಮ ಸಮೂಹವಾಗಿರುವ ಲುಲು ಗ್ರೂಪ್ ಇಂಟರ್‌ನ್ಯಾಷನಲ್ ಒಡೆತನದ ರಾಜಾಜಿನಗರದಲ್ಲಿನ ಗ್ಲೋಬಲ್ ಮಾಲ್ ಅನ್ನು ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಅವರು ಸೋಮವಾರ ಉದ್ಘಾಟಿಸಿದರು.

ಬೆಂಗಳೂರಿನ ಅತಿದೊಡ್ಡ ಹೈಪರ್‌ಮಾರ್ಕೆಟ್ ಆಗಿರುವ ಲುಲು ಹೈಪರ್‌ಮಾರ್ಕೆಟ್ ಹಾಗೂ ವಿನೂತನ ಮನರಂಜನಾ ತಾಣ ಫಂಟುರಾ ಇಲ್ಲಿದೆ ಎಂದು ಕಂಪನಿಯು ತಿಳಿಸಿದೆ.

'ಬೆಂಗಳೂರಿನ ನಿವಾಸಿಗಳಿಗೆ ವಿಶ್ವ ದರ್ಜೆಯ ಶಾಪಿಂಗ್ ಅನುಭವ ನೀಡುವ ಸಲುವಾಗಿ ನಮ್ಮ ಅಂತರರಾಷ್ಟ್ರೀಯ ಪರಿಣತಿಯನ್ನು ಅಳವಡಿಸಿಕೊಳ್ಳಲಾಗಿದೆ. ವ್ಯಾಪಕ ಶ್ರೇಣಿಯ ಉತ್ಪನ್ನಗಳನ್ನು ಉತ್ತಮ ಬೆಲೆಗೆ ಖರೀದಿಸುವ ಜೊತೆಗೆ ಸ್ನೇಹಪರ ಸೇವೆಯೂ ಇಲ್ಲಿ ಇರಲಿದೆ ಎಂದು ಲುಲು ಸಮೂದ ಸಿಎಂಡಿ ಎಂ.ಎ. ಯೂಸುಫ್ ಅಲಿ ಅವರು ಹೇಳಿದರು.

ಈ ಹೈಪರ್ ಮಾರ್ಕೆಟ್‌ನಲ್ಲಿ ಸ್ಥಳೀಯ ಯುವಕರಿಗೆ ಉದ್ಯೋಗ ಅವಕಾಶವನ್ನು ಹೆಚ್ಚಿಸಲು, ಕರ್ನಾಟಕ ಆಧಾರಿತ ಕೃಷಿ ಮತ್ತು ವ್ಯಾಪಾರ ವಲಯಗಳನ್ನು ಬೆಂಬಲಿಸಲು ಉತ್ತಮ ಉತ್ತೇಜಿಜಸಲು ವಿಶೇಷ ವಿಭಾಗಗಳನ್ನು ಹೊಂದಿದ್ದೇವೆ ಎಂದು ಅವರು ವಿವರಿಸಿದರು.

ರಾಜಾಜಿನಗರದಲ್ಲಿನ 14 ಎಕರೆ ಜಾಗದಲ್ಲಿ ಇದು ನಿರ್ಮಾಣ ಆಗಿದೆ. ಐದು ಮಹಡಿಗಳ ಈ ಮಾಲ್‌ನಲ್ಲಿ 132 ಅಂಗಡಿಗಳು, 17 ಕಿಯೋಸ್ಕ್‌ಗಳು ಇವೆ. ಸಿದ್ಧ ಉಡುಪುಗಳು, ಆಭರಣಗಳು, ಎಲೆಕ್ಟ್ರಾನಿಕ್ ವಸ್ತುಗಳು, ರೆಸ್ಟೋರೆಂಟ್‌ಗಳು, ಕೆಫೆಗಳನ್ನು ಹೊಂದಿದೆ. ಲುಲು ಹೈಪರ್‌ಮಾರ್ಕೆಟ್ 2 ಲಕ್ಷ ಚದರ ಅಡಿಗಳಷ್ಟು ವಿಸ್ತಾರವಾಗಿದೆ ಹಾಗೂ ಅತಿದೊಡ್ಡ ಒಳಾಂಗಣ ಮನರಂಜನಾ ಕೇಂದ್ರವಾದ ಫಂಟುರಾ 60 ಸಾವಿರ ಚದರ ಅಡಿಯಲ್ಲಿ ಇದೆ ಎಂದು ಕಂಪನಿಯು ತಿಳಿಸಿದೆ.



ಗ್ಲೋಬಲ್ ಮಾಲ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಲುಲು ಸಮೂಹದ ಸಿಎಂಡಿ ಯೂಸುಫ್ ಅಲಿ ಮತ್ತು ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಮತ್ತಿತರರು ಇದ್ದಾರೆ

ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅ.12 ಮತ್ತು 13ರಂದು ಬೆಳಿಗ್ಗೆ 10.30ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: 12ರಂದು ಸಿಂಗಸಂದ್ರ, ದೊಡ್ಡತೋಗೂರು, ಎಲೆಕ್ಟ್ರಾನಿಕ್ ಸಿಟಿ, ಕೋನಪ್ಪನ ಅಗ್ರಹಾರ, ಗೊಟ್ಟಿಗೆರೆ, ಸುರಭಿ ನಗರ, ಎಚ್‌ಎಸ್‌ಆರ್ ಬಡಾವಣೆ, ಗೋವಿಂದರಾಜ ನಗರ, ನಾಗರಬಾವಿ, ಚಂದ್ರಾ ಬಡಾವಣೆ, ಬಸವೇಶ್ವರ ನಗರ, ಕಾಮಾಕ್ಷಿಪಾಳ್ಯ, ಹಂಪಿನಗರ, ಹೊಸಹಳ್ಳಿ, ವಿಜಯನಗರ, ಮಲ್ಲತ್ತಹಳ್ಳಿ, ಮಾರೇನಹಳ್ಳಿ, ದೊಡ್ಡಬಸ್ತಿ ಮುಖ್ಯರಸ್ತೆ, ಮಾರುತಿ ನಗರ, ವಿಘ್ನೇಶ್ವರ ನಗರ.

13ರಂದು ಲಕ್ಷ್ಮಿ ಬಡಾವಣೆ, ಕಮ್ಮನಹಳ್ಳಿ, ದೊಡ್ಡಮ್ಮ ಬಡಾವಣೆ, ಪಾಂಡುರಂಗ ಬಡಾವಣೆ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು.

'ಬೇಡಿಕೆ ಈಡೇರುವವರೆಗೂ ಪ್ರತಿಭಟನೆ'

ಮುಜಾಫ್ಫರ್‌ನಗರ: ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವುದು ಮತ್ತು ಬೆಳೆಗಳಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಕಾನೂನು ಚೌಕಟ್ಟಿನಲ್ಲಿ ತರುವುದು ಸೇರಿದಂತೆ, ಎಲ್ಲ ಬೇಡಿಕೆಗಳನ್ನು ಸರ್ಕಾರ ಈಡೇರಿಸುವವರೆಗೂ ರೈತರ ಪ್ರತಿಭಟನೆ ಮುಂದುವರಿಯಲಿದೆ ಎಂದು ರೈತ ನಾಯಕ ರಾಕೇಶ್ ಟಿಕಾಯತ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಂದು ವರ್ಷದಿಂದ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಸುಮಾರು 750 ಮಂದಿ ಸಾವನ್ನಪ್ಪಿದ್ದಾರೆ. ಇಂಥ ಆಂದೋಲನವನ್ನು ಕೇಂದ್ರವು ಕಡೆಗಣಿಸುತ್ತಿದೆ' ಎಂದು ಆರೋಪಿಸಿದರು.

ಸಾಯಿ ಗೋಲ್ಡ್ ಪ್ಯಾಲೇಸ್ ಆಭರಣಗಳಿಗೆ ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಹಬ್ಬದ ಪ್ರಯುಕ್ತ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ ಪ್ರತಿ ಕೆ.ಜಿ ಬೆಳ್ಳಿ ಆಭರಣದ ಮೇಲೆ ₹2 ಸಾವಿರ ಹಾಗೂ ಪ್ರತಿ ಕ್ಯಾರೆಟ್ ವಜ್ರದ ಮೇಲೆ ₹5 ಸಾವಿರ ರಿಯಾಯಿತಿ ನೀಡಲಾಗಿದೆ.

ನೋ ವೇಸ್ಟೇಜ್, ನೋ ಸ್ಟೋನ್ ಚಾರ್ಜಸ್ ಹಾಗೂ ಮೇಕಿಂಗ್ ಚಾರ್ಜಸ್ ಮೇಲೆ ಶೇ 15ರಷ್ಟು ರಿಯಾಯಿತಿ ಇರಲಿದ್ದು, ಹಳೆಯ (916) ಚಿನ್ನವನ್ನು ಇಂದಿನ ದರಕ್ಕೆ ಬದಲಾಯಿಸಿಕೊಳ್ಳುವ ಕೊಡುಗೆಯನ್ನೂ ನೀಡಿದೆ.

'ಕೋವಿಡ್‌ನಿಂದಾಗಿ ಆರ್ಥಿಕ ಸಂಕಷ್ಟದಲ್ಲಿರುವ ಗ್ರಾಹಕರನ್ನು ಮನಗಂಡು, ದಸರಾ ಹಬ್ಬಕ್ಕಾಗಿ ಈ ಕೊಡುಗೆಗಳನ್ನು ನೀಡುತ್ತಿದ್ದೇವೆ. ನಗರದಲ್ಲಿರುವ ಐದೂ ಶಾಖೆಗಳಲ್ಲಿ ಈ ಕೊಡುಗೆಗಳು ಲಭ್ಯವಿದ್ದು, ಗ್ರಾಹಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ.ಶರವಣ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ವತಿಯಿಂದ ಐಎಎಸ್, ಕೆಎಎಸ್, ಬ್ಯಾಂಕಿಂಗ್, ಎನ್‌ಇಟಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಭೌತಿಕ ಹಾಗೂ ಆನ್‌ಲೈನ್ ತರಬೇತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನದ ಮೂಲಕ ಕೋರ್ಸ್ ಶುಲ್ಕದಲ್ಲಿ ರಿಯಾಯಿತಿ ಸಿಗಲಿದೆ. ಆಸಕ್ತರು ಅ.20ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ksfbangalore@gmail.com ಅಥವಾ www.ksfkarnataka.com ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ:ಕೃಷಿಕ್ ಸರ್ವೋದಯ ಫೌಂಡೇಷನ್, ಹಳೆಯ ವಿಮಾನ ನಿಲ್ದಾಣದ ರಸ್ತೆ, ಕೋಡಿಹಳ್ಳಿ.

ವಿಳಾಸ:7625000990

'ಕಥಾಸ್ತ್ರ' ರಂಗ ಪ್ರದರ್ಶನ 16ಕ್ಕೆ

ಬೆಂಗಳೂರು: ನಗರದ ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್ ವತಿಯಿಂದ ನೃತ್ಯ, ಕಾವ್ಯ ಹಾಗೂ ಕಥೆಯನ್ನು ಒಟ್ಟುಗೂಡಿಡ 'ಕಥಾಸ್ತ್ರ' ಎಂಬ ರಂಗ ಪ್ರದರ್ಶನವನ್ನು ಅ.16 ಮತ್ತು 17ರಂದು ಸಂಜೆ 6.30ಕ್ಕೆ ಕೋರಮಂಗಲ ಕ್ಲಬ್‌ನ ಪ್ರಭಾತ್ ಕಲಾದ್ವಾರಕ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಇದು, ಮಹಾಕವಿ ಕುಮಾರವ್ಯಾಸನ ಮಹಾಕಾವ್ಯ 'ಕರ್ಣಾಟಕ ಭಾರತ ಕಥಾಮಂಜರಿ'ಯ ರಂಗಾವತರಣ. ನೃತ್ಯಪಟುಗಳಾದ ಭರತ್.ಆರ್. ಪ್ರಭಾತ್ ಹಾಗೂ ಶರತ್.ಆರ್.ಪ್ರಭಾತ್ ಅವರ ನೇತೃತ್ವದಲ್ಲಿ ಪ್ರದರ್ಶನ ಮೂಡಿ ಬರಲಿದೆ.

ಬುಕ್ ಮೈ ಶೋ ಮೂಲಕ ಪ್ರದರ್ಶನದ ಟಿಕೆಟ್‌ಗಳನ್ನು ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ:9886576659, 9986881281

ಉಚಿತ ಕಂಪ್ಯೂಟರ್ ಶಿಕ್ಷಣ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ವತಿಯಿಂದ ನಿರುದ್ಯೋಗಿ ಯುವಕ-ಯುವತಿಯರಿಗೆ ಮೂರು ತಿಂಗಳ ಉಚಿತ ಕಂಪ್ಯೂಟರ್ ತರಬೇತಿ ನೀಡಲಾಗುವುದು.

ಅಕ್ಟೋಬರ್ ಕೊನೆಯ ವಾರದಲ್ಲಿ ತರಬೇತಿ ಆರಂಭಗೊಳ್ಳಲಿದೆ. ಕನಿಷ್ಠ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ 18ರಿಂದ 27 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು.

ಆಸಕ್ತರು ಸಂಸ್ಥೆಯಲ್ಲಿ ಪ್ರತಿದಿನ ಬೆಳಿಗ್ಗೆ 11 ಗಂಟೆಗೆ ನಡೆಯುವ ಅರ್ಹತಾ ಪರೀಕ್ಷೆ ಮತ್ತು ಸಂದರ್ಶನಗಳಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ

ಸಂಪರ್ಕ:94485 38107

ನಗರದಲ್ಲಿ ಇಂದು

ಎನ್‌ಎಸ್‌ಎಸ್ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಎನ್‌ಎಸ್‌ಎಸ್ ಸ್ವಯಂಸೇವಕರ ನೋಂದಣಿ ಜಾಲತಾಣ ಲೋಕಾರ್ಪಣೆ: ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಅತಿಥಿಗಳು–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಸಂಸದ ಪಿ.ಸಿ.ಮೋಹನ್, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಆಯೋಜನೆ–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಹಕಾರ–ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಸ್ಥಳ–ಯವನಿಕ ಸಭಾಂಗಣ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಳಿಗ್ಗೆ 11

ಮೂವಿಂಗ್ ಬೌಂಡರೀಸ್–'ಸಮರ್ಥನೀಯ ಚಲನಶೀಲತೆಯಲ್ಲಿ ಲಿಂಗ ಸೇರ್ಪಡೆ' ಕುರಿತು ಜಾಗೃತಿ ಮೂಡಿಸಲು 'ಜೈ ಭಾರತಿ' ಅವರಿಂದ ಬೈಕ್ ಯಾತ್ರೆ: ಆಯೋಜನೆ–ಪವರ್ಡ್, ಸ್ಥಳ–ಫೋರಂ ಮಾಲ್, ಹೊಸೂರು ರಸ್ತೆ, ಕೋರಮಂಗಲ, ಮಧ್ಯಾಹ್ನ 3

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ-2020) ಅನುಸಾರ ಕರ್ನಾಟಕದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಅನುಷ್ಠಾನಮತ್ತು ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಶಿಕ್ಷಣಕ್ಕೆ ಚಾಲನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭಾಗಿ–ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ–ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಸಂಜೆ 5

ರಸ್ತೆ ಅಗೆಯಲು ಅನುಮತಿ ಕಡ್ಡಾಯ

ಪ್ರಜಾವಾಣಿ ವಾರ್ತೆ



ಗೌರವ್ ಗುಪ್ತ

ಬೆಂಗಳೂರು: 'ನಗರದಲ್ಲಿ ಮುಂದಿನ ದಿನಗಳಲ್ಲಿ ಯಾವುದೇ ರಸ್ತೆ ಅಗೆಯಲು ಪಾಲಿಕೆಯ ಅನುಮತಿ ಪಡೆಯಬೇಕು. ಇಲ್ಲದಿದ್ದರೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ ಹಾಗೂ ಬಿಎಂಆರ್‌ಸಿಎಲ್(ಬೆಂಗಳೂರು ಮೆಟ್ರೊ ರೈಲು ನಿಗಮ) ಅಧಿಕಾರಿಗಳ ಜೊತೆ ಸಮನ್ವಯ ಸಭೆ ನಡೆಸಿದ ಅವರು, 'ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗಳನ್ನು ಗುಂಡಿ ಮುಕ್ತಗೊಳಿಸಲು ಎಲ್ಲಾ ಇಲಾಖೆಗಳು ಸಹಕರಿಸಬೇಕು' ಎಂದರು.

ಜಲ ಮಂಡಳಿಯಿಂದ 110 ಹಳ್ಳಿ ಯೋಜನೆಯಡಿ ಕಾವೇರಿ ಕುಡಿಯುವ ನೀರಿನ ಸಂಪರ್ಕ ಹಾಗೂ ಒಳಚರಂಡಿ ಸಂಪರ್ಕ ಕಲ್ಪಿಸಲು ರಸ್ತೆಗಳನ್ನು ಅಗೆದು, ಕಾಮಗಾರಿ ಪೂರ್ಣಗೊಂಡಿರುವ ಕುರಿತಂತೆ ಪಾಲಿಕೆಗೆ ವರದಿ ಸಲ್ಲಿಸಿಲ್ಲ. ಇದರಿಂದ ಪಾಲಿಕೆಯಿಂದ ರಸ್ತೆ ಪುನರ್ ಸ್ಥಾಪಿಸಲು ವಿಳಂಬವಾಗುತ್ತಿದೆ. ಈ ಸಂಬಂಧ ಎಲ್ಲೆಲ್ಲಿ ಕಾಮಗಾರಿ ಪೂರ್ಣಗೊಂಡಿದೆ ಎಂಬುದನ್ನು ನಕ್ಷೆ ಮೂಲಕ ವರದಿಯನ್ನು ಪಾಲಿಕೆಗೆ ನೀಡಬೇಕು. ಸಮನ್ವಯ ಸಾಧಿಸಲು ಜಲ ಮಂಡಳಿಯಿಂದ ನೋಡಲ್ ಅಧಿಕಾರಿಯನ್ನು ನೇಮಿಸಬೇಕು ಎಂದು ಸೂಚನೆ ನೀಡಿದರು.

ಬೆಸ್ಕಾಂನಿಂದ ವಿದ್ಯುತ್ ಸಂಪರ್ಕಕ್ಕೆ ಕೇಬಲ್ ಅಳವಡಿಸಿ ತಕ್ಷಣವೇ ಪರೀಕ್ಷಿಸದೇ ಇರುವುದರಿಂದ ರಸ್ತೆ ಪುನರ್ ನಿರ್ಮಾಣ ವಿಳಂಬವಾಗುತ್ತಿದೆ. ಕೇಬಲ್ ಅಳವಡಿಕೆಯ ನಂತರ ತಕ್ಷಣವೇ ಪರೀಕ್ಷೆ ಕೈಗೊಂಡು ಕೇಬಲ್‌ಗಳನ್ನು ಅಳವಡಿಸಿ ಪಾಲಿಕೆಗೆ ವರದಿ ಸಲ್ಲಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ವೇಳೆ ಮೆಟ್ರೊ ಕಾಮಗಾರಿ ಕೈಗೊಂಡ ಪ್ರದೇಶದಲ್ಲಿ ರಸ್ತೆ ಪುನರ್ ನಿರ್ಮಾಣ ಕಾರ್ಯ ಕೈಗೊಳ್ಳುವಂತೆ ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಶೇಷ ಆಯುಕ್ತ(ಯೋಜನೆ) ಮನೋಜ್, ಜಲಮಂಡಳಿ ಅಧ್ಯಕ್ಷ ಜಯರಾಮ್, ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರಭಾಕರ್, ಮುಖ್ಯ ಎಂಜಿನಿಯರ್(ರಸ್ತೆ ಮೂಲಭೂತ ಸೌಕರ್ಯ) ಬಿ.ಎಸ್. ಪ್ರಹ್ಲಾದ್ ಇದ್ದರು.

ಕೋವಿಡ್: ಸಕ್ರಿಯ ಪ್ರಕರಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿಕೆಯಾಗಿವೆ. ಸದ್ಯ 9,906 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿರುವವರ ಸಂಖ್ಯೆಯೂ ಹೆಚ್ಚಿದೆ. ಸೋಮವಾರ 611 ಜನರಿಗೆ ಕಾಯಿಲೆ ವಾಸಿಯಾಗಿದ್ದು ಈವರೆಗೆ 29.33 ಲಕ್ಷ ಮಂದಿ ಗುಣಮುಖರಾದಂತಾಗಿದೆ.


ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿವೆ. ಒಂದು ದಿನದಲ್ಲಿ 373 ಜನರಿಗೆ ಸೋಂಕು ತಗುಲಿರುವುದು ಪರೀಕ್ಷೆಯಿಂದ ಖಾತರಿಯಾಗಿದೆ. ಇದರೊಂದಿಗೆ ಸೋಂಕಿತರ ಒಟ್ಟು ಸಂಖ್ಯೆ 29.81 ಲಕ್ಷಕ್ಕೆ ಏರಿದೆ. ಕೋವಿಡ್ ದೃಢ ಪ್ರಮಾಣವು ಶೇ 0.45ರಷ್ಟಿದೆ.


ಕೋವಿಡ್ ಪೀಡಿತರ ಪೈಕಿ ಸೋಮವಾರ 10 ಮಂದಿ ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 37,895ಕ್ಕೆ ತಲುಪಿದ್ದು, ಮರಣ ಪ್ರಮಾಣ ದರವು ಶೇ 2.68 ರಷ್ಟಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಇಳಿಕೆಯಾಗಿದೆ. ಹಿಂದಿನ 24 ಗಂಟೆಗಳಲ್ಲಿ 82,853 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರಿನಲ್ಲೂ ಕೋವಿಡ್ ಹೊಸ ಪ್ರಕರಣಗಳು ಇಳಿದಿವೆ. ಸೋಮವಾರ 146 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಕೇರಳಕ್ಕೆ ಹೊಂದಿಕೊಂಡಂತಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ (38), ಕೊಡಗು (15) ಹಾಗೂ ಮೈಸೂರಿನಲ್ಲಿ (43) ಹೊಸ ಪ್ರಕರಣಗಳು 50ಕ್ಕಿಂತ ಕಡಿಮೆ ಇವೆ. ಹಾಸನ (38), ಮಂಡ್ಯ (10), ತುಮಕೂರು (17), ಉಡುಪಿ (15) ಹಾಗೂ ಉತ್ತರ ಕನ್ನಡ (12) ಜಿಲ್ಲೆಗಳಲ್ಲೂ ಪ್ರಕರಣಗಳು ಕಡಿಮೆಯಾಗಿವೆ. ಬಾಗಲಕೋಟೆ, ಚಿಕ್ಕಮಗಳೂರು, ಗದಗ, ಹಾವೇರಿ, ಕಲಬುರಗಿ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. 14 ಜಿಲ್ಲೆಗಳಲ್ಲಿ ಇದು ಒಂದಂಕಿಯಷ್ಟಿದೆ.

ಕೋವಿಡ್‌ನಿಂದಾಗಿ ಬೆಂಗಳೂರಿನಲ್ಲಿ ಸೋಮವಾರ 5 ಮಂದಿ ಮೃತರಾಗಿದ್ದಾರೆ. ಮೈಸೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ಇಬ್ಬರು ಅಸುನೀಗಿದ್ದಾರೆ. ಧಾರವಾಡದಲ್ಲಿ ಒಬ್ಬರು ಸಾವಿಗೀಡಾಗಿದ್ದಾರೆ. ಮೃತರ ಪೈಕಿ 9 ಮಂದಿ 60 ವರ್ಷ ಮೇಲ್ಪಟ್ಟವರು. ಬಹುತೇಕರು ಜ್ವರ, ಕೆಮ್ಮು ಹಾಗೂ ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದರು.





ಪೆರಿಷಬಲ್ ಉತ್ಪನ್ನ ರಫ್ತು: ಕೆಐಎಗೆ ಮೊದಲ ಸ್ಥಾನ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಅತಿಹೆಚ್ಚು ಪೆರಿಷಬಲ್ ಪದಾರ್ಥಗಳ ಸರಕು ಸಾಗಣೆ ಮಾಡಿದ ದೇಶದ ಮೊದಲ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಟ್ರಾಟಜಿ ಆಂಡ್ ಡೆವಲಪ್‌ಮೆಂಟ್ ಮುಖ್ಯಾಧಿಕಾರಿ ಸಾತ್ಯಕಿ ರಘುನಾಥ್ ತಿಳಿಸಿದ್ದಾರೆ.

ಕಲ್ಲಿದ್ದಲು ಕೊರತೆ ಕೃತಕವೆ: ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉಂಟಾಗಿರುವ ಕಲ್ಲಿದ್ದಲಿನ ಕೊರತೆಯು ಸಹಜವಾಗಿ ನಡೆದಿದೆಯೆ? ಅಥವಾ ಕೃತಕವಾಗಿ ಸೃಷ್ಟಿಸಲಾಗಿದೆಯೇ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಈವರೆಗೆ ವಿದ್ಯುತ್ ಕೊರತೆ ಸೃಷ್ಟಿಯಾಗಿರಲಿಲ್ಲ. ಯಾವಾಗಲೂ ನಮ್ಮಲ್ಲಿ ಅಗತ್ಯಕ್ಕಿಂತ ಹೆಚ್ಚು ಪ್ರಮಾಣದ ವಿದ್ಯುತ್ ಉತ್ಪಾದನೆ ಆಗುತ್ತಿತ್ತು. ರಾಜ್ಯಕ್ಕೆ ಕಲ್ಲಿದ್ದಲು ದೊಡ್ಡ ಪ್ರಮಾಣದಲ್ಲೇನೂ ಬೇಕಿಲ್ಲ. ಆದರೂ, ಕೊರತೆ ಆಗಿರುವುದು ಸಂಶಯಕ್ಕೆ ಕಾರಣವಾಗಿದೆ. ವಿದ್ಯುತ್ ಉತ್ಪಾದನಾ ಸ್ಥಾವರಗಳನ್ನು ಖಾಸಗಿಯವರಿಗೆ ಉದ್ದೇಶದಿಂದ ಸರ್ಕಾರವೇ ಕೃತಕವಾಗಿ ಕಲ್ಲಿದ್ದಲಿನ ಅಭಾವ ಸೃಷ್ಟಿಸಬಾರದು. ಆ ರೀತಿ ಮಾಡಿದರೆ ಅದನ್ನು ನಾನು ಖಂಡಿಸುತ್ತೇನೆ' ಎಂದರು.

ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆಯನ್ನು ಖಾಸಗೀಕರಣ ಮಾಡಬಾರದು. ಖಾಸಗಿಯವರ ಕೈಗೆ ಒಪ್ಪಿಸಿದರೆ ರೈತರಿಗೆ ಅನ್ಯಾಯವಾಗುತ್ತದೆ. ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯನ್ನು ಖಾಸಗಿಯವರು ಸ್ಥಗಿತಗೊಳಿಸುತ್ತಾರೆ ಎಂದು ಹೇಳಿದರು.



ಇನ್ಫೊಸಿಸ್ ಫೌಂಡೇಷನ್ ಮುಖ್ಯಸ್ಥೆ ಸುಧಾ ಮೂರ್ತಿ ಅವರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ರೋಗಿಗಳ ಅನುಕೂಲಕ್ಕಾಗಿ ಆಂಬುಲೆನ್ಸ್ ಕೊಡುಗೆ ನೀಡಿದ್ದು, ಅದನ್ನು ಕಿದ್ವಾಯಿ ಸಂಸ್ಥೆಯ ನಿರ್ದೇಶಕ ಡಾ.ಸಿ.ರಾಮಚಂದ್ರ ಅವರಿಗೆ ಹಸ್ತಾಂತರಿಸಿದರು

ಮೆಟ್ರೊ: 'ರೋಲಿಂಗ್ ಸ್ಟಾಕ್' ಪರಿಶೀಲನೆ

ಬೆಂಗಳೂರು: ಮೆಟ್ರೊ ರೈಲಿನ ಹೊಸ 'ರೋಲಿಂಗ್ ಸ್ಟಾಕ್'ನ ಸುರಕ್ಷತಾ ಪರೀಕ್ಷಾ ಪ್ರಯೋಗಗಳ ಪರಿಶೀಲನೆ ಕೈಗೊಳ್ಳಲಾಗಿದೆ.

ಸಂಶೋಧನೆ, ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆಯ (ಆರ್‌ಡಿಎಸ್‌ಒ) ಪರೀಕ್ಷಾ ನಿರ್ದೇಶನಾಲಯದ ಜಂಟಿ ನಿರ್ದೇಶಕ ಅಮಿತ್ ಸಿಸೋಡಿಯಾ ನೇತೃತ್ವದ ತಂಡ ಈ ಕಾರ್ಯಕ್ಕೆ ಬೆಂಗಳೂರಿಗೆ ಬಂದಿದೆ.

ರೋಲಿಂಗ್ ಸ್ಟಾಕ್ ದಾಖಲೆಗಳ ತಾಂತ್ರಿಕ ಅನುಮೋದನೆಯ ನಂತರ ಈ ಪರಿಶೀಲನೆ ಕೈಗೊಳ್ಳಲಾಗಿದೆ. ರೋಲಿಂಗ್ ಸ್ಟಾಕ್‌ನ ವೇಗ ಪ್ರಮಾಣಪತ್ರವನ್ನು ಆರ್‌ಡಿಎಸ್‌ಒ, ರೈಲ್ವೆ ಸಚಿವಾಲಯದ ಅನುಮೋದನೆಗಾಗಿ ಮೆಟ್ರೊ ರೈಲು ಸುರಕ್ಷತೆ ಆಯುಕ್ತರ ಮೂಲಕ ಸಲ್ಲಿಸುತ್ತದೆ ಎಂದು ಬಿಎಂಆರ್‌ಸಿಎಲ್‌ಲ್ಲಿ ತಿಳಿಸಿದೆ.

ನ್ಯಾಯಾಧೀಶ ಸಾವು ಪ್ರಕರಣ: ಇಬ್ಬರಿಗೆ ನ್ಯಾಯಾಂಗ ಬಂಧನ

ಧನ್‌ಬಾದ್(ಪಿಟಿಐ): ಧನ್‌ಬಾದ್ ಕೋರ್ಟ್‌ನ ನ್ಯಾಯಾಧೀಶರಾಗಿದ್ದ ಉತ್ತಮ್ ಆನಂದ್ ಅವರ ಸಾವಿನ ಪ್ರಕರಣದಲ್ಲಿ ಬಂಧಿತರಾಗಿದ್ದ ಇಬ್ಬರು ಆರೋಪಿಗಳನ್ನು ಸೋಮವಾರ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ನಿಧನ ವಾರ್ತೆ

ಇಫ್ಕೊ ಅಧ್ಯಕ್ಷ

ನವದೆಹಲಿ (ಪಿಟಿಐ): ಪ್ರಮುಖ ರಸಗೊಬ್ಬರ ತಯಾರಿಕಾ ಸಂಸ್ಥೆ 'ಇಫ್ಕೊ'ದ ಅಧ್ಯಕ್ಷ ಬಲ್ವಿಂದರ್ ಸಿಂಗ್ ನಕಾಯ್ (87) ಸೋಮವಾರ ಇಲ್ಲಿ ನಿಧನರಾದರು.

ಕೃಷಿಕರಾಗಿದ್ದ ಅವರು, ಮೂರು ದಶಕಗಳಿಂದ ದೇಶದ ಸಹಕಾರ ಚಳವಳಿಗೆ ಶಕ್ತಿ ತುಂಬಿದ್ದರು.

ಸಮೀಕ್ಷೆ ಆಧಾರಿತ ಹೇಳಿಕೆ: ಸಚಿವ ಸುಧಾಕರ್ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಕುರಿತು ತಾವು ಮಾಡಿದ ಭಾಷಣಕ್ಕೆ ಅಪಾರ್ಥ ಕಲ್ಪಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ನಗರದ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಲ್ಲಿ (ನಿಮ್ಹಾನ್ಸ್) ಭಾನುವಾರ ನಡೆದ ವಿಶ್ವ ಮಾನಸಿಕ ಆರೋಗ್ಯ ದಿನದ ಕಾರ್ಯಕ್ರಮದಲ್ಲಿ ತಮ್ಮ ಭಾಷಣದ ವ್ಯಾಪಕ ಅರ್ಥವನ್ನು ಸಂಕೀರ್ಣಗೊಳಿಸಲಾಗಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

'ಯುವಜನರಲ್ಲಿ ಮದುವೆಗೆ ನಿರಾಕರಣೆ ಹಾಗೂ ಮಕ್ಕಳನ್ನು ಪಡೆಯುವುದಕ್ಕೆ ಹಿಂಜರಿಕೆಗೆ ಸಂಬಂಧಿಸಿದ ನನ್ನ ಹೇಳಿಕೆ ಸಮೀಕ್ಷೆ ಆಧರಿಸಿದ್ದು' ಎಂದು ಸ್ಪಷ್ಟಪಡಿಸಿದ್ದಾರೆ.

'ಈ ಭಾಷಣದ ಮೂಲಕ ಮಾನಸಿಕ ಸಮಸ್ಯೆ, ಸವಾಲುಗಳನ್ನು ಭಾರತದ ಕೌಟುಂಬಿಕ ಮೌಲ್ಯಗಳ ಮೂಲಕ ಹೇಗೆ ನಿವಾರಿಸಬಹುದು ಎನ್ನುವ ಸಂದೇಶ ನೀಡಲಾಗಿದೆ. ಆದರೆ, ಸಂಪೂರ್ಣ ಅಪಾರ್ಥ ಮಾಡಿಕೊಳ್ಳಲಾಗಿದೆ' ಎಂದು ಹೇಳಿದ್ದಾರೆ.

ದಕ್ಷಿಣ ವಿಭಾಗ ಪೊಲೀಸರ ಕಾರ್ಯಾಚರಣೆ • 19 ಆರೋಪಿಗಳ ಬಂಧನ

ಮೊಬೈಲ್ ಆ್ಯಪ್ ವಂಚನೆ; ₹16.54 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೀಪ್ ಶೇರರ್’ ಹಾಗೂ ‘ಸೂಪರ್ ಲೈಕ್’ ಆ್ಯಪ್ ಮೂಲಕ ಸಂಪಾದನೆ ಆಮಿಷವೊಡ್ಡಿ ಸಾರ್ವಜನಿಕರಿಂದ ಕೋಟಿಗಟ್ಟಲೇ ಹಣ ಸಂಗ್ರಹಿಸಿ ವಂಚಿಸುತ್ತಿದ್ದ ಜಾಲ ಪತ್ತೆಯಾಗಿದ್ದು, ಈ ಸಂಬಂಧ 19 ಆರೋಪಿಗಳನ್ನು ದಕ್ಷಿಣ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ನಗರದ ನಿವಾಸಿ ಸೈಯದ್ ಹಾಗೂ ತಿಪ್ಪೇಸ್ವಾಮಿ ಎಂಬುವರು ನೀಡಿದ್ದ ಪ್ರತ್ಯೇಕ ದೂರು ಆಧರಿಸಿ ಎಫ್ಐಆರ್ ದಾಖಲಿಸಿಕೊಳ್ಳಲಾಗಿತ್ತು. ಅದರನ್ವಯ 19 ಮಂದಿಯನ್ನು ಸೆರೆ ಹಿಡಿಯಲಾಗಿದೆ. ₹ 14 ಲಕ್ಷ ನಗದು ಹಾಗೂ ಆರೋಪಿಗಳ ಖಾತೆಯಲ್ಲಿದ್ದ ₹ 16.40 ಕೋಟಿ ಜಪ್ತಿ ಮಾಡಲಾಗಿದೆ. ಎರಡು ಕಾರು ಹಾಗೂ ಮೊಬೈಲ್‌ಗಳನ್ನೂ ಸುಪರ್ದಿಗೆ ಪಡೆಯಲಾಗಿದೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಹೇಳಿದರು.

‘ಬಂಧಿತ ಆರೋಪಿಗಳ ಪೈಕಿ ಹಲವರು, ಹೊರ ರಾಜ್ಯದ ನಿವಾಸಿಗಳು. ಅವರೆಲ್ಲರೂ ಸಂಘಟಿತರಾಗಿ ‘ಸೂಪರ್ ಲೈಕ್’ ಹಾಗೂ ‘ಕೀಪ್ ಶೇರರ್’ ಆ್ಯಪ್ ಸೃಷ್ಟಿಸಿದ್ದರು. ಅದರ ಮೂಲಕ ಜನರನ್ನು ಸಂಪರ್ಕಿಸಿ ಸದಸ್ಯತ್ವಕ್ಕೆಂದು ಹಣ ಪಡೆದು ವಂಚಿಸುತ್ತಿದ್ದರು. ದೆಹಲಿ, ಮುಂಬೈ, ಅಹಮದಾಬಾದ್, ಕೋಲ್ಕತ್ತಾ, ಹೈದರಾಬಾದ್, ಮೈಸೂರು ಸೇರಿ ಹಲವೆಡೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ವಿವರಿಸಿದರು.

ಲೈಕ್, ಶೇರ್ ಮಾಡಿದರೆ ಹಣ: ‘ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ನಂತರ, ಆ್ಯಪ್‌ನಲ್ಲಿ ಬರುವ ವಿಡಿಯೊಗಳನ್ನು ಲೈಕ್ ಮಾಡಿ ಶೇರ್ ಮಾಡಬೇಕು. ಈ ರೀತಿ ಒಂದು ಬಾರಿ ಮಾಡಿದರೆ ₹ 20 ಸಂಪಾದಿಸಬಹುದೆಂದು ಕಂಪನಿ ಹೇಳುತ್ತಿತ್ತು. ಹಣವನ್ನು ಆ್ಯಪ್‌ನಲ್ಲಿರುವ ಖಾತೆಗೆ ಜಮೆ ಮಾಡುವುದಾಗಿಯೂ ತಿಳಿಸುತ್ತಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗಳಿಸಿದ ಹಣ ಪಡೆಯಬೇಕಾದರೆ ಸದಸ್ಯತ್ವ ಪಡೆಯುವುದು ಕಡ್ಡಾಯವಾಗಿತ್ತು. ಸದಸ್ಯತ್ವಕ್ಕೆಂದು ಆರೋಪಿಗಳು ₹ 30 ಸಾವಿರ, ₹ 50 ಸಾವಿರ ಹಾಗೂ ₹ 80 ಸಾವಿರ ಮೊತ್ತದ ಮೂರು ಯೋಜನೆಗಳನ್ನು ರೂಪಿಸಿದ್ದರು. ಆರೋಪಿಗಳ ಮಾತು ನಂಬಿದ್ದ ನೂರಾರು ಗ್ರಾಹಕರು, ಸದಸ್ಯತ್ವದ ಹಣ ಪಾವತಿಸಿ ಆ್ಯಪ್ ಬಳಸಲಾರಂಭಿಸಿದ್ದರು.’

‘ಮನೆಯಿಂದಲೇ ಕೆಲಸ ಮಾಡಿ’ ಎಂಬ ಘೋಷಣೆಯೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಆರೋಪಿಗಳು ಜಾಹೀರಾತು ನೀಡುತ್ತಿದ್ದರು. ಇದನ್ನು ನಂಬಿ ಹಲವರು ಆರೋಪಿಗಳನ್ನು ಸಂಪರ್ಕಿಸಿದ್ದರು. ಅವರೆಲ್ಲರಿಗೂ ಇದೀಗ ವಂಚನೆಯಾಗಿದೆ. ಕೆಲ ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

‘ತನ್ನ ಹೆಸರು ಯಡಿಯೂರಪ್ಪನೆಂದು ಹೇಳುತ್ತಿದ್ದ’

‘ಆರೋಪಿಗಳ ಪತ್ತೆಗಾಗಿ ಪೊಲೀಸರ ತಂಡ ಹಲವು ದಿನಗಳಿಂದ ತನಿಖೆ ನಡೆಸುತ್ತಿತ್ತು. ಗ್ರಾಹಕರ ಸೋಗಿನಲ್ಲೂ ಕೆಲ ಆರೋಪಿಗಳನ್ನು ಸಂಪರ್ಕಿಸಿ ಮಾಹಿತಿ ಕಲೆ ಹಾಕಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪ್ರಕರಣದಲ್ಲಿ ಬಂಧಿಸಲಾಗಿರುವ ಅಬ್ದುಲ್ ಎಂಬಾತ, ತನ್ನ ಹೆಸರು ಯಡಿಯೂರಪ್ಪ ಎಂಬುದಾಗಿ ಹೇಳಿಕೊಳ್ಳುತ್ತಿದ್ದ. ಪೊಲೀಸರ ವಿಚಾರಣೆ ವೇಳೆಯೂ ಅದೇ ಹೆಸರಿನಿಂದ ಕರೆಯುವಂತೆ ಒತ್ತಾಯಿಸುತ್ತಿದ್ದ. ಬಹುತೇಕ ಆರೋಪಿಗಳು, ತಮ್ಮ ನೈಜ ಹೆಸರು ಬಚ್ಚಿಟ್ಟಿದ್ದರು. ಗಣ್ಯ ವ್ಯಕ್ತಿಗಳ ಹೆಸರೇ ತಮ್ಮ ಹೆಸರೆಂದು ವಾದಿಸುತ್ತಿದ್ದರು’ ಎಂದೂ ತಿಳಿಸಿದರು.

‘ಚೀನಾ ಪ್ರಜೆಗಳಿಂದ ಅಭಿವೃದ್ಧಿ’

‘ಚೀನಾ ವ್ಯಕ್ತಿಗಳ ಮೂಲಕ ‘ಕೀಪ್ ಶೇರರ್’ ಆ್ಯಪ್ ಅಭಿವೃದ್ಧಿಪಡಿಸಿದ್ದ ಆರೋಪಿಗಳು, ತಾವೇ ಅದರ ನಿರ್ವಹಣೆ ಮಾಡುತ್ತಿದ್ದರು. ಇದುವರೆಗೂ ಅವರು 1000ಕ್ಕೂ ಹೆಚ್ಚು ಜನರಿಂದ ₹ 25 ಕೋಟಿ ಸಂಗ್ರಹಿಸಿ ವಂಚಿಸಿರುವ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿದರು.

‘ಜನರಿಂದ ಸಂಗ್ರಹಿಸಿದ್ದ ಹಣವನ್ನು ಆರೋಪಿಗಳು, ಕ್ರಿಪ್ಟೊ ಕರೆನ್ಸಿ ಆಗಿ ಪರಿವರ್ತಿಸುತ್ತಿದ್ದರು. ಈ ಮೂಲಕ ಭಾರತದ ಆರ್ಥಿಕ ವ್ಯವಸ್ಥೆಗೂ ಧಕ್ಕೆ ತರುತ್ತಿದ್ದರು. ಕೃತ್ಯದ ಬಗ್ಗೆ ದೂರು ದಾಖಲಾಗುತ್ತಿದ್ದಂತೆ ವಿಶೇಷ ತಂಡ ರಚಿಸಲಾಗಿತ್ತು. ದೆಹಲಿ, ಹಿಮಾಚಲ ಪ್ರದೇಶ, ಮೈಸೂರು ಹಾಗೂ ಹಲವೆಡೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದೂ ಹೇಳಿವೆ.

ಸುದ್ದಿ 2 ನಿಮಿಷ

ಕುಡಿದ ಅಮಲಿನಲ್ಲಿ ಗಲಾಟೆ; ಮಗನ ಕೊಂದ ತಂದೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಸಂತೋಷ್ (29) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಅವರ ತಂದೆ ಗುರುರಾಜ್ (58) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಕೆಎಚ್‌ಬಿ ಕಾಲೊನಿಯಲ್ಲಿ ಸೋಮವಾರ ಮಧ್ಯಾಹ್ನ ಕೊಲೆ ನಡೆದಿದೆ. ಸಂಬಂಧಿಕರು ನೀಡಿದ್ದ ಮಾಹಿತಿ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಂತೋಷ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಯಲ್ಲಿ ಇರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಗುರುರಾಜ್, ವಾಹನ ಚಾಲನಾ ತರಬೇತಿ ಶಾಲೆ ನಡೆಸುತ್ತಿದ್ದ. ಮಗ ಸಂತೋಷ್ ಸಹ ಅದಕ್ಕೆ ಸಹಕಾರ ನೀಡುತ್ತಿದ್ದರು.’ ಎಂದೂ ತಿಳಿಸಿದರು.

ಚಾಕುವಿನಿಂದ ಎದೆಗೆ ಚುಚ್ಚಿದ: ‘ಸೋಮವಾರ ಮಧ್ಯಾಹ್ನವೇ ಮದ್ಯ ಕುಡಿದಿದ್ದ ಗುರುರಾಜ್, ಮನೆಗೆ ಬಂದು ಜಗಳ ತೆಗೆದಿದ್ದ. ಊಟ ಮಾಡುತ್ತಿದ್ದ ಸಂತೋಷ್, ತಂದೆಯ ವರ್ತನೆಯನ್ನು ಪ್ರಶ್ನಿಸಿದ್ದ. ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು’.

‘ಸಿಟ್ಟಾಗಿದ್ದ ಗುರುರಾಜ್, ಚಾಕುವಿನಿಂದ ಮಗನ ಎದೆಗೆ ಚುಚ್ಚಿದ್ದ. ಸ್ಥಳದಲ್ಲೇ ಕುಸಿದು ಬಿದ್ದಿದ್ದ ಸಂತೋಷ್ ಅವರನ್ನು ಸಂಬಂಧಿಕರು ಆಸ್ಪತ್ರೆಗೆ ಕರೆದೊಯ್ದಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದಾರೆ’ ಎಂದೂ ಅವರು ಮಾಹಿತಿ ನೀಡಿದರು.

ಭೂಕಂಪನ ನಿರ್ಲಕ್ಷ್ಯ: ಹೆದ್ದಾರಿ ತಡೆ



ಚಿಂಚೋಳಿ (ಕಲಬುರಗಿ ಜಿಲ್ಲೆ): ಚಿಂಚೋಳಿ ಹಾಗೂ ಕಾಳಗಿ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಪದೇಪದೇ ಭೂಕಂಪನ ಸಂಭವಿಸುತ್ತಿದ್ದರೂ ಜಿಲ್ಲಾಡಳಿತ ನಿರ್ಲಕ್ಷ್ಯ ಮಾಡುತ್ತಿದೆ ಎಂದು ಆರೋಪಿಸಿ ಗ್ರಾಮಸ್ಥರು ಸೋಮವಾರ, ಉಮರ್ಗಾ– ಸುಲೇಪೇಟ ರಾಜ್ಯ ಹೆದ್ದಾರಿಯಲ್ಲಿ ನಾಲ್ಕು ತಾಸು ಧರಣಿ ನಡೆಸಿದರು. ಇದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಗಡಿಕೇಶ್ವಾರ, ರುದ್ನೂರು, ರಾಯಕೋಡ, ಭೂತ್ಪೂರ, ಕುಪನೂರ, ಸುಲೇಪೇಟ, ಹೊಡೆಬೀರನಹಳ್ಳಿ, ಮರನಾಳ್, ಭಂಟನಳ್ಳಿ, ಬೆನಕನಳ್ಳಿ, ಕೊರವಿ, ಕೊರವಿ ತಾಂಡಾ, ಕುಡಳ್ಳಿ, ನಾವದಗಿ, ಹೊಸಳ್ಳಿ (ಎಚ್), ಹಲಚೇರಾ, ತೇಗಲತಿಪ್ಪಿ ಗ್ರಾಮಗಳಲ್ಲಿ ಒಂದು ವಾರದಲ್ಲಿ ಮೂರು ಬಾರಿ ಭೂಕಂಪನ ಅನುಭವಕ್ಕೆ ಬಂದಿದೆ. ಭೂಗರ್ಭ ಶಾಸ್ತ್ರಜ್ಞರು ಇದನ್ನು ಖಚಿತಪಡಿಸಿದ ಮೇಲೂ ಜಿಲ್ಲಾಡಳಿತ ಎಚ್ಚೆತ್ತುಕೊಂಡಿಲ್ಲ. ತಕ್ಷಣ ಜಿಲ್ಲಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಬೇಕು ಎಂದೂ ಆಗ್ರಹಿಸಿದರು.

ಈ ಗ್ರಾಮಗಳ ಪ್ರತಿ ಕುಟುಂಬಗಳಿಗೆ ತಾಡಪತ್ರಿ, ಬೆಡ್‌ಶೀಟ್, ರಗ್ಗು ವಿತರಿಸಬೇಕು. ಜೀವ ರಕ್ಷಣೆಗಾಗಿ ಜಿಂಕ್ ಶೀಟ್‌ನ ಶೆಡ್ ನಿರ್ಮಿಸಿಕೊಡಬೇಕು. ಭೂಕಂಪನ ಮಾಪನಯಂತ್ರ ಸ್ಥಾಪಿಸಬೇಕು ಎಂದೂ ಕೋರಿದರು.

ಕಾಂಗ್ರೆಸ್ ಮುಖಂಡರಾದ ಡಾ.ಶರಣಪ್ರಕಾಶ ಪಾಟೀಲ, ಸುಭಾಷ ರಾಠೋಡ, ಟಿ.ಟಿ.ಭೀಮರಾವ, ನಾಗರಿಕ ಹೋರಾಟ ಸಮಿತಿಯ ರೇವಣಸಿದ್ದಪ್ಪ ಅಣಕಲ್ ನೇತೃತ್ವ ವಹಿಸಿದ್ದರು.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹೊರ ತಂದಿರುವ ‘ಕರ್ನಾಟಕ ಗಡಿಭಾಗದ ಕನ್ನಡಿಗರ ಸಮಗ್ರ ಕಲ್ಯಾಣದತ್ತ ಪ್ರಾಧಿಕಾರದ ದೃಢ ಸಂಕಲ್ಪ’ ಮಾಹಿತಿ ಕೈಪಿಡಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಬಿಡುಗಡೆ ಮಾಡಿದರು. ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ಹಾಗೂ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ ಇದ್ದರು.

18 ಜನರ ಗುದದ್ವಾರದಲ್ಲಿ 5 ಕೆ.ಜಿ ಚಿನ್ನ

ಬೆಂಗಳೂರು: ಗುದದ್ವಾರದಲ್ಲಿ ಚಿನ್ನ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ 18 ಪ್ರಯಾಣಿಕರನ್ನು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದು, ಅವರಿಂದ 5 ಕೆ.ಜಿ ಚಿನ್ನ ಜಪ್ತಿ ಮಾಡಿದ್ದಾರೆ.

‘ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ಪ್ರಯಾಣಿಕರನ್ನು ತಪಾಸಣೆ ನಡೆಸಲಾಯಿತು. 18 ಪ್ರಯಾಣಿಕರ ಬಳಿ ₹ 2.40 ಕೋಟಿ ಮೌಲ್ಯದ ಚಿನ್ನದ ಗಟ್ಟಿಗಳು ಪತ್ತೆಯಾದವು’ ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

‘ದುಬೈ ಹಾಗೂ ಶಾರ್ಜಾದಿಂದ ಪ್ರತ್ಯೇಕ ವಿಮಾನಗಳಲ್ಲಿ ಪ್ರಯಾಣಿಕರು ನಗರ ನಿಲ್ದಾಣಕ್ಕೆ ಬಂದಿದ್ದರು. ಚಿನ್ನ ಸಾಗಣೆ ಬಗ್ಗೆ ಗುಪ್ತದಳದಿಂದ ಮಾಹಿತಿ ಬಂದಿದ್ದರಿಂದ, ಪ್ರತಿಯೊಬ್ಬ ಪ್ರಯಾಣಿಕರನ್ನು ತಡೆದು ತಪಾಸಣೆಗೆ ಒಳಪಡಿಸಲಾಯಿತು.’

ಚಿನ್ನ ಸಾಗಣೆ ಜಾಲ: ‘ವಶಕ್ಕೆ ಪಡೆದಿರುವ ಪ್ರಯಾಣಿಕರು, ತಮಿಳುನಾಡಿನವರು. ಆಗಾಗ ವಿದೇಶಕ್ಕೆ ಹೋಗಿ ಬರುತ್ತಿದ್ದರು. ಎಲ್ಲರೂ ಸಂಘಟಿತರಾಗಿ ಚಿನ್ನ ಸಾಗಣೆ ಜಾಲದಲ್ಲಿ ತೊಡಗಿರುವ ಮಾಹಿತಿ ಇದೆ’ ಎಂದು ಮೂಲಗಳು ಹೇಳಿವೆ.

ಪೊಲೀಸರಿಗೆ ಮಾಹಿತಿ ನೀಡಿದ್ದ ಪತ್ರಿಕಾ ವಿತರಕರು • ಕೆಲಸಕ್ಕಾಗಿ ಅಲೆದ ಬಾಲಕರು

ನಾಪತ್ತೆಯಾಗಿದ್ದ 3 ಮಕ್ಕಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ಕ್ರೀಡೆಯಲ್ಲಿ ಸಾಧನೆ ಮಾಡಿ, ಹೆಸರು ಹಾಗೂ ಹಣ ಸಂಪಾದನೆ ಮಾಡುತ್ತೇವೆ' ಎಂಬುದಾಗಿ ಪತ್ರ ಬರೆದಿಟ್ಟು ಭಾನುವಾರ ಮನೆಯಿಂದ ನಾಪತ್ತೆಯಾಗಿದ್ದ ಮೂವರು ಮಕ್ಕಳು, ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ಬೆಳಿಗ್ಗೆ ಪತ್ತೆಯಾಗಿದ್ದಾರೆ.

ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ 15 ವರ್ಷದ ಪರೀಕ್ಷಿತ್, ನಂದನ್ ಹಾಗೂ ಕಿರಣ್ ವಾಯುವಿಹಾರಕ್ಕೆ ಹೋಗಿ ಬರುವುದಾಗಿ ಹೇಳಿ ನಾಪತ್ತೆಯಾಗಿದ್ದರು. ಪೋಷಕರು ಠಾಣೆಗೆ ದೂರು ನೀಡಿದ್ದರು.

ಸೋಮವಾರ ನಸುಕಿನಲ್ಲಿ ಗಾಂಧಿನಗರ, ಆನಂದರಾವ್ ವೃತ್ತ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಪ್ರದೇಶದಲ್ಲಿ ಮಕ್ಕಳು ಓಡಾಡುತ್ತಿದ್ದರು. ‘ಕೆಲಸ ಇದೆಯಾ’ ಎಂಬುದಾಗಿ ಹಲವರ ಬಳಿ ಕೇಳುತ್ತಿದ್ದರು. ಮಕ್ಕಳ ಪೂರ್ವಾಪರ ವಿಚಾರಿಸಿದ್ದ ಗಾಂಧಿನಗರದ ಪತ್ರಿಕಾ ವಿತರಕ ಸಂಗಮ್ ಸುರೇಶ್ ಹಾಗೂ ಸ್ನೇಹಿತರು, ಹೊಯ್ಸಳ ಗಸ್ತು ವಾಹನದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು.

ಯುವತಿ, 3 ಮಕ್ಕಳಿಗಾಗಿ ಶೋಧ

‘ಬಾಗಲಗುಂಟೆ ಠಾಣೆ ವ್ಯಾಪ್ತಿಯಿಂದ ನಾಪತ್ತೆಯಾಗಿದ್ದ ಮೂವರು ಮಕ್ಕಳು ಸಿಕ್ಕಿದ್ದಾರೆ. ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಿಂದ ನಾಪತ್ತೆಯಾಗಿರುವ ಬಿಸಿಎ 3ನೇ ವರ್ಷದ ವಿದ್ಯಾರ್ಥಿನಿ ಅಮೃತವರ್ಷಿಣಿ (21), 12 ವರ್ಷ ವಯಸ್ಸಿನ ರಾಯನ್ ಸಿದ್ದಾರ್ಥ್, ಚಿಂತನ ಹಾಗೂ ಭೂಮಿ ಬಗ್ಗೆ ಮಾಹಿತಿ ಸಿಕ್ಕಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ನಾಲ್ವರೂ ರೈಲಿನಲ್ಲಿ ಮಂಗಳೂರಿಗೆ ಹೋಗಿರುವ ಅನುಮಾನವಿದೆ. ವಿಶೇಷ ತಂಡ ಈಗಾಗಲೇ ಮಂಗಳೂರಿಗೆ ಹೋಗಿದ್ದು, ನಾಲ್ವರಿಗಾಗಿ ಶೋಧ ನಡೆಸುತ್ತಿದೆ’ ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಮಕ್ಕಳನ್ನು ವಾಹನದಲ್ಲಿ ಠಾಣೆಗೆ ಕರೆದೊಯ್ದಿದ್ದ ಪೊಲೀಸರು, ಪೋಷಕರಿಗೆ ವಿಷಯ ತಿಳಿಸಿದ್ದರು. ಠಾಣೆಗೆ ಬಂದ ಪೋಷಕರು ಹಾಗೂ ಬಾಗಲಗುಂಟೆ ಪೊಲೀಸರು, ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಮಕ್ಕಳನ್ನು ಕರೆದೊಯ್ದಿದ್ದಾರೆ.

‘ನಾವು ಕಬಡ್ಡಿ ಚೆನ್ನಾಗಿ ಆಡುತ್ತೇವೆ. ಆದರೆ, ಪೋಷಕರು ಆಟಕ್ಕೆ ಕಳುಹಿಸುವುದಿಲ್ಲ. ಓದು ಓದು ಎಂದಷ್ಟೇ ಹೇಳುತ್ತಾರೆ. ಇದರಿಂದ ನೊಂದು ಮನೆ ಬಿಟ್ಟು ಬಂದಿದ್ದೆವು. ನೀವೇ ಕಬಡ್ಡಿ ಆಡಲು ಸಹಾಯ ಮಾಡಿ’ ಎಂದು ಮಕ್ಕಳು ಪೊಲೀಸರನ್ನೇ ಕೋರಿದ್ದರು.

ಪೊಲೀಸರು, ‘ಕೊರೊನಾ ಇದೆ. ಈಗ ಎಲ್ಲಿಯೂ ತರಬೇತಿ ನೀಡುವುದಿಲ್ಲ. ಸದ್ಯ ಮನೆಗೆ ಹೋಗಿ. ಮುಂದೆ ನಿಮಗೆ ಕಬಡ್ಡಿ ತರಬೇತಿ ಕೊಡಿಸಲು ಪೋಷಕರಿಗೆ ಹೇಳುತ್ತೇವೆ’ ಎಂಬುದಾಗಿ ಹೇಳಿ ಸಮಾಧಾನಪಡಿಸಿದರು.

ಪತ್ರಿಕೆ ಹಾಕುವ ಕೆಲಸ ಕೇಳಿದ್ದರು: ‘ಪ್ರಜಾವಾಣಿ’ ಜೊತೆ ಮಾತನಾಡಿದ ಸಂಗಮ್ ಸುರೇಶ್, ‘ಎಂದಿನಂತೆ ಬೆಳಿಗ್ಗೆ ಗಾಂಧಿನಗರಕ್ಕೆ ಬಂದು ಪತ್ರಿಕೆ ಹೊಂದಿಸುತ್ತಿದ್ದೆವು. 6.30 ಗಂಟೆ ಸುಮಾರಿಗೆ ಸ್ಥಳಕ್ಕೆ ಬಂದಿದ್ದ ಬಾಲಕ, ‘ಪತ್ರಿಕೆ ಹಾಕುವ ಕೆಲಸ ಕೊಡಿ’ ಎಂದಿದ್ದ. ಇನ್ನಿಬ್ಬರು ಬಾಲಕರು ದೂರದಲ್ಲಿ ನಿಂತಿದ್ದರು’ ಎಂದರು.

‘ಮೂವರು ಮಕ್ಕಳನ್ನು ಸಮಾಧಾನದಿಂದ ಮಾತನಾಡಿಸಿದ್ದೆ. ಪತ್ರಿಕೆ ಹಾಕುವ ಕೆಲಸ ಬೇಕಾದರೆ, ಆಧಾರ್ ಕಾರ್ಡ್ ತನ್ನಿ ಎಂದಿದ್ದೆ. ಆಗ ಮಕ್ಕಳು, ‘ಮನೆ ಬಿಟ್ಟು ಬಂದಿದ್ದೇವೆ. ವಾಪಸು ಹೋಗುವುದಿಲ್ಲ’ ಎಂದಿದ್ದರು. ಹೆಸರು ಕೇಳಿದಾಗ, ಪರೀಕ್ಷಿತ್, ನಂದನ್ ಹಾಗೂ ಕಿರಣ್ ಎಂದಿದ್ದರು.’

‘ಮಕ್ಕಳು ನಾಪತ್ತೆಯಾದ ಬಗ್ಗೆ ಪತ್ರಿಕೆಯಲ್ಲಿ ಹೆಸರು ಸಮೇತ ಸುದ್ದಿ ಬಂದಿತ್ತು. ನಾಪತ್ತೆಯಾಗಿದ್ದ ಮಕ್ಕಳು ಇವರೇ ಎಂಬುದು ತಿಳಿಯಿತು. ಹೆಚ್ಚು ಮಾತನಾಡಿಸಿದಾಗ ಮಕ್ಕಳು, ಸ್ಥಳದಿಂದ ಹೊರಟು ಹೋದರು. ಅವರನ್ನು ಹಿಂಬಾಲಿಸಿಕೊಂಡು ಹೋಗಿ, ಹೊಯ್ಸಳ ಗಸ್ತು ವಾಹನದ ಸಿಬ್ಬಂದಿಗೆ ಮಾಹಿತಿ ನೀಡಿದೆ’ ಎಂದೂ ಸುರೇಶ್ ಹೇಳಿದರು.

ಮೈಸೂರಿಗೆ ಹೋಗಿ ಬಂದಿದ್ದರು: ‘ಮನೆ ತೊರೆದಿದ್ದ ಮಕ್ಕಳು, ಮೈಸೂರಿಗೆ ಹೋಗಿದ್ದರು. ಇಡೀ ದಿನ ಅಲ್ಲಿಯೇ ಸುತ್ತಾಡಿದ್ದರು. ಭಾನುವಾರ ತಡರಾತ್ರಿ ಮೂವರು ಬೆಂಗಳೂರಿಗೆ ವಾಪಸು ಬಂದಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

7 ಜನ ಹೈಕೋರ್ಟ್ ನ್ಯಾಯಮೂರ್ತಿಗಳ ವರ್ಗಾವಣೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಸೇರಿದಂತೆ ಏಳು ಜನ ನ್ಯಾಯಮೂರ್ತಿಗಳನ್ನು ವಿವಿಧೆಡೆ ವರ್ಗಾವಣೆ ಮಾಡಿ ಕೇಂದ್ರ ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದೆ.

ಇದೇ ವೇಳೆ ಮೂವರು ವಕೀಲರು ಹಾಗೂ ನ್ಯಾಯಾಂಗ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ರಾಜಸ್ಥಾನ ಹೈಕೋರ್ಟ್‌ನ ನ್ಯಾಯಮೂರ್ತಿಗಳನ್ನಾಗಿ ನೇಮಿಸಲಾಗಿದೆ. ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಅವರನ್ನು ಪಟ್ನಾ ಹೈಕೋರ್ಟ್‌ಗೆ ವರ್ಗಾಯಿಸಲಾಗಿದ್ದು, ನ್ಯಾಯಮೂರ್ತಿ ರಾಜನ್ ಗುಪ್ತಾ ಅವರನ್ನು ಪಂಜಾಬ್–ಹರಿಯಾಣ ಹೈಕೋರ್ಟ್‌ನಿಂದ ಪಟ್ನಾ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಟಿ.ಎಸ್. ಶಿವಜ್ಞಾನಂ ಅವರನ್ನು ಮದ್ರಾಸ್ ಹೈಕೋರ್ಟ್‌ನಿಂದ ಕಲ್ಕತ್ತಾ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಸುರೇಶ್ವರ ಠಾಕೂರ್ ಅವರನ್ನು ಹಿಮಾಚಲ ಪ್ರದೇಶ ಹೈಕೋರ್ಟ್‌ನಿಂದ ಪಂಜಾಬ್–ಹರಿಯಾಣ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಸಂಜೀವ ಪ್ರಕಾಶ ಶರ್ಮಾ ಅವರನ್ನು ರಾಜಸ್ಥಾನ ಹೈಕೋರ್ಟ್‌ನಿಂದ ಪಟ್ನಾ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಟಿ.ಅಮರನಾಥ ಗೌಡ ಅವರನ್ನು ತೆಲಂಗಾಣ ಹೈಕೋರ್ಟ್‌ನಿಂದ ತ್ರಿಪುರಾ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಸುಭಾಷ ಚಂದ್ ಅವರನ್ನು ಅಲಹಾಬಾದ್ ಹೈಕೋರ್ಟ್‌ನಿಂದ ಜಾರ್ಖಂಡ್ ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ.

ಅಲ್ಲದೆ, ವಕೀಲರಾದ ಫರ್ಜಂದ್ ಅಲಿ, ಸುದೇಶ್ ಬನ್ಸಲ್, ಅನೂಪಕುಮಾರ್ ಧಂಡ್ ಹಾಗೂ ನ್ಯಾಯಾಂಗ ಇಲಾಖೆ ಅಧಿಕಾರಿಗಳಾದ ವಿನೋದ ಕುಮಾರ್ ಭರ್ವಾನಿ ಮತ್ತು ಮದನಗೋಪಾಲ ವ್ಯಾಸ್ ಅವರನ್ನು ರಾಜಸ್ಥಾನ ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ರಾಷ್ಟ್ರಪತಿಯವರ ಅನುಮೋದನೆಯೊಂದಿಗೆ ನೇಮಿಸಲಾಗಿದೆ.

ವಿವಿಧ ಹೈಕೋರ್ಟ್‌ಗಳಿಗೆ 9 ಜನ ಮುಖ್ಯ ನ್ಯಾಯಮೂರ್ತಿಗಳು ಹಾಗೂ 106 ನ್ಯಾಯಾಧೀಶರ ನೇಮಕಕ್ಕಾಗಿ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಮೇ ತಿಂಗಳಿಂದ ಇದುವರೆಗೆ ಶಿಫಾರಸು ಮಾಡಿತ್ತು.

ತಾಯಿ– ಮಗು ಹತ್ಯೆ; ‘ಆನ್‌ಲೈನ್’ ಸ್ನೇಹಿತ ಆರೋಪಿ?

ಬೆಂಗಳೂರು: ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಚಂದ್ರಕಲಾ (40) ಹಾಗೂ ಅವರ ಮಗು ರಾತನ್ಯ (4) ಹತ್ಯೆ ಸಂಬಂಧ, ಆರೋಪಿ ಪ್ರಶಾಂತ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಹೊಸಪೇಟೆಯ ಪ್ರಶಾಂತ್, ತಮ್ಮೂರಿನ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಸಾಮಾಜಿಕ ಜಾಲತಾಣ ಮೂಲಕ ಚಂದ್ರಕಲಾ ಅವರನ್ನು ಪರಿಚಯಿಸಿಕೊಂಡಿದ್ದ ವಿಶೇಷ ತಂಡ, ಪುರಾವೆಗಳನ್ನು ಸಂಗ್ರಹಿಸಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ನಗರದ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಪತಿ ಚನ್ನವೀರಸ್ವಾಮಿ ಜೊತೆ ಚಂದ್ರಕಲಾ ವಾಸವಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದರು. ಮೊದಲ ಮಗನನ್ನು ಬೇರೆ ಊರಿನಲ್ಲಿ ವಸತಿನಿಲಯದಲ್ಲಿಟ್ಟು ಓದಿಸುತ್ತಿದ್ದರು. ಮಗು ರಾತನ್ಯ ತಾಯಿ ಬಳಿ ಇತ್ತು.’

ಮೊದಲ ಭೇಟಿಯಲ್ಲೇ ಕೊಲೆ: ‘ಆರೋಪಿ ಪ್ರಶಾಂತ್, ಚಂದ್ರಕಲಾ ಜೊತೆ ನಿತ್ಯವೂ ಮಾತನಾಡುತ್ತಿದ್ದ. ‘ನಿಮ್ಮನ್ನು ನೋಡಬೇಕು. ಯಾವಾಗ ಮನೆಗೆ ಬರಲಿ’ ಎಂದು ಕೇಳುತ್ತಿದ್ದ. ಆತ ಹೆಚ್ಚು ಒತ್ತಾಯಪಡಿಸಿದ್ದರಿಂದ ಅ. 6ರಂದು ಮನೆಗೆ ಬರುವಂತೆ ಚಂದ್ರಕಲಾ ಹೇಳಿದ್ದರು’.

‘ಹೊಸಪೇಟೆಯಿಂದ ಬೆಂಗಳೂರಿಗೆ ಬಂದಿದ್ದ ಇಬ್ಬರೂ ಕೊಠಡಿಗೆ ಹೋಗಿ ಮಾತನಾಡುತಿದ್ದರು. ಮಗು ಸಹ ಜೊತೆಗಿತ್ತು.’

‘ಮಾತನಾಡುತ್ತಿದ್ದಾಗಲೇ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಸಿಟ್ಟಾಗಿದ್ದ ಆರೋಪಿ, ಚಂದ್ರಕಲಾ ಅವರನ್ನು ಕೊಂದಿದ್ದ. ಮಗು ಜೋರಾಗಿ ಅಳಲಾರಂಭಿಸಿತ್ತು. ಇದರಿಂದ ಮಗುವನ್ನು ಸಾಯಿಸಿದ್ದ’ ಎಂದೂ ಮೂಲಗಳು ತಿಳಿಸಿವೆ.

ಮೈಕೊ ಲೇಔಟ್ ಪೊಲೀಸರ ಕಾರ್ಯಾಚರಣೆ • ದೂರು ನೀಡಿದ್ದ ವ್ಯಾಪಾರಿ

‘ಹನಿಟ್ರ್ಯಾಪ್’ ಜಾಲ; ಮೂವರ ಬಂಧನ

ಬೆಂಗಳೂರು: ತರಕಾರಿ ವ್ಯಾಪಾರಿಯೊಬ್ಬರನ್ನು ‘ಹನಿಟ್ರ್ಯಾಪ್’ ಜಾಲಕ್ಕೆ ಬೀಳಿಸಿ ಸುಲಿಗೆ ಮಾಡಿದ್ದ ಆರೋಪದಡಿ ಮಹಿಳೆ ಸೇರಿ ಮೂವರನ್ನು ಮೈಕೊ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

‘ನೇಹಾ ಫಾತಿಮಾ, ತಸ್ಲೀಮ್ ಬಾಷಾ, ಮೊಹಮ್ಮದ್ ಅರ್ಬಾಜ್ ಬಂಧಿತರು. 36 ವರ್ಷದ ಸಂತ್ರಸ್ತ ನೀಡಿದ್ದ ದೂರು ಆಧರಿಸಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ ₹ 16 ಸಾವಿರ ನಗದು, ಕಾರು, ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ತರಕಾರಿ ಮಳಿಗೆಯಲ್ಲಿ ಪರಿಚಯ: ‘ದೂರುದಾರ ತರಕಾರಿ ಮಳಿಗೆ ಇಟ್ಟುಕೊಂಡಿದ್ದಾರೆ. ಸೆ. 29ರಂದು ಮಳಿಗೆಗೆ ಬಂದಿದ್ದ ಆರೋಪಿ ನೇಹಾ ಫಾತಿಮಾ ಆತ್ಮೀಯವಾಗಿ ಮಾತನಾಡಿಸಿ, ಮೊಬೈಲ್ ನಂಬರ್ ವಿನಿಯಮ ಮಾಡಿಕೊಂಡಿದ್ದ’ ಎಂದೂ ಪೊಲೀಸರು ಹೇಳಿದರು.

‘ಸಲುಗೆಯಿಂದ ಮಾತನಾಡುತ್ತಿದ್ದ ಮಹಿಳೆ, ಖಾಸಗಿಯಾಗಿ ಭೇಟಿಯಾಗೋಣವೆಂದು ಹೇಳಿದ್ದಳು. ಅದನ್ನು ನಂಬಿದ್ದ ದೂರುದಾರ, ಬಿಟಿಎಂ ಬಡಾವಣೆಯ 2ನೇ ಹಂತದ ಎನ್.ಎಸ್. ಪಾಳ್ಯ ಬಳಿ ಇರುವ ಕಟ್ಟಡವೊಂದರ 2ನೇ ಮಹಡಿಯಲ್ಲಿರುವ ಮನೆಗೆ ಹೋಗಿದ್ದರು. ಅವರನ್ನು ಸ್ವಾಗತಿಸಿ ಮನೆಯೊಳಗೆ ಕರೆದುಕೊಂಡಿದ್ದ ಮಹಿಳೆ, ಬಾಗಿಲನ್ನು ಒಳಗಿನಿಂದ ಲಾಕ್ ಮಾಡಿದ್ದಳು.’

‘ಇಬ್ಬರೂ ಸೇರಿ ಬಿಯರ್ ಕುಡಿಯಲಾರಂಭಿಸಿದ್ದರು. ಇದೇ ಸಂದರ್ಭದಲ್ಲೇ ಮಹಿಳೆ, ‘ಇದು ನನ್ನ ಮನೆ. ಇಲ್ಲಿ ಯಾರೂ ಬರುವುದಿಲ್ಲ. ಇಬ್ಬರೂ ಒಟ್ಟಿಗೆ ಸಮಯ ಕಳೆಯೋಣ. ಬಟ್ಟೆಗಳನ್ನು ಬಿಚ್ಚಿ’ ಎಂದಿದ್ದಳು. ಅದನ್ನು ನಂಬಿದ್ದ ದೂರುದಾರ, ಬಟ್ಟೆ ಬಿಚ್ಚಲಾರಂಭಿಸಿದ್ದರು.’

‘ಮೊದಲೇ ಸಂಚು ರೂಪಿಸಿದ್ದಂತೆ, ಇತರೆ ಆರೋಪಿಗಳು ಮನೆಗೆ ಬಂದು ಬಾಗಿಲು ಬಡಿದಿದ್ದರು. ಸಂತ್ರಸ್ತನೇ ಬಾಗಿಲು ತೆರೆದಿದ್ದರು. ಒಳನುಗ್ಗಿದ್ದ ಆರೋಪಿಗಳು, ‘ನನ್ನ ತಂಗಿ ಜೊತೆ ಏನು ಮಾಡುತ್ತಿದ್ದಿಯಾ? ಆಕೆಯ ಬಾಳು ಹಾಳು ಮಾಡಲು ಬಂದಿದ್ದೀಯಾ’ ಎಂದು ಹೆದರಿಸಿದ್ದರು. ನಂತರ, ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಿಕೊಂಡಿದ್ದರು’ ಎಂದೂ ಪೊಲೀಸರು ವಿವರಿಸಿದರು.

ಸುಲಿಗೆ ಮಾಡಿ, ₹ 10 ಲಕ್ಷಕ್ಕೆ ಬೇಡಿಕೆ: ‘ದೂರುದಾರ ಬಳಿ ಇದ್ದ ₹ 5 ಸಾವಿರ ನಗದು, ಮೊಬೈಲ್, ಎಟಿಎಂ ಕಾರ್ಡ್‌ನ್ನು ಆರೋಪಿಗಳು ಕಿತ್ತುಕೊಂಡಿದ್ದರು. ಮೊಬೈಲ್‌ನಲ್ಲಿದ್ದ ಫೋನ್ ಪೇ ಆ್ಯಪ್‌ನಿಂದ ₹ 32 ಸಾವಿರ ವರ್ಗಾವಣೆ ಮಾಡಿಕೊಂಡಿದ್ದರು’ ಎಂದೂ ಪೊಲೀಸರು ಹೇಳಿದರು.

‘ನಿಮ್ಮ ವಿಡಿಯೊ ನಮ್ಮ ಬಳಿ ಇದೆ. ಅದನ್ನು ನಿಮ್ಮ ಸಂಬಂಧಿಕರಿಗೆ ಕಳುಹಿಸಿ ಹೆಸರು ಹಾಳು ಮಾಡುತ್ತೇವೆ. ಈ ರೀತಿ ಮಾಡಬಾರದೆಂದರೆ ₹ 10 ಲಕ್ಷ ತಂದುಕೊಡು’ ಎಂದೂ ಆರೋಪಿಗಳು ಬೇಡಿಕೆ ಇಟ್ಟಿದ್ದರು. ನಂತರ, ದೂರುದಾರ ತಂದಿದ್ದ ಕಾರಿನ ಸಮೇತ ಆರೋಪಿಗಳು ಪರಾರಿಯಾಗಿದ್ದರು’ ಎಂದೂ ವಿವರಿಸಿದರು.

‘ಸಂತ್ರಸ್ತ ದೂರು ನೀಡುತ್ತಿದ್ದಂತೆ ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಹನಿಟ್ರ್ಯಾಪ್ ಜಾಲ ಪತ್ತೆಯಾಯಿತು. ಸದ್ಯ ಮೂವರಷ್ಟೇ ಸಿಕ್ಕಿಬಿದ್ದಿದ್ದು, ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ’ ಎಂದೂ ಪೊಲೀಸರು ಹೇಳಿದರು.

‘ತಂಡ ಕಟ್ಟಿಕೊಂಡಿದ್ದರು’

‘ಆರೋಪಿ ತಸ್ಲೀಮ್, ಕಟ್ಟಡ ನಿರ್ಮಾಣದ ಮೇಸ್ತ್ರಿ ಆಗಿದ್ದರು. ಅರ್ಬಾಜ್, ಸಂಘಟನೆಯೊಂದರ ಸದಸ್ಯನಾಗಿದ್ದ. ಮಹಿಳೆ ನೇಹಾಫಾತಿಮಾ, ಗೃಹಿಣಿ. ಮೂವರು ಸೇರಿ ಹನಿಟ್ರ್ಯಾಪ್ ಮಾಡಲು ಸಂಚು ರೂಪಿಸಿದ್ದರು. ಮಹಿಳೆ ಮೂಲಕ ದೂರುದಾರರನ್ನು ಪರಿಚಯಿಸಿಕೊಂಡು ಕೃತ್ಯ ಎಸಗಿದ್ದರು’ ಎಂದೂ ಪೊಲೀಸರು ಹೇಳಿದರು.

ಜೈಲಿನಲ್ಲಿ ಸ್ನೇಹ; ಹೊರಬಂದು ವಾಹನ ಕಳವು

ಬೆಂಗಳೂರು: ನಗರದಲ್ಲಿ ನಡೆದಿದ್ದ ದ್ವಿಚಕ್ರ ವಾಹನ ಕಳವು ಪ್ರಕರಣ ಸಂಬಂಧ ರೌಡಿ ನವೀನ್‌ನನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

‘ನವೀನ್, ಇನ್ನೊಬ್ಬ ಆರೋಪಿ ಬೇಲೂರಿನ ಪ್ರಭು ಎಂಬಾತನ ಜೊತೆ ಸೇರಿ ಕೃತ್ಯ ಎಸಗುತ್ತಿದ್ದ. ಆರೋಪಿಯಿಂದ ₹ 4.40 ಲಕ್ಷ ಮೌಲ್ಯದ ಮೂರು ರಾಯಲ್ ಎನ್‌ಫೀಲ್ಡ್ ಸೇರಿದಂತೆ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನವೀನ್ ಹಾಗೂ ಪ್ರಭು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಪರಿಚಯವಾಗಿದ್ದರು. ಹೊರ ಬಂದ ನಂತರ ದ್ವಿಚಕ್ರ ವಾಹನಗಳ ಲಾಕ್ ಮುರಿಯುವಲ್ಲಿ ಪರಿಣಿತನಾಗಿದ್ದ ಪ್ರಭು, ವಾಹನಗಳನ್ನು ಕದ್ದು, ನವೀನ್‌ಗೆ ತಂದು ಕೊಡುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

ಐಪಿಎಲ್ ಬೆಟ್ಟಿಂಗ್: ಬಂಧನ

ಬೆಂಗಳೂರು: ಐಪಿಎಲ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಆತನಿಂದ ₹ 4 ಲಕ್ಷ ನಗದು ಜಪ್ತಿ ಮಾಡಿದ್ದಾರೆ. ‘ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಪಟ್ಟೇಗಾರಪಾಳ್ಯದ ಬಿಡಿಎ ಬಡಾವಣೆಯ ಹೋಟೆಲೊಂದರ ಬಳಿ ಅ. 9ರಂದು ಆರೋಪಿ ಕಾಣಿಸಿಕೊಂಡಿದ್ದ. ಪಂದ್ಯಗಳ ಸೋಲು ಹಾಗೂ ಗೆಲುವು ಲೆಕ್ಕಾಚಾರದಲ್ಲಿ ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆತನನ್ನು ಬಂಧಿಸಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಕಿಮ್ಸ್ ಅಕ್ರಮ; ಶುಲ್ಕ ಗುಳುಂ

ಬೆಂಗಳೂರು: ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ (ಕಿಮ್ಸ್) ವಿದ್ಯಾರ್ಥಿಗಳ ಶುಲ್ಕವನ್ನು ಸ್ವಂತಕ್ಕೆ ಬಳಸಿಕೊಂಡು ಅಕ್ರಮ ಎಸಗಿರುವ ಪ್ರಕರಣಗಳು ಒಂದೊಂದಾಗಿ ಹೊರಬೀಳುತ್ತಿದ್ದು, ಇದೀಗ ವಿ.ವಿ.ಪುರ ಠಾಣೆಯಲ್ಲಿ ಮತ್ತೆರಡು ಎಫ್‌ಐಆರ್‌ಗಳು ದಾಖಲಾಗಿವೆ.

‘ಅಪರಾಧ ಸಂಚು, ವಂಚನೆ, ನಂಬಿಕೆ ದ್ರೋಹ ಆರೋಪದಡಿ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಚೇರ್ಮನ್, ಮಾಜಿ ಅಧ್ಯಕ್ಷ ಹಾಗೂ ಮಾಜಿ ನಿರ್ದೇಶಕರ ವಿರುದ್ಧ ಈಗಾಗಲೇ ಮೂರು ಪ್ರಕರಣಗಳು ದಾಖಲಾಗಿವೆ. ಸೋಮವಾರ ಮತ್ತೆರಡು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಡಾ. ಸಿ. ಸಿದ್ದರಾಮಯ್ಯ ನೀಡಿರುವ ದೂರುಗಳ ಆಧಾರದಲ್ಲಿ ಐದೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಶುಲ್ಕ ಪಾವತಿಸಿದ್ದ ವಿದ್ಯಾರ್ಥಿಗಳ ಹೇಳಿಕೆಯನ್ನೂ ಪಡೆದು ಕಾನೂನು ಕ್ರಮ ಜರುಗಿಸಲಾಗುವುದು’ ಎಂದೂ ತಿಳಿಸಿದರು.

2016–17ನೇ ಸಾಲಿನಲ್ಲಿ ಅಕ್ರಮ: ‘ಕಿಮ್ಸ್‌ನಲ್ಲಿ 2016–17ನೇ ಸಾಲಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಲು ವಿದ್ಯಾರ್ಥಿ ಅಮೃತ್ ರಾಜ್ ಇಚ್ಛಿಸಿದ್ದರು. ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿದ್ದ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಡಿ.ಎನ್. ಬೆಟ್ಟೇಗೌಡ ಹಾಗೂ ಮಾಜಿ ನಿರ್ದೇಶಕ ಅಚ್ಚೇಗೌಡ ಶಿವಣ್ಣ, ₹ 40 ಲಕ್ಷ ಪಡೆದಿದ್ದರು. ಈ ಸಂಗತಿ ದೂರಿನಲ್ಲಿದೆ’ ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

‘ಇನ್ನೊಂದು ಪ್ರಕರಣದಲ್ಲಿ, ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿ ಸಾಕ್ಷಿ ಎಂಬ ವಿದ್ಯಾರ್ಥಿನಿಯಿಂದ ಸಂಘದ ಮಾಜಿ ಅಧ್ಯಕ್ಷ ಡಾ. ಅಪ್ಪಾಜಿಗೌಡ ಹಾಗೂ ಮಾಜಿ ನಿರ್ದೇಶಕ ಜಿ.ಎಲ್. ನರೇಂದ್ರಬಾಬು ₹ 50 ಲಕ್ಷ ಪಡೆದಿದ್ದರು. ಸಂಘಕ್ಕೆ ಕೇವಲ 20 ಸಾವಿರ ಪಾವತಿಸಿದ್ದರೆಂಬುದಾಗಿ ದೂರುದಾರ ಆರೋಪಿಸಿದ್ದಾರೆ’ ಎಂದೂ ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತರಿಂದ ಪ್ರತಿಭಟನೆ

ಅಜಯ್ ಮಿಶ್ರಾ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶದ ಲಖಿಂಪುರ– ಖೇರಿಯಲ್ಲಿ ನಡೆದ ರೈತರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ಕೈಬಿಡಬೇಕು ಮತ್ತು ಪ್ರಕರಣದ ಎಲ್ಲ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ರೇಸ್‌ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಬಳಿ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ‘ಕೋವಿಡ್‌ನಿಂದ ದೇಶದಲ್ಲಿ ಬೃಹತ್ ಸಂಖ್ಯೆಯ ಜನರು ಮೃತಪಟ್ಟಾಗ ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಲಿಲ್ಲ. ಕೇಂದ್ರ ಸಚಿವರ ಕುಟುಂಬದಿಂದಲೇ ರೈತರ ಹತ್ಯೆಯಾಗಿದೆ. ಈಗಲೂ ಪ್ರಧಾನಿ ಮೌನ ಮುರಿಯುತ್ತಿಲ್ಲ. ಅವರು ತಮ್ಮ ಹೆಸರನ್ನು ಮೌನೇಂದ್ರ ಮೋದಿ ಎಂಬುದಾಗಿ ಬದಲಾಯಿಸಿಕೊಳ್ಳಬೇಕು’ ಎಂದರು.

ಅಜಯ್ ಮಿಶ್ರಾ ಅವರನ್ನು ತಕ್ಷಣವೇ ಸಚಿವ ಸ್ಥಾನದಿಂದ ವಜಾಗೊಳಿಸಬೇಕು. ರೈತರ ಹತ್ಯೆಯಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಬಂಧಿಸಿ, ಜೈಲಿಗೆ ಕಳುಹಿಸಬೇಕು ಎಂದು ಆಗ್ರಹಿಸಿದರು.



ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಕಚೇರಿ ಬಳಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮಾತನಾಡಿದರು. ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿನ ಅಧ್ಯಕ್ಷೆ ಪುಷ್ಪಾ ಅಮರನಾಥ್, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಶಾಸಕ ರಿಜ್ವಾನ್ ಅರ್ಷದ್, ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಇದ್ದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮಾತನಾಡಿ, ‘ಮೋದಿಯವರಿಗೆ ಅಂಬಾನಿಯ ಮೊಮ್ಮಗನನ್ನು ನೋಡಲು ಸಮಯವಿದೆ. ಆದರೆ, ರೈತರ ಸಮಸ್ಯೆ ಆಲಿಸಲು ಬಿಡುವು ಇಲ್ಲ. ಕೇಂದ್ರ ಸಚಿವರ ಮಗನಿಂದ ರೈತರ ಕಗ್ಗೊಲೆ ನಡೆದರೂ ಸಾಂತ್ವನ ಹೇಳದಿರುವುದು ನಾಚಿಕೆಗೇಡು’ ಎಂದರು.

ರೈತರ ಕೊಲೆ ಆರೋಪಿಯಾಗಿರುವ ಆಶಿಶ್ ಮಿಶ್ರಾನಿಗೆ ಪೊಲೀಸರು ರಾಜ ಮರ್ಯಾದೆ ನೀಡುತ್ತಿದ್ದಾರೆ. ರೈತರ ಹತ್ಯೆ ಪ್ರಕರಣದಲ್ಲಿ ಕೇಂದ್ರ ಸಚಿವರ ಮಗನೇ ಆರೋಪಿಯಾಗಿರುವುದರಿಂದ ಅಜಯ್ ಮಿಶ್ರಾ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು.

ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ ಶ್ರೀನಿವಾಸ್, ಶಾಸಕ ರಿಜ್ವಾನ್ ಅರ್ಷದ್, ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಸಹ ಅಧ್ಯಕ್ಷ ವಿ.ಆರ್. ಸುದರ್ಶನ್, ಮುಖಂಡ ಎಚ್.ಎಂ ರೇವಣ್ಣ, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷ ಕೀರ್ತಿ ಗಣೇಶ್, ಬೆಂಗಳೂರಿನ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರಾದ ರಾಜಕುಮಾರ್, ಕೃಷ್ಣಪ್ಪ, ಜಿ.ಶೇಖರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದ ಬೆಂಗಳೂರು ವಿ.ವಿ

ಸೇವಾ ಭದ್ರತೆಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಬೆಂಗಳೂರು ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರನ್ನು ಏಕಾಏಕಿ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದನ್ನು ಖಂಡಿಸಿ 400ಕ್ಕೂ ಹೆಚ್ಚು ಸಿಬ್ಬಂದಿಯು ವಿಶ್ವವಿದ್ಯಾಲಯದ ಆಡಳಿತ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಬೋಧಕೇತರ ಸಂಘ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಒಕ್ಕೂಟಗಳ ನೇತೃತ್ವದಲ್ಲಿ ಗುತ್ತಿಗೆ ಸಿಬ್ಬಂದಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ವಿರುದ್ಧ ಧಿಕ್ಕಾರ ಕೂಗಿದರು.

‘ಕುಲಸಚಿವೆ ಕೆ.ಜ್ಯೋತಿ ಹಾಗೂ ವಿತ್ತಾಧಿಕಾರಿ ಪಾರ್ವತಿ ಅವರ ಸರ್ವಾಧಿಕಾರಿ ಧೋರಣೆಯಿಂದ ನೂರಾರು ಮಂದಿ ಸಿಬ್ಬಂದಿ ಬೀದಿಗೆ ಬಿದ್ದಿದ್ದೇವೆ. ಇವರನ್ನು ಸೇವೆಯಿಂದ ಮುಕ್ತಗೊಳಿಸಬೇಕು’ ಎಂದರು.

ಬೋಧಕೇತರ ಸಂಘದ ಕಾರ್ಯದರ್ಶಿ ಎಚ್.ಕೃಷ್ಣಪ್ಪ, ‘ವ್ಯಾಪ್ತಿ ಮೀರಿ ಕಾರ್ಯ ನಿರ್ವಹಿಸುತ್ತಿರುವ ಕುಲಸಚಿವೆ ಜ್ಯೋತಿ ಅವರು ಕುಲಪತಿ ಹಾಗೂ ಸಿಂಡಿಕೇಟ್ ಸಭೆಯ ಗಮನಕ್ಕೂ ತರದೆ ಆದೇಶ ಹೊರಡಿಸಿದ್ದಾರೆ. ಇವರೊಂದಿಗೆ ವಿತ್ತಾಧಿಕಾರಿ ಕೈ ಜೋಡಿಸಿದ್ದು, ಸರ್ಕಾರಿ ಆದೇಶ ಪರಿಪಾಲನೆ ಹೆಸರಿನಲ್ಲಿ ಗುತ್ತಿಗೆ ನೌಕರರ ಜೀವನದ ಜೊತೆ ಆಟವಾಡುತ್ತಿದ್ದಾರೆ’ ಎಂದು ದೂರಿದರು.



ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿ ಎದುರು ಹೊರಗುತ್ತಿಗೆ ಸಿಬ್ಬಂದಿ ಪ್ರತಿಭಟನೆ ನಡೆಸಿದರು.

‘ಯಾವುದೇ ಬದಲಿ ವ್ಯವಸ್ಥೆ ಮಾಡದೆ, ಆದೇಶ ಹೊರಡಿಸಲಾಗಿದೆ. ಹತ್ತಾರು ವರ್ಷಗಳಿಂದ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರದ ನಿರ್ಧಾರದಿಂದ ನೂರಾರು ಕುಟುಂಬಗಳು ಬೀದಿಗೆ ಬೀಳುವ ಹಂತದಲ್ಲಿವೆ’ ಎಂದು ಅಖಿಲ ಭಾರತ ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಂ.ಬಿ.ಸಜ್ಜನ್ ಬೇಸರ ವ್ಯಕ್ತಪಡಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಕುಲಪತಿ ಪ್ರೊ.ಕೆ.ಆರ್.ವೇಣುಗೋಪಾಲ್, ‘ಕುಲಸಚಿವರ ಆದೇಶವನ್ನು ಹಿಂಪಡೆಯಲಾಗಿದೆ. ಸಿಬ್ಬಂದಿ ಸೇವೆ ಮುಂದುವರಿಸಲಾಗುವುದು’ ಎಂದರು.

ಕುಲಪತಿಗಳ ಭರವಸೆ ಒಪ್ಪದ ಸಿಬ್ಬಂದಿ ಕುಲಸಚಿವರೇ ಆದೇಶ ಹಿಂಪಡೆಯುವಂತೆ ಪಟ್ಟು ಹಿಡಿದರು.

ಮೈಸೂರಲ್ಲಿ ಮನೆ ಕುಸಿತ

ಮೈಸೂರು: ಮೂರು ದಿನಗಳಿಂದ ಸುರಿಯುತ್ತಿರುವ ಮಳೆಗೆ ನಗರದ ಇಟ್ಟಿಗೆಗೂಡಿನಲ್ಲಿ ಸೋಮವಾರ ಸಂಜೆ ಎರಡು ಅಂತಸ್ತಿನ ಮನೆ ಕುಸಿದಿದೆ.

ತಾರಸಿಯ ಒಂದು ಪಾರ್ಶ್ವ ಕುಸಿಯುತ್ತಿದ್ದಂತೆ ಪಾಲಿಕೆಯ ನಿಯಂತ್ರಣ ಕಚೇರಿಗೆ ಮಾಹಿತಿ ನೀಡಲಾಯಿತು. ಸ್ಥಳಕ್ಕೆ ಬಂದ ರಕ್ಷಣಾ ತಂಡ ಅಭಯ್ 10 ಸಿಬ್ಬಂದಿ, ಮನೆಯೊಳಗೆ ಸಿಲುಕಿದ್ದ ಪುಟ್ಟಮಣಿ ಹಾಗೂ ರಾಜೇಶ್ವರಿ ಅವರನ್ನು ರಕ್ಷಿಸಿ ಹೊರಕ್ಕೆ ಕರೆ ತಂದರು.

ಜಿಲ್ಲೆಯ ಬೆಟ್ಟದಪುರ ಹೋಬಳಿಯಲ್ಲಿ ಜೋರು ಮಳೆಯಾಯಿತು.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ, ನಾಗಮಂಗಲದಲ್ಲಿ ಸೋಮವಾರ ಧಾರಾಕಾರ ಮಳೆಯಾಗಿದೆ. ಕೆ.ಆರ್. ಪೇಟೆಯ ಮುಖ್ಯ ರಸ್ತೆಯಲ್ಲಿ ರೈತರೊಬ್ಬರು ಆಯುಧಪೂಜೆಯ ಪ್ರಯುಕ್ತ ಮಾರಾಟ ಮಾಡಲು ತಂದಿದ್ದ ಬೂದುಗುಂಬಳ ಕಾಯಿ ಮಳೆಯ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿವೆ.

ಧಾರವಾಡ, ಬಾಗಲಕೋಟೆಯಲ್ಲಿ ಸಿಡಿಲು ಬಡಿದು ಇಬ್ಬರ ಸಾವು

ಹುಬ್ಬಳ್ಳಿ: ಗುಡುಗು ಸಹಿತ ರಭಸದ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ ಅವಳಿನಗರ, ಬೆಳಗಾವಿ, ಬಾಗಲಕೋಟೆ ಸೇರಿದಂತೆ ಹಲವೆಡೆ ಸೋಮವಾರ ಗುಡುಗು ಸಹಿತ ರಭಸದ ಮಳೆಯಾಗಿದೆ.

ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ಸೈದಾಪುರ ಗ್ರಾಮದ ರೈತ ಸಂಗಪ್ಪ ವಾರದ (48) ಹಾಗೂ ಬಾಗಲಕೋಟೆ ಜಿಲ್ಲೆಯ ಕೆರೂರಿನ ಮುಷ್ಟಿಗೇರಿ ಗ್ರಾಮದಲ್ಲಿ ಕೃಷಿ ಕೆಲಸದಲ್ಲಿ ತೊಡಗಿದ್ದ ಯುವಕ ಮಹೇಶ ದ್ಯಾಮಣ್ಣ ಬುಂಡಣಗೌಡ್ರ (18) ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಧಾರವಾಡ ಮಳೆಯಿಂದಾಗಿ ಅಳ್ನಾವರ ತಾಲ್ಲೂಕಿನ ಕಂಬಾರಗಣವಿ ಗ್ರಾಮದ ಹೊರ ವಲಯದಲ್ಲಿ ಕೆಳ ಮಟ್ಟದಲ್ಲಿ ಕಟ್ಟಲಾದ ಕೀರು ಸೇತುವೆ ಸಂಪೂರ್ಣ ಜಲಾವೃತವಾಗಿ ರಸ್ತೆ ಸಂಚಾರ ಬಂದ್ ಆಗಿದೆ. ಅಣ್ಣಿಗೇರಿ ಪಟ್ಟಣದಲ್ಲಿ ನಿರಂತರ ಮಳೆಗೆ ಬಡಾವಣೆಗಳ ಮನೆಗೆ, ಪುರಸಭೆಯ ವಾಣಿಜ್ಯ ಮಳಿಗೆಯೊಳಗೆ ಚರಂಡಿ ನೀರು ನುಗ್ಗಿ ಪಡಿತರ ವಿತರಣಾ ಕೇಂದ್ರ, ಹೋಟೆಲ್, ಸ್ಟುಡಿಯೋಗಳಲ್ಲಿದ್ದ ಅನೇಕ ವಸ್ತುಗಳು ಹಾಳಾಗಿವೆ.

ಏಕಾಏಕಿ ಸುರಿದ ಭರ್ಜರಿ ಮಳೆಗೆ ಹುಬ್ಬಳ್ಳಿ ನಗರದ ಕೆಲವು ತಗ್ಗು ಪ್ರದೇಶದ ಬಡಾವಣೆಗಳಿಗೆ ನೀರು ನುಗ್ಗಿತ್ತು. ಉಣಕಲ್‌ನ ಶ್ರೀನಗರ ಕ್ರಾಸ್‌ನ ಹು–ಧಾ ಮುಖ್ಯ ರಸ್ತೆಯಲ್ಲಿ ಅಪಾರ ಪ್ರಮಾಣದಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು.

ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕಿನಲ್ಲಿ ಭಾನುವಾರ ರಾತ್ರಿ ಭಾರಿ ಗಾಳಿ–ಮಳೆಗೆ ಹಲವೆಡೆ ಕಟಾವಿಗೆ ಬಂದಿದ್ದ ಕಬ್ಬಿನ ಬೆಳೆ ನೆಲಕ್ಕುರುಳಿ ಲಕ್ಷಾಂತರ ರೂಪಾಯಿ ಹಾನಿಯಾಗಿದೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ವಿವಿಧೆಡೆ ಭಾನುವಾರ ರಾತ್ರಿ ಹಾಗೂ ಸೋಮವಾರ ಸುರಿದ ಮಳೆಗೆ ಎರಡು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯ ಹಲವೆಡೆ ಆಗಾಗ ಗುಡುಗು ಸಹಿತ ಜೋರು ಮಳೆಯಾಯಿತು. ನಿಪ್ಪಾಣಿ, ಹುಕ್ಕೇರಿ, ಗೋಕಾಕ, ಸವದತ್ತಿ, ಹಿರೇಬಾಗೇವಾಡಿಯಲ್ಲಿ ಮಳೆಯಾಗಿದೆ.


ಹುಬ್ಬಳ್ಳಿಯಲ್ಲಿ ಸೋಮವಾರ ಸುರಿದ ಅರ್ಧಗಂಟೆ ಮಳೆಗೆ ಉಣಕಲ್‌ನ ಶ್ರೀನಗರ ಕ್ರಾಸ್‌ನ ಹುಬ್ಬಳ್ಳಿ–ಧಾರವಾಡ ಮುಖ್ಯ ರಸ್ತೆಯಲ್ಲಿ ಅಪಾರ ಪ್ರಮಾಣದಲ್ಲಿ ನೀರು ನಿಂತ ಪರಿಣಾಮ ವಾಹನ ಸಂಚಾರಕ್ಕೆ ಅಡಚಣೆಯಾಯಿತು–ಪ್ರಜಾವಾಣಿ ಚಿತ್ರ

ಮಲೆನಾಡಿನ ವಿವಿಧೆಡೆ ಮಳೆ: ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದ ವಿವಿಧೆಡೆ ರಭಸವಾಗಿ ಮಳೆ ಸುರಿದಿದೆ.

ಬಾಳೆಹೊನ್ನೂರು ಸಮೀಪ ಮಹಲ್‌ಗೋಡಿನಲ್ಲಿ ಹಳ್ಳ ತುಂಬಿ, ಸೇತುವೆಯ ಮೇಲೆ ನೀರು ಹರಿಯುತ್ತಿದೆ. ವಾಹನ ಸಂಚಾರಕ್ಕೆ ಭಾರೀ ಅಡಚಣೆಯಾಗಿದೆ. ಪ್ರಯಾಣಿಗರೊಬ್ಬರು ಸೇತುವೆ ದಾಟಲು ಯತ್ನಿಸಿ, ಕೆಲಹೊತ್ತು ನೀರಿನಲ್ಲಿ ಸಿಲುಕಿಕೊಂಡರು. ಸ್ಥಳೀಯರು ಅವರನ್ನು ರಕ್ಷಣೆ ಮಾಡಿದ್ದಾರೆ.

ಕಳಸ, ಕೊಟ್ಟಿಗೆಹಾರ, ಮೂಡಿಗೆರೆ, ಬಾಳೆಹೊನ್ನೂರು, ಚಿಕ್ಕಮಗಳೂರು ಭಾಗದಲ್ಲಿ ಉತ್ತಮ ಮಳೆಯಾಗಿದೆ. ಭದ್ರಾ ನದಿಯ ಹರಿವಿನಲ್ಲಿ ತುಸು ಹೆಚ್ಚಳವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ನಗರ ಸೇರಿದಂತೆ ಬೆಳ್ತಂಗಡಿ, ಉಜಿರೆಯಲ್ಲೂ ಉತ್ತಮ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ-ದಲ್ಲಿ, ಹಿರಿಯೂರು, ಚಿಕ್ಕಜಾಜೂರು ಭಾಗಗಳಲ್ಲಿ ಮಳೆ ಸುರಿಯಿತು.

ಕಲಬುರ್ಗಿ ಜಿಲ್ಲೆಯಲ್ಲಿ ಮತ್ತೆ ಭೂಕಂಪನ

ಕಲಬುರಗಿ: ಜಿಲ್ಲೆಯ ಚಿಂಚೋಳಿ, ಕಾಳಗಿ, ಸೇಡಂ ಹಾಗೂ ಕಮಲಾಪುರ ತಾಲ್ಲೂಕಿನ ಹಲವೆಡೆ ಸೋಮವಾರ ರಾತ್ರಿ 9.55ರ ಸುಮಾರಿಗೆ ಮತ್ತೆ ಭೂಮಿ ಕಂಪಿಸಿದ ಅನುಭವವಾಗಿದೆ.

ಕಾಳಗಿ ತಾಲ್ಲೂಕಿನ ಹಲಚೇರಾ, ರಾಜಾಪುರ, ಕೋಡ್ಲಿ, ಮಂಗಲಗಿ, ವಜ್ಜಿರಗಾಂವ, ಹೊಸಳ್ಳಿ ಎಚ್., ತೆಂಗಳಿ, ಕೊಡದೂರು, ತೇಗಲತಿಪ್ಪಿ ಗ್ರಾಮಗಳು, ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ, ಸುಲೇಪೇಟ, ಚಿಮ್ಮಾಈದಲಾಯಿ, ಕಮಲಾಪುರ ಸಮೀಪದ ತಡಕಲ್ ಹಾಗೂ ಸೇಡಂ ತಾಲ್ಲೂಕಿನ ಕೆಲ ಗ್ರಾಮಗಳಲ್ಲೂ ಭೂಕಂಪನವಾಗಿದೆ.

ಬಹುಪಾಲು ಕಡೆ ರಾತ್ರಿ 9.55ರಿಂದ 9.56ರವರೆಗೆ ಒಂದು ನಿಮಿಷದ ಅವಧಿಯಲ್ಲಿ 10 ಸೆಕೆಂಡ್ ವರೆಗೆ ಭೂಮಿ ಕಂಪಿಸಿತು ಎಂದು ಹಲವರು 'ಪ್ರಜಾವಾಣಿ'ಗೆ ಕರೆ ಮಾಡಿ ಮಾಹಿತಿ ಹಂಚಿಕೊಂಡರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆ ಆರ್ ಎಸ್*	124.80	116.12	10,481	4,291
ಹಾರಂಗಿ	2,859	2,858.12	1,243	1,250
ಕಬಿನಿ	2284.00	2,278.74	2,100	3,500
ಹೇಮಾವತಿ	2,922	2,911.96	2,543	4,723
ಲಿಂಗನಮಕ್ಕಿ	1,819	1,815.95	4398	-
ಸೂಪಾ (ಮೀ)	564	557.05	2,660	1,767
ಮಾಣಿ	594	587.54	759	-
ತುಂಗಭದ್ರಾ	1,633	1,632.99	28,954	28,714
ಮಲಪ್ರಭಾ	2079.5	2,079.45	3,704	2,394
ಘಟಪ್ರಭಾ	2175	2,175.00	2,582	2,582
ಭದ್ರಾ	186	186	2107	2107
ಆಲಮಟ್ಟಿ (ಮೀ)	519.6	519.59	24,533	26,570
ನಾರಾಯಣಪುರ (ಮೀ)	492.25	492.23	38,000	41,200

* ನೆಲಮಟ್ಟದಿಂದ

'ಅದೃಷ್ಟದ ಮನೆ'ಗೆ ಬನ್ನಿ: ಸಿದ್ದರಾಮಯ್ಯಗೆ ಶಾಸಕ ಜಮೀರ್ ಆಹ್ವಾನ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದಾಶಿವನಗರದಲ್ಲಿರುವ ತಮ್ಮ ಅತಿಥಿ ಗೃಹವನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬಳಕೆಗೆ ಬಿಟ್ಟುಕೊಡಲು ಶಾಸಕ ಜಮೀರ್ ಅಹಮ್ಮದ್ ಮುಂದಾಗಿದ್ದಾರೆ. ಅದು 'ಅದೃಷ್ಟದ ಮನೆ' ಎಂಬ ನಂಬಿಕೆಯ ಮೇಲೆ ಆಹ್ವಾನವನ್ನೂ ನೀಡಿದ್ದಾರೆ.

ಈ ಅತಿಥಿ ಗೃಹವನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ. ಕುಮಾರಸ್ವಾಮಿ ಬಳಸುತ್ತಿದ್ದರು. ಜಮೀರ್ ಅವರು ಜೆಡಿಎಸ್‌ನಲ್ಲಿದ್ದಾಗ ಆಪ್ತರಾಗಿದ್ದ ಅವರಿಗೆ ತಮ್ಮ ಕಟ್ಟಡವನ್ನು ಬಿಟ್ಟುಕೊಟ್ಟಿದ್ದರು. ಜಮೀರ್ ಕಾಂಗ್ರೆಸ್ ಸೇರಿದರೂ ಕುಮಾರಸ್ವಾಮಿ ಅತಿಥಿ ಗೃಹದಲ್ಲೇ ತಂಗಿದ್ದರು. ರಾಜಕೀಯ ಭೇಟಿ, ಸಭೆ ಮತ್ತಿತರ ಉದ್ದೇಶಗಳಿಗೆ ಆ ಕಟ್ಟಡ ಬಳಕೆ ಮಾಡುತ್ತಿದ್ದರು.

ಇಬ್ಬರ ನಡುವೆ ವೈಮನಸ್ಸು ಹೆಚ್ಚಿದ ಕಾರಣದಿಂದ ಇತ್ತೀಚೆಗೆ ಕಟ್ಟಡವನ್ನು ಬಲವಂತವಾಗಿ ತಮ್ಮ ವಶಕ್ಕೆ ಪಡೆದುಕೊಂಡಿದ್ದ ಜಮೀರ್, ಸುಣ್ಣ, ಬಣ್ಣ ಬಳಿಸಿ ದುರಸ್ತಿಯನ್ನೂ ಮಾಡಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರಿಗೆ ರಾಜಕೀಯ ಚಟುವಟಿಕೆಗಳಿಗೆ ಬಳಸಿಕೊಳ್ಳುವುದಕ್ಕಾಗಿ ಅತಿಥಿ ಗೃಹವನ್ನು ಬಿಟ್ಟುಕೊಡುವುದಕ್ಕಾಗಿ ನವೀಕರಣ ಮಾಡುತ್ತಿರುವುದಾಗಿ ಜಮೀರ್ ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿ ಆಗುವ ಮುನ್ನ ಇದೇ ಅತಿಥಿ ಗೃಹದಲ್ಲಿ ಇದ್ದರು. ಅಲ್ಲಿಂದಲೇ ರಾಜಕೀಯ ಚಟುವಟಿಕೆ ನಡೆಸಿ ಅಧಿಕಾರದ ಗದ್ದುಗೆಗೇರಿದ್ದರು. ಈ ಮನೆಯಲ್ಲಿದ್ದರೆ ಮುಖ್ಯಮಂತ್ರಿಯಾಗುವ ಅದೃಷ್ಟ ಒಲಿಯುತ್ತದೆ ಎಂಬ ನಂಬಿಕೆ ಹಲವರಲ್ಲಿದೆ. ಇದೇ ಅತಿಥಿ ಗೃಹದಲ್ಲಿದ್ದರೆ ಮುಖ್ಯಮಂತ್ರಿಯಾಗ ಬಹುದೆಂದು ಸಿದ್ದರಾಮಯ್ಯ ಅವರ ಮನವೊಲಿಸಿರುವ ಜಮೀರ್, ಮನೆಯನ್ನು ಬಳಸಿಕೊಳ್ಳಿ ಎಂದು ಸಿದ್ದರಾಮಯ್ಯ ಅವರಿಗೆ ಇತ್ತೀಚೆಗೆ ಆಹ್ವಾನ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

'ಅದೃಷ್ಟದ ಮನೆ'ಯಲ್ಲಿದ್ದುಕೊಂಡೇ ಮುಖ್ಯಮಂತ್ರಿಯಾಗಲು ಬಯಸಿರುವ ಕುಮಾರಸ್ವಾಮಿ ಅವರು ಅತಿಥಿ ಗೃಹವನ್ನು ತಮ್ಮ ಬಳಿಯೇ ಉಳಿಸಿಕೊಳ್ಳಲು ಬಯಸಿದ್ದರು. ಖರೀದಿ ಮಾಡುವ ಪ್ರಸ್ತಾವವನ್ನೂ ಮುಂದಿಟ್ಟಿದ್ದರು. ಆದರೆ, ಜಮೀರ್ ಅದನ್ನು ತಿರಸ್ಕರಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಹಿಂದೂ ಧರ್ಮಕ್ಕೆ ಮರಳಿದ ಶಾಸಕ ಗೂಳಿಹಟ್ಟಿ ತಾಯಿ


ಪುಟ್ಟಮ್ಮ

ಹೊಸದುರ್ಗ: ಕ್ಷೇತ್ರದ ಶಾಸಕ ಗೂಳಿಹಟ್ಟಿ ಡಿ. ಶೇಖರ್ ಅವರ ತಾಯಿ ಪುಟ್ಟಮ್ಮ ಕ್ರಿಶ್ಚಿಯನ್ ಧರ್ಮದ ಆಚರಣೆ, ಸಂಸ್ಕೃತಿಗೆ ಮಾರುಹೋಗಿದ್ದರು. ಈಗ ಹಿಂದೂ ಧರ್ಮಕ್ಕೆ ಮರಳಿದ್ದಾರೆ.

'ಆರು ವರ್ಷಗಳ ಹಿಂದೆ ನನ್ನ ಸಹೋದರ, ತಂದೆ ಮೃತಪಟ್ಟರು. ಈ ನೋವಿನಲ್ಲಿ ಜೀವನ ಸಾಗಿಸುತ್ತಿದ್ದ ನನ್ನ ತಾಯಿಗೆ ಅನಾರೋಗ್ಯ ಉಂಟಾಯಿತು. ಕ್ರಿಶ್ಚಿಯನ್ ಧರ್ಮಾಚರಣೆ ಮಾಡಿದರೆ ನೋವು ನಿವಾರಣೆಯಾಗುತ್ತದೆ ಎಂದು ಹಲವರು ನಂಬಿಸಿದ್ದರು. ಇದನ್ನು ಒಪ್ಪಿದ ನನ್ನ ತಾಯಿ ನಮ್ಮ ಆಚರಣೆ, ಸಂಸ್ಕೃತಿ ಬಿಟ್ಟರು. ಊರಲ್ಲಿದ್ದ ಸ್ವಂತ ಮನೆ ತೊರೆದು ಪಟ್ಟಣಕ್ಕೆ ಬಂದು ಬಾಡಿಗೆ ಮನೆಯಲ್ಲಿ ನೆಲೆಸಿ ಚರ್ಚ್‌ನ ಆಚರಣೆಯಲ್ಲಿ ಭಾಗವಹಿಸುತ್ತಿದ್ದರು' ಎಂದು ಶಾಸಕ ಗೂಳಿಹಟ್ಟಿ ಡಿ. ಶೇಖರ್ ತಿಳಿಸಿದರು.

'ಮತಾಂತರದ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ನಾನು ಪ್ರಸ್ತಾಪಿಸಿದ್ದ ವಿಚಾರ ನನ್ನ ತಾಯಿಗೆ ತಿಳಿದಿದೆ. ಮಗನ ಒಳ್ಳೆಯ ಕಾರ್ಯಕ್ಕೆ ಕೈಜೋಡಿಸಬೇಕು ಎಂಬ ಉದ್ದೇಶದಿಂದ ಪುನಃ ಹಿಂದೂ ಧರ್ಮಕ್ಕೆ ಬಂದಿದ್ದಾರೆ. ಪಟ್ಟಣದ ಬಾಡಿಗೆ ಮನೆಯಲ್ಲಿದ್ದ ಸಾಮಗ್ರಿ ತೆಗೆದುಕೊಂಡು ಸ್ವಗ್ರಾಮ ಗೂಳಿಹಟ್ಟಿ ಭೋವಿಹಟ್ಟಿ ಗ್ರಾಮದಲ್ಲಿರುವ ನಮ್ಮ ಮನೆಗೆ ಬಂದಿದ್ದಾರೆ. ಹಂತ ಹಂತವಾಗಿ ನಮ್ಮ ಧರ್ಮದ ಪೂಜೆ–ಪುನಸ್ಕಾರ, ಧಾರ್ಮಿಕ ಕೈಂಕರ್ಯದಲ್ಲಿ ತೊಡಗಿಕೊಳ್ಳಲಿದ್ದಾರೆ' ಎಂದು ಹೇಳಿದರು.

'ಮತಾಂತರ ಹೊಂದಿರುವವರನ್ನು ಮತ್ತೆ ಹಿಂದೂ ಧರ್ಮಕ್ಕೆ ಕರೆತರಲು ವಿಶ್ವ ಹಿಂದೂ ಪರಿಷತ್‌ನವರು ರೂಪಿಸಿರುವ 'ಘರ್ ವಾಪಸಿ' ಕಾರ್ಯವನ್ನು ತಾಲ್ಲೂಕು, ರಾಜ್ಯದೆಲ್ಲೆಡೆ ಆರಂಭಿಸಲಾಗುವುದು' ಎಂದು ಶಾಸಕ ಗೂಳಿಹಟ್ಟಿ ಡಿ. ಶೇಖರ್ ತಿಳಿಸಿದರು.

ಕ್ರಿಶ್ಚಿಯನ್ ಧರ್ಮದಿಂದ ಹಿಂದೂ ಧರ್ಮಕ್ಕೆ ಮರಳಿದ ಗೂಳಿಹಟ್ಟಿ ಶೇಖರ್ ತಾಯಿ ಪುಟ್ಟಮ್ಮ ಅವರು 'ಪ್ರಜಾವಾಣಿ' ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಆದಾಯಕ್ಕಿಂತ ಹೆಚ್ಚು ಆಸ್ತಿ: ಡಿಸಿಎಫ್ ಶಿವಶಂಕರಸ್ವಾಮಿ ಅಮಾನತು

ಪ್ರಜಾವಾಣಿ ವಾರ್ತೆ


ಶಿವಶಂಕರಸ್ವಾಮಿ

ಚಾಮರಾಜನಗರ: ಅಕ್ರಮ ಸಂಪಾದನೆ ಆರೋಪದಲ್ಲಿ ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆಗೆ ಒಳಗಾಗಿದ್ದ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಟಿಂಬರ್‌ಯಾರ್ಡ್ ಘಟಕದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಹಾಗೂ ಪ್ರಾದೇಶಿಕ ವ್ಯವಸ್ಥಾಪಕ ಪಿ.ಶಿವಶಂಕರಸ್ವಾಮಿ ಅವರನ್ನು ಕರ್ತವ್ಯದಿಂದ ಅಮಾನತು ಮಾಡಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಅವರು ಈ ಹಿಂದೆ ಮೈಸೂರಿನ ಶ್ರೀಗಂಧ ಕೋಠಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದರು. ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದನೆ ಆರೋಪದಲ್ಲಿ ಎಸಿಬಿ ಅಧಿಕಾರಿಗಳು 2020ರ ಡಿ.18ರಂದು ಮೈಸೂರಿನಲ್ಲಿರುವ ಅವರ ಮನೆ, ಕಚೇರಿ ಸೇರಿದಂತೆ ಐದು ಕಡೆ ದಾಳಿ ನಡೆಸಿದ್ದರು. ಅವರ ಆಸ್ತಿಗಳ ಬಗ್ಗೆ ಮಾಹಿತಿ ಕಲೆಹಾಕಿ ದಾಖಲೆ ವಶಪಡಿಸಿಕೊಂಡಿದ್ದರು.

ಪ್ರಕರಣದ ತನಿಖೆ ನಡೆಯುತ್ತಿದ್ದ ಸಂದರ್ಭದಲ್ಲೇ, ಕೆಲ ತಿಂಗಳ ಹಿಂದೆ ಅವರು ಡಿಸಿಎಫ್ ಹುದ್ದೆಗೆ ಬಡ್ತಿ ಹೊಂದಿದ್ದರು. ಶಿವಶಂಕರಸ್ವಾಮಿ ಅಕ್ರಮ ಆಸ್ತಿ ಹೊಂದಿದ್ದಾರೆ ಎಂದು ಶಿವಮೊಗ್ಗ ಎಸಿಬಿ ಪೊಲೀಸ್ ಠಾಣೆಯಲ್ಲಿ 2020ರ ಡಿ.17ರಂದು ದೂರು ದಾಖಲಾಗಿತ್ತು.

ಶೇ 249ರಷ್ಟು ಹೆಚ್ಚು ಆಸ್ತಿ: ಪ್ರಕರಣ ತನಿಖೆ ನಡೆಸಿದ್ದ ಅಧಿಕಾರಿಗಳು, ಶಿವಶಂಕರಸ್ವಾಮಿ ಅವರ ಚರ ಹಾಗೂ ಸ್ಥಿರ ಆಸ್ತಿಯ ಮೌಲ್ಯ ₹3,84,28,812 ಎಂದು ಅಂದಾಜಿಸಿದ್ದರು. ಖರ್ಚು ವೆಚ್ಚವನ್ನು ₹ 62 ಲಕ್ಷ ಎಂದು ಗುರುತಿಸಲಾಗಿತ್ತು. ಅವರ ಕುಟುಂಬದ ಎಲ್ಲ ಮೂಲಗಳ ಆದಾಯ ₹1.10 ಕೋಟಿ ಎಂದು ಅಂದಾಜಿಸಲಾಗಿತ್ತು.

ಶಿವಶಂಕರಸ್ವಾಮಿ ಹೆಚ್ಚುವರಿಯಾಗಿ ₹2,74,28,912 ಮೌಲ್ಯದ ಸ್ಥಿರ ಹಾಗೂ ಚರಾಸ್ತಿ ಗಳಿಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿತ್ತು. ಶೇ 249.35ರಷ್ಟು ಹೆಚ್ಚು ಸಂಪಾದನೆ ಮಾಡಿರುವುದು ದೃಢಪಟ್ಟಿದೆ ಎಂದು ವರದಿ ಹೇಳಿತ್ತು.

ಅಕ್ರಮ ಆಸ್ತಿ ಸಂಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಶಿವಶಂಕರಸ್ವಾಮಿ ಅವರನ್ನು ಅಮಾನತಿನಲ್ಲಿ ಇರಿಸಬೇಕೆಂದು ಭ್ರಷ್ಟಾಚಾರ ನಿಗ್ರಹ ದಳದ ಎಡಿಜಿಪಿ, ಅರಣ್ಯ ಇಲಾಖೆಗೆ ಪತ್ರ ಬರೆದಿದ್ದರು. ದಾಖಲೆಗಳನ್ನು ಪರಿಶೀಲಿಸಿರುವ ಅರಣ್ಯ ಇಲಾಖೆ, ಶಿವಶಂಕರಸ್ವಾಮಿ ವಿರುದ್ಧ ಶಿಸ್ತು ಕ್ರಮ ವಹಿಸುವುದನ್ನು ಬಾಕಿ ಇರಿಸಿ ಅಮಾನತು ಮಾಡಿ ಇದೇ 8ರಂದು ಆದೇಶ ಹೊರಡಿಸಿದೆ.



ಶಬ್ದಗಳಿಗೆ 'ಕಿವಿ ಹಿಂಡಿ'



ಡಾ. ವಿನಯ ಶ್ರೀನಿವಾಸ್

ಧ್ವನಿವರ್ಧಕಗಳನ್ನು ಅಳವಡಿಸಿ ಆಯೋಜಿಸಿದ ಕಾರ್ಯಕ್ರಮವನ್ನು ವೀಕ್ಷಿಸಿದ ನಂತರ, ಚಿತ್ರಮಂದಿರದಲ್ಲಿ ಸಿನಿಮಾ ವೀಕ್ಷಣೆಯ ಬಳಿಕ ಅಥವಾ ಅತಿಯಾದ ವಾಹನ ದಟ್ಟಣೆಯಿಂದ ಹೊರ ಬಂದ ನಂತರದ ಒಂದಿಷ್ಟು ಸಮಯ ಎಷ್ಟೋ ಜನರಿಗೆ ತಲೆನೋವು, ಆಯಾಸ, ಮನಸ್ಸಿನಲ್ಲಿ ಕಿರಿ ಕಿರಿಯಂತಹ ಅನುಭವವಾಗುವುದು ಸಹಜ. ಅಷ್ಟೇ ಅಲ್ಲ, ಒಂದೆರಡು ನಿಮಿಷಗಳು ಕಿವಿಯಲ್ಲಿ ಒಂದು ಬಗೆಯ 'ಗುಯ್' ಶಬ್ದ ಬಂದಂತಾಗಿ ಎದುರಿನವರು ಮಾತನಾಡಿದ್ದನ್ನು ಕೇಳಿಸಿಕೊಳ್ಳಲೂ ಕಷ್ಟವೆನಿಸಬಹುದು.

ಹೌದು, ಅಬ್ಬರದ ಅಥವಾ ಜೋರಾದ ಶಬ್ದಗಳಿಗೆ ಕಿವಿಗಳನ್ನು ನಿರಂತರವಾಗಿ ಒಡ್ಡಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಖಂಡಿತ ಒಳ್ಳೆಯದಲ್ಲ. ಇದು ತಾತ್ಕಾಲಿಕ ಮತ್ತು ಶಾಶ್ವತ ಕಿವುಡತನದ ಜೊತೆಯಲ್ಲಿ ಹಲವಾರು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.

> ನಿಮ್ಮಿಂದ ಮೂರು ಅಡಿ ದೂರದಲ್ಲಿರುವ ವ್ಯಕ್ತಿ ಸಹಜವಾಗಿ ಮಾತನಾಡಿದ್ದನ್ನು ನೀವು ಕೇಳಿಸಿಕೊಳ್ಳಲು ಅಸಮರ್ಥರಾಗಿದ್ದೀರೆಂದರೆ ಅಲ್ಲಿ ನಿಮ್ಮ ಕಿವಿಗಳು ಅಸುರಕ್ಷಿತ ಮಟ್ಟದ ಶಬ್ದಕ್ಕೆ ತೆರೆದುಕೊಂಡಿವೆ ಎಂದರ್ಥ.

ಸಮಸ್ಯೆಗಳು ಯಾವುವೆಂದರೆ:

- ಅತಿಯಾದ ಆತಂಕ, ಭಯ.
- ವ್ಯಕ್ತಿಯ ಕಾರ್ಯಕ್ಷಮತೆ ಕ್ಷೀಣಿಸುವಿಕೆ.
- ಏರು ರಕ್ತದೊತ್ತಡ.
- ಆಯಾಸ, ತಲೆನೋವು.
- ಮಾನಸಿಕ ಕಿರಿಕಿರಿ/ ಒತ್ತಡ
- ನಿದ್ರಾಹೀನತೆ.
- ಏಕಾಗ್ರತೆ, ಗ್ರಹಿಕಾ ಶಕ್ತಿ ಕ್ಷೀಣಿಸುವಿಕೆ.
- ನೆನಪಿನ ಶಕ್ತಿಯ ಕುಂದುವಿಕೆ,

ಮೊದಲಾದುವು.

ವಿಶ್ವ ಆರೋಗ್ಯ ಸಂಸ್ಥೆಯು ತಿಳಿಸಿರುವಂತೆ, ಮನುಷ್ಯನ ಕಿವಿಗಳಿಗೆ ಎಂಬತ್ತೈದು ಡೆಸಿಬೆಲ್‌ಗಳಿಗಿಂತ ಕಡಿಮೆ ಪರಿಮಾಣದ ಶಬ್ದವಷ್ಟೇ ಸುರಕ್ಷಿತ. ಅದಕ್ಕಿಂತ ಹೆಚ್ಚು ತೀವ್ರತೆಯ ಶಬ್ದದ ನಿರಂತರ ಆಲಿಕೆಯು ಕಿವಿಗಳಿಗೆ ಅಪಾಯ. ತೀವ್ರವಾದ ಶಬ್ದದ ತರಂಗಗಳು ಒಳಕಿವಿಯಲ್ಲಿ ಕೂದಲಿನಂತಿರುವ ಸೂಕ್ಷ್ಮಾತಿಸೂಕ್ಷ್ಮ ಜೀವಕೋಶಗಳಿಗೆ ಹಾನಿ ಉಂಟುಮಾಡುತ್ತವೆ. ಆ ಜೀವಕೋಶಗಳು ಒಮ್ಮೆ ನಶಿಸಿಹೋದರೆ, ದುರಸ್ತಿ ಕಷ್ಟ ಸಾಧ್ಯ. ಆದ್ದರಿಂದಲೇ ಪ್ರತಿಯೊಬ್ಬರೂ ಈ ಬಗ್ಗೆ ಎಚ್ಚರದಿಂದ ಇರಬೇಕು.

ವ್ಯಕ್ತಿಯ ವಾಸಸ್ಥಳವು ಬಸ್ಸು ಅಥವಾ ರೈಲು ಸಂಚಾರದ ರಸ್ತೆಗಳಿಗೆ, ವಿಮಾನ ನಿಲ್ದಾಣಗಳಿಗೆ, ಅತಿಯಾದ ಶಬ್ದ ಹೊರಸೂಸುವ ಕಾರ್ಖಾನೆಗಳಿಗೆ ಅತಿ ಹತ್ತಿರವಿದ್ದಾಗ ಜೀವನದ ಬಹುಪಾಲಿನ ದಿನಗಳಲ್ಲಿ ತೀವ್ರ ಪರಿಮಾಣದ ಶಬ್ದವನ್ನು ಕೇಳಿಸಿಕೊಳ್ಳಬೇಕಾದ ಪರಿಸ್ಥಿತಿ ಇರುತ್ತದೆ. ಅಷ್ಟೇ ಅಲ್ಲ ಕಾರ್ಖಾನೆ, ರೈಲು ಮತ್ತು ವಿಮಾನ ನಿಲ್ದಾಣ, ಗಣಿಗಾರಿಕೆ, ಕಟ್ಟಡ ನಿರ್ಮಾಣ, ಮರ ಮತ್ತು ಕಬ್ಬಿಣದ ಕೆಲಸಗಳಲ್ಲಿ ತೊಡಗಿರುವವರು ಸಹ ಹೆಚ್ಚು ಸಮಯದವರೆಗೆ ಕರ್ಕಶವಾದ ಶಬ್ದವನ್ನು ಕೇಳಬೇಕಾಗಿ ಬರುತ್ತದೆ. ಈ ಪಟ್ಟಿಯಲ್ಲಿ ರ್‍ಯಾಪ್ ಸಂಗೀತಗಾರರು ಕೂಡ ಸೇರುತ್ತಾರೆ. ಮನೆಗಳಲ್ಲಿಯೂ ಇತ್ತೀಚೆಗೆ ಚಿತ್ರಮಂದಿರಂತಹ ವ್ಯವಸ್ಥೆಯನ್ನು ನಿರ್ಮಿಸಿ ಅತಿ ದೊಡ್ಡ ದನಿಯಲ್ಲಿ ಸಂಗೀತವನ್ನು ಆಲಿಸುವ, ದೂರದರ್ಶನವನ್ನು ವೀಕ್ಷಿಸುವವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಅವರಷ್ಟೇ ಅಲ್ಲದೆ ಅಕ್ಕ ಪಕ್ಕದ ಮನೆಯವರೂ ತೊಂದರೆಗೀಡಾಗುವ ಸಂಭವವಿರುತ್ತದೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯು ಕ್ರಮೇಣ ಶಾಶ್ವತ ಕಿವುಡುತನ ಮತ್ತು ಇತರ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಸಾಧ್ಯತೆಗಳಿರುತ್ತವೆ.

ಪರಿಹಾರೋಪಾಯಗಳೇನು?

- ಅತಿಯಾದ ಶಬ್ದಕ್ಕೆ ಕಿವಿಗೊಡಬೇಕಾದ ಅನಿವಾರ್ಯತೆ ಇರುವವರು ಆ ಅಲೆಗಳನ್ನು ಕಿವಿಯ ಹೊರಭಾಗದಲ್ಲಿಯೇ ತಡೆಯುವಂತಹ ಅಥವಾ ಅದರ ತೀವ್ರತೆಯನ್ನು ಕಡಿಮೆಗೊಳಿಸುವಂತಹ ಸುರಕ್ಷಾ ಸಲಕರಣೆಗಳನ್ನು (ಇಯರ್ ಮಫ್ಸ್ ಅಥವಾ ಇಯರ್ ಪ್ಲಗ್ಸ್) ಕಡ್ಡಾಯವಾಗಿ ಬಳಸಿ.
- ಮಕ್ಕಳನ್ನು ಅಬ್ಬರದ ಸದ್ದು ಹೊರಸೂಸುವ ಸ್ಥಳಗಳಿಗೆ ಕರೆದೊಯ್ಯಬೇಡಿ.
- ನಿಮ್ಮ ಮನೆಯ ಟಿ.ವಿ., ರೇಡಿಯೊ ಅಥವಾ ಧ್ವನಿವರ್ಧಕಗಳ ಶಬ್ದದ ಪರಿಮಾಣವನ್ನು ಆದಷ್ಟು ಕಡಿಮೆ ಮಟ್ಟದಲ್ಲಿಡಿ. ಇದರಿಂದ ನೀವೂ ಮತ್ತು ನಿಮ್ಮ ನೆರೆಯವರೂ ಸುರಕ್ಷಿತ.
- ನೀವು ಕೆಲಸ ಮಾಡುವ ಸ್ಥಳಗಳಲ್ಲಿನ ಉಪಕರಣಗಳನ್ನು ಕಾಲ ಕಾಲಕ್ಕೆ ನವೀಕರಿಸಿ, ಸಮತೋಲನ ಸ್ಥಿತಿಯಲ್ಲಿರಿಸಿ ಅಥವಾ ದುರಸ್ಥಿಗೊಳಿಸಿ.
- ನಿಮ್ಮ ವಾಹನಗಳನ್ನು ನಿಯಮಿತವಾಗಿ ತಪಾಸಣೆ ಮಾಡಿಸಿ, ಸುಸ್ಥಿತಿಯಲ್ಲಿಟ್ಟುಕೊಳ್ಳಿ.
- ಸಾಧ್ಯವಾದೆಡೆಗಳಲ್ಲಿ ಕಡಿಮೆ ಸದ್ದು ಮಾಡುವ ವಸ್ತುಗಳನ್ನೇ ಕೊಂಡುಕೊಳ್ಳಿ. ಉದಾ: ಬ್ಯಾಟರಿ ಚಾಲಿತ ವಾಹನ ಮತ್ತು ಆಟೋಟಿಕೆಗಳು.
- ಸುದೀರ್ಘ ಸಮಯದವರೆಗೆ ನೀವು ಹೆಚ್ಚು ತೀವ್ರವಾದ ಶಬ್ದವನ್ನು ಕೇಳಿಸಿಕೊಳ್ಳಬೇಕಾದ ಸಂದರ್ಭವಿದ್ದಾಗ ತಪ್ಪದೇ ಮಧ್ಯೆ ಬಿಡುವು ತೆಗೆದುಕೊಳ್ಳಿ.
- ಮೊಬೈಲ್ ಇಯರ್ ಫೋನ್‌ಗಳಿಂದ ಎಂಬತ್ತೈದು ಡೆಸಿಬೆಲ್ ಗಿಂತಲೂ ಹೆಚ್ಚಿನ ಮಟ್ಟದ ಶಬ್ದ ಹೊರಹೊಮ್ಮುವುದರಿಂದ ಅವುಗಳ ಬಳಕೆ ಮಿತಿಯಲ್ಲಿಡಿ.

ನೆನಪಿಡಿ, ನಿಮ್ಮಿಂದ ಮೂರು ಅಡಿ ದೂರದಲ್ಲಿರುವ ವ್ಯಕ್ತಿ ಸಹಜವಾಗಿ ಮಾತನಾಡಿದ್ದನ್ನು ನೀವು ಕೇಳಿಸಿಕೊಳ್ಳಲು ಅಸಮರ್ಥರಾಗಿದ್ದೀರೆಂದರೆ ಅಲ್ಲಿ ನಿಮ್ಮ ಕಿವಿಗಳು ಅಸುರಕ್ಷಿತ ಮಟ್ಟದ ಶಬ್ದಕ್ಕೆ ತೆರೆದುಕೊಂಡಿವೆ ಎಂದರ್ಥ. ತಡಮಾಡದೆಯೇ ವೈದ್ಯರ ಸಲಹೆ ಪಡೆದು, ಸುರಕ್ಷಾ ಸಲಕರಣೆಗಳನ್ನು ಬಳಸಿ.

ಯಾವ ಶಬ್ದ ಎಷ್ಟು ಡೆಸಿಬೆಲ್?

ಪಟಾಕಿ, ಸಿಡಿ ಮದ್ದು	150
ಆ್ಯಂಬುಲೆನ್ಸ್ ಶಬ್ದ	120
ಮರಕೆಲಸ	100
ಮೋಟಾರ್ ಸೈಕಲ್	95
ತೀವ್ರವಾದ ವಾಹನ ದಟ್ಟಣೆ	85
ಸಹಜವಾದ ಸಂಭಾಷಣೆ	60
ರೆಫ್ರಿಜೆರೇಟರ್ ಗುಯ್ ಗುಡುವಿಕೆ	40
ಪಿಸುಗುಡುವಿಕೆ	30

ಎಷ್ಟು ಅವಧಿಯವರೆಗೆ ಸುರಕ್ಷಿತ?

ಡೆಸಿಬೆಲ್ಸ್	ಗಂಟೆ
85	8
90	4
100	1
105	30 ನಿಮಿಷಗಳು
110	15 ನಿಮಿಷ ಮಾತ್ರ

ವ್ಯಾಯಾಮ ಕಡ್ಡಾಯವಾಗಲಿ


ಡಾ. ಕೆ. ಎಸ್. ಚೈತ್ರಾ

ಶರೀರ ಎಂಬುದನ್ನು ಪ್ರಕೃತಿ ನಮಗೆ ನೀಡಿರುವ ಒಂದು ಅದ್ಭುತ ಯಂತ್ರಕ್ಕೆ ಹೋಲಿಸಬಹುದಾದರೆ ವ್ಯಾಯಾಮ ಎಂಬುದು ಅದನ್ನು ಸುಸ್ಥಿತಿಯಲ್ಲಿಡುವಂತೆ ನಿರ್ವಹಣೆ ಮಾಡುವ ವಿಧಾನ. ಆದುದರಿಂದ ವ್ಯಾಯಾಮ ಹವ್ಯಾಸವಲ್ಲ, ಬದಲಿಗೆ ದಿನಚರಿಯಾಗಬೇಕು. ಅದಕ್ಕೆ ದೇಹದೊಂದಿಗೇ ಮನಸ್ಸನ್ನು ಸಿದ್ಧಗೊಳಿಸುವುದು ಮುಖ್ಯ. ವ್ಯಾಯಾಮ ಕಡ್ಡಾಯವಾದರೂ ಯಾವ ರೀತಿಯ ವ್ಯಾಯಾಮ, ಸಮಯ ಎಂಬುದು ಅವರವರ ಆಯ್ಕೆ. ಕೆಲವರಿಗೆ ಬೆಳಿಗ್ಗೆ ಬೇಗ ಎದ್ದು ಓಡುವುದು ಸುಲಭವಾದರೆ ಮತ್ತೆ ಹಲವರಿಗೆ ಸಂಜೆ ಗೆಳೆಯರೊಡನೆ ಆಟ ಆಡುವುದು ಇಷ್ಟ. ಅನೇಕರಿಗೆ ಮಧ್ಯಾಹ್ನದ ವಾಕ್ ಹೆಚ್ಚು ಸೂಕ್ತ.

ಜೈವಿಕ ಗಡಿಯಾರ

ನಮ್ಮ ದೇಹದ ಜೈವಿಕ ಗಡಿಯಾರ ದೇಹದ ಕ್ರಿಯೆಗಳಾದ ರಕ್ತದೊತ್ತಡ, ಉಷ್ಣತೆ, ಹೃದಯಬಡಿತ, ಹಾರ್ಮೋನ್‌ಗಳ ಮಟ್ಟ ಎಲ್ಲದರ ಮೇಲೆ ಪ್ರಭಾವ ಹೊಂದಿದೆ. ಇವೆಲ್ಲವೂ ನಮ್ಮ ವ್ಯಾಯಾಮದ ಸಿದ್ಧತೆಗೆ ಅಗತ್ಯ. ವ್ಯಕ್ತಿಯಿಂದ ವ್ಯಕ್ತಿಗೆ ಈ ಜೈವಿಕ ಗಡಿಯಾರದಲ್ಲಿ ವ್ಯತ್ಯಾಸವಿರುತ್ತದೆ. ಹಾಗಾಗಿ ಜೈವಿಕ ಗಡಿಯಾರವನ್ನು ಅನುಸರಿಸಿ ವ್ಯಾಯಾಮವನ್ನು ಮಾಡುವುದು ಉತ್ತಮ ಆಯ್ಕೆ; ಆದರೆ ಜೈವಿಕ ಗಡಿಯಾರವನ್ನು ಕೀಲಿ ಕೊಟ್ಟು ನಮಗೆ ಬೇಕಾದಂತೆ ಬದಲಿಸಲು ಸಾಧ್ಯವಿಲ್ಲ. ಹೀಗಿರುವಾಗ ಯಾವಾಗ ವ್ಯಾಯಾಮ ಮಾಡಿದರೆ ಅತ್ಯಂತ ಹೆಚ್ಚು ಪ್ರಯೋಜನಕಾರಿ ಎಂಬ ಪ್ರಶ್ನೆ ಮೂಡುವುದು ಸಹಜ. ಯಾವಾಗಲಾದರೂ ಸರಿ; ನಿಯಮಿತವಾಗಿ ದಿನವೂ ಒಂದೇ ಸಮಯಕ್ಕೆ ವ್ಯಾಯಾಮ ಮಾಡುವುದು ಮುಖ್ಯ. ಏಕೆಂದರೆ ಬೆಳಿಗ್ಗೆ ಮತ್ತು ಸಂಜೆಯ ಸಮಯಗಳೆರಡರಲ್ಲೂ ಬೇರೆ ಬೇರೆ ಲಾಭಗಳಿವೆ.





ಬೆಳಗಿನ ವ್ಯಾಯಾಮ: ಅನುಸರಿಸಲು ಸುಲಭ

ಬೆಳಗಿನ ಸಿಹಿ ನಿದ್ದೆ ಬಿಟ್ಟು ಎದ್ದು ವ್ಯಾಯಾಮ ಮಾಡಲು ದೃಢ ಮನಸ್ಸು ಬೇಕು. ಒಂದರ ನಂತರ ಇನ್ನೊಂದು ಕೆಲಸ ಬಂದು ಕಡೆಗೆ ಸಮಯ ಸಾಲದೇ ವ್ಯಾಯಾಮ ಮಾತ್ರ ಮರುದಿನಕ್ಕೆ ಮುಂದೂಡಲ್ಪಡುತ್ತದೆ. ಇದೇ ಚಕ್ರ ಹಾಗೇ ಮುಂದುವರಿಯುವುದೂ ಇದೆ. ಮಧ್ಯಾಹ್ನ-ರಾತ್ರಿ ವ್ಯಾಯಾಮಕ್ಕೆ ಸಮಯ ನಿಗದಿಪಡಿಸಿದಾಗ ಇತರ ಜವಾಬ್ದಾರಿಗಳ ಜತೆ ನಿರ್ವಹಣೆ ಕಷ್ಟಸಾಧ್ಯ. ಕೆಲವು ಬಾರಿ ಇತರ ಕೆಲಸಗಳ ಒತ್ತಡ ಹೆಚ್ಚಿದಾಗ ಮನಸ್ಸಿಗೆ ವ್ಯಾಯಾಮ ಮಾಡುವ ಆಸಕ್ತಿ ಮತ್ತು ದೇಹಕ್ಕೆ ಶಕ್ತಿ ಎರಡೂ ಇರುವುದಿಲ್ಲ. ಹೀಗಾಗಿ ಬೆಳಿಗ್ಗೆ ಎದ್ದ ಕೂಡಲೇ ಮನಸ್ಸು ಏನಾದರೂ ನೆಪ ಹುಡುಕುವ ಮೊದಲೇ ದೃಢ ಮನದಿಂದ ವ್ಯಾಯಾಮಕ್ಕೆ ತಯಾರಾದರೆ ಅದನ್ನು ದಿನಚರಿಯ ಭಾಗವನ್ನಾಗಿ ಮಾಡುವುದು ಸುಲಭ.

ನಿದ್ದೆಗೆ ಸಹಾಯ

ರಾತ್ರಿ ವೇಳೆ ವ್ಯಾಯಾಮ ಮಾಡಿದಾಗ ನಿದ್ದೆಯ ಸಮಯದಲ್ಲಿ ವ್ಯತ್ಯಾಸಗಳು ಆಗಬಹುದು. ವ್ಯಾಯಾಮದಿಂದ ಹೃದಯದ ಬಡಿತ, ದೇಹದ ಉಷ್ಣತೆ ಹೆಚ್ಚುತ್ತದೆ. ನಿದ್ದೆಯ ಮುನ್ನ ದೇಹದ ಎಲ್ಲಾ ಕ್ರಿಯೆಗಳು ನಿಧಾನವಾಗಬೇಕು. ಹೀಗಾಗಿ ಬೆಳಿಗ್ಗೆಯೇ ವ್ಯಾಯಾಮ ಮುಗಿದಿದ್ದರೆ ದೇಹಕ್ಕೆ ಶ್ರಮವಾಗಿ ದಣಿದಿರುತ್ತದೆ, ರಾತ್ರಿ ಸುಖ ನಿದ್ದೆ ಸಾಧ್ಯ.

ಕೊಬ್ಬು ಕರಗುವಿಕೆ

ಸಾಧಾರಣವಾಗಿ ಬೆಳಿಗ್ಗೆ ಎದ್ದ ಕೂಡಲೇ ಖಾಲಿ ಹೊಟ್ಟೆಯಲ್ಲಿ ವ್ಯಾಯಾಮ ಮಾಡುವುದು ರೂಢಿ. ಸುಮಾರು ಎಂಟರಿಂದ ಹತ್ತು ಗಂಟೆಗಳ ಕಾಲ ಹೊಟ್ಟೆಯಲ್ಲಿ ಯಾವುದೇ ಆಹಾರ ಇರುವುದಿಲ್ಲ. ಹೀಗಿರುವಾಗ ವ್ಯಾಯಾಮ ಮಾಡಿದರೆ ದೇಹದ ಅನಗತ್ಯ ಕೊಬ್ಬು (ಕೆಟ್ಟ ಕೊಲೆಸ್ಟ್ರಾಲ್) ಹೆಚ್ಚು ಕರಗುತ್ತದೆ. ಸಂಜೆ ವೇಳೆಯಲ್ಲಿ ಹೊಟ್ಟೆಯಲ್ಲಿ ಸ್ವಲ್ಪವಾದರೂ ಆಹಾರವಿರುತ್ತದೆ.

ಕಡಿಮೆ ಹಸಿವು

ಬೆಳಿಗ್ಗೆ ವ್ಯಾಯಾಮ ಮಾಡುವುದರಿಂದ ಹಸಿವು ಕಡಿಮೆಯಾಗುತ್ತದೆ. ದೇಹಕ್ಕೆ ಬೇಕಾದಷ್ಟೇ ಆಹಾರವನ್ನು ಸೇವಿಸಬಹುದು. ಹೀಗಾಗಿ ದಿನವಿಡೀ ಬಾಯಾಡುವ ಆ ಮೂಲಕ ತೂಕ ಹೆಚ್ಚಿಸುವ ಪ್ರವೃತ್ತಿಯನ್ನು ತಡೆಗಟ್ಟಬಹುದು.

ಮಧ್ಯಾಹ್ನ-ಸಂಜೆಯ ವ್ಯಾಯಾಮ: ದೇಹದ ಉಷ್ಣತೆ

ನಮ್ಮ ದೇಹದ ಉಷ್ಣತೆ ಬೆಳಿಗ್ಗೆ ಎದ್ದಾಗಲಿಂದ ನಿಧಾನವಾಗಿ ಹೆಚ್ಚುತ್ತಾ ಮಧ್ಯಾಹ್ನದ ಹೊತ್ತಿಗೆ ಗರಿಷ್ಠ ಮಟ್ಟ ತಲುಪುತ್ತದೆ. ಮಾಂಸಖಂಡಗಳ ಸಾಮರ್ಥ್ಯ, ಸಹನಶಕ್ತಿ, ಬಾಗುವಿಕೆ ಈ ಸಮಯದಲ್ಲಿ ಹೆಚ್ಚಿರುವುದರಿಂದ ವ್ಯಾಯಾಮ ಮಾಡುವುದು ಸುಲಭ. ಅದೇ ರಾತ್ರಿಯ ವಿಶ್ರಾಂತಿಯಿಂದ ಎದ್ದ ಕೂಡಲೇ ಮಾಂಸಖಂಡಗಳು ಬಿಗಿಯಾಗಿದ್ದು, ಬಾಗಿ-ಬಳುಕುವುದು ಕಷ್ಟ. ಹೀಗಾಗಿ ಬೆಳಿಗ್ಗೆ ವ್ಯಾಯಾಮ ಮಾಡುವಾಗ ಪೂರ್ವ ತಯಾರಿಯ ಉಷ್ಣತೆ ಹೆಚ್ಚಿಸುವ 'ವಾರ್ಮ್ ಅಪ್'ಗೆ ಹೆಚ್ಚು ಸಮಯ ಬೇಕು. ಇಲ್ಲದಿದ್ದಲ್ಲಿ ಸ್ನಾಯುಗಳಿಗೆ ಪೆಟ್ಟಾಗುವ ಸಾಧ್ಯತೆ ಹೆಚ್ಚು.

ವೇಗದ ಪ್ರತಿಕ್ರಿಯೆ

ಯುವಜನರಲ್ಲಿ ಯಾವುದೇ ಕ್ರಿಯೆಗೆ ಪ್ರತಿಕ್ರಿಯಿಸುವ ಸಮಯ ಅತ್ಯಂತ ವೇಗವಾಗಿರುವುದು ಮಧ್ಯಾಹ್ನ. ಕಠಿಣ ದೈಹಿಕ ಶ್ರಮದ ಜತೆ ಮಾನಸಿಕ ಕೌಶಲವೂ ಅವಶ್ಯಕವಾದ ಹಾಕಿ, ಶಟಲ್, ಫುಟ್‌ಬಾಲ್, ಟೆನಿಸ್, ಕಬಡ್ಡಿ ಇಂಥ ಆಟಗಳನ್ನು ಮಧ್ಯಾಹ್ನ ಆಡುವುದು ಸೂಕ್ತ.

ತೂಕ ಇಳಿಕೆ

ದೇಹದ ಎಲ್ಲಾ ಕ್ರಿಯೆಗಳೂ ವೇಗವಾಗಿ ನಡೆಯುತ್ತಿರುವುದರಿಂದ ದೇಹದಲ್ಲಿ ಕ್ಯಾಲರಿ ಕೂಡ ವೇಗವಾಗಿ ಕರಗುತ್ತದೆ. ಹೀಗಾಗಿ ತೂಕ ಇಳಿಕೆ ಸುಲಭ.

ಹಾರ್ಮೋನ್‌ಗಳ ಪ್ರಭಾವ

ದೇಹದ ಮಾಂಸಖಂಡಗಳ ಬೆಳವಣಿಗೆ ಮತ್ತು ಸಾಮರ್ಥ್ಯದಲ್ಲಿ ನಿರ್ದಿಷ್ಟ ಹಾರ್ಮೋನ್‌ಗಳ ಪ್ರಭಾವವಿದೆ. ಇವುಗಳು ಮಧ್ಯಾಹ್ನದ ನಂತರ ಹೆಚ್ಚುತ್ತವೆ. ಹಾಗೆಯೇ ಕೊಬ್ಬಿನ ಶೇಖರಣೆ ಮತ್ತು ಮಾಂಸಖಂಡಗಳ ಸಂಕುಚನಕ್ಕೆ ಕಾರಣವಾಗುವ ಕಾರ್ಟಿಸಾಲ್ ಎಂಬ ಸ್ಟ್ರೆಸ್ ಹಾರ್ಮೋನ್, ಮುಂಜಾನೆ ಅಧಿಕವಾಗಿದ್ದು ನಿಧಾನವಾಗಿ ಕಡಿಮೆಯಾಗುತ್ತಾ ಬರುತ್ತದೆ.

ವ್ಯಾಯಾಮ ಮಾಡಲು ನಮಗೆ ಸೂಕ್ತವಾದ ಸಮಯವನ್ನು ಕಂಡುಕೊಳ್ಳಲು ಕೆಲವು ಕಾಲ ಬೆಳಿಗ್ಗೆ ಮತ್ತು ಒಂದಷ್ಟು ದಿನ ಸಂಜೆ ಎರಡನ್ನೂ ಪ್ರಯತ್ನಿಸಬಹುದು. ಯಾವುದು ನಮಗೆ ಸುಲಭ ಮತ್ತು ಅನುಕೂಲ ಎಂಬುದನ್ನು ನಿರ್ಧರಿಸಿ ನಂತರ ನಿಯಮಿತವಾಗಿ ಅನುಸರಿಸಿದರೆ ವ್ಯಾಯಾಮದ ಪ್ರಯೋಜನಗಳನ್ನು ಪಡೆಯಲು ಸಾಧ್ಯ. ಒಟ್ಟಿನಲ್ಲಿ ಯಾವುದೇ ಆಗಲಿ ಸಮಯ, ವ್ಯಾಯಾಮ ಮಾತ್ರ ಕಡ್ಡಾಯ! ❖

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 74

1011. ಕೆಳಗಿನವುಗಳಲ್ಲಿ ಯಾವುದು ಕಾಳಿದಾಸನ ಕೃತಿಯಲ್ಲ?
ಎ) ಕುಮಾರಸಂಭವ ಬಿ) ಮೇಘದೂತ
ಸಿ) ಅಭಿಜ್ಞಾನ ಶಾಕುಂತಲ ಡಿ) ಮೃಚ್ಛಕಟಿಕ

1012. ಯಾವ ವೇದವು ವರ್ಣಾಶ್ರಮ ಪದ್ಧತಿಗೆ ಸಂಬಂಧಿಸಿದೆ?
ಎ) ಋಗ್ವೇದ ಬಿ) ಯಜುರ್ವೇದ
ಸಿ) ಸಾಮವೇದ
ಡಿ) ಅಥರ್ವಣವೇದ

1013. ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆ ಆಗಿಲ್ಲ?
ಎ) ಮೌರ್ಯ ಸಾಮ್ರಾಜ್ಯ- ಚಂದ್ರಗುಪ್ತ ಮೌರ್ಯ
ಬಿ) ಶುಂಗ ರಾಜವಂಶ- ಪುಷ್ಯಮಿತ್ರಶುಂಗ
ಸಿ) ಶಾತವಾಹನ ರಾಜವಂಶ- ಗೌತಮಿಪುತ್ರ ಶಾತಕರ್ಣಿ
ಡಿ) ವಿಜಯನಗರ ಸಾಮ್ರಾಜ್ಯ- ಹರಿಹರ, ಬುಕ್ಕ

1014. ರಾಣಿ ತ್ರಿಶಲಾ ಯಾರ ತಾಯಿ?
ಎ) ಮಹಾವೀರ ಬಿ) ಗೌತಮ ಬುದ್ಧ
ಸಿ) ಅಶೋಕ ಡಿ) ಕನಿಷ್ಕ

1015. ಬಡಗುತಿಟ್ಟು ಯಾವ ಕಲೆಯ ಪ್ರಕಾರವಾಗಿದೆ?
ಎ) ಡೊಳ್ಳುಕುಣಿತ ಬಿ) ವೀರಗಾಸೆ
ಸಿ) ಯಕ್ಷಗಾನ ಡಿ) ದೊಡ್ಡಾಟ

1016. ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗಿಲ್ಲ?
ಎ) ಆಸ್ಟ್ರೇಲಿಯನ್ ಓಪನ್- ಸಿಡ್ನಿ
ಬಿ) ಫ್ರೆಂಚ್ ಓಪನ್- ಪ್ಯಾರಿಸ್
ಸಿ) ಯುಎಸ್ ಓಪನ್- ನ್ಯೂಯಾರ್ಕ್
ಡಿ) ವಿಂಬಲ್ಡನ್- ಲಂಡನ್

1017. ಕೆಳಗಿನವುಗಳಲ್ಲಿ ಯಾವುದನ್ನು 'ಫೋರ್ಥ್ ಎಸ್ಟೇಟ್' ಎಂದು ಕರೆಯುತ್ತಾರೆ?
ಎ) ಕಾರ್ಯಾಂಗ ಬಿ) ಮಾಧ್ಯಮ
ಸಿ) ಶಾಸಕಾಂಗ ಡಿ) ನ್ಯಾಯಾಂಗ

1018. ಭಾರತದ 'ಕ್ಷಿಪಣಿ ಮನುಷ್ಯ' ಎಂದು ಪ್ರಸಿದ್ಧರಾದವರು ಯಾರು?
ಎ) ವಿಕ್ರಂ ಸಾರಾಭಾಯಿ
ಬಿ) ಸತೀಶ್ ಧವನ್
ಸಿ) ಎ.ಪಿ.ಜೆ. ಅಬ್ದುಲ್ ಕಲಾಂ
ಡಿ) ಎಂ.ಎಸ್. ಸ್ವಾಮಿನಾಥನ್

1019. ಭಾರತದ ಸಂವಿಧಾನದ 92ನೇ ತಿದ್ದುಪಡಿಯ ಮೂಲಕ 8ನೇ ಅನುಸೂಚಿಗೆ ಕೆಳಗಿನ ಯಾವ ಭಾಷೆಯನ್ನು ಸೇರಿಸಿಲ್ಲ?
ಎ) ಭೋಜ್‌ಪುರಿ ಬಿ) ಬೋಡೋ
ಸಿ) ಡೋಗ್ರಿ ಡಿ) ಮೈಥಿಲಿ

1020. ದಕ್ಷಿಣ ಭಾರತದ ಅತೀ ಉದ್ದವಾದ ನದಿ ಯಾವುದು?
ಎ) ಕಾವೇರಿ ಬಿ) ಗೋದಾವರಿ
ಸಿ) ಕೃಷ್ಣಾ ಡಿ) ತುಂಗಭದ್ರಾ

1021. ಹಾಫ್-ಮ್ಯಾರಥಾನ್‌ನಲ್ಲಿ ಕ್ರಮಿಸುವ ದೂರ ಎಷ್ಟು?
ಎ) 18 ಕಿ.ಮೀ ಬಿ) 20 ಕಿ.ಮೀ
ಸಿ) 21 ಕಿ.ಮೀ ಡಿ) 22 ಕಿ.ಮೀ

1022. ಮಾಹಿತಿ ಹಕ್ಕು ಏನು?
ಎ) ಸಾಂವಿಧಾನಿಕ ಹಕ್ಕು
ಬಿ) ಕಾನೂನುಬದ್ಧ ಹಕ್ಕು
ಸಿ) ಮೂಲಭೂತ ಹಕ್ಕು ಡಿ) ಸ್ವಾಭಾವಿಕ ಹಕ್ಕು

1023. ರಾಷ್ಟ್ರದ ಪ್ರಾದೇಶಿಕ ಜಲವು ಅದರ ಕರಾವಳಿಯಿಂದ ಎಷ್ಟು ದೂರದವರೆಗೆ ವ್ಯಾಪಿಸಿರುತ್ತದೆ?
ಎ) 20 ಕಿ.ಮೀ
ಬಿ) 20 ನಾಟಿಕಲ್ ಮೈಲುಗಳು
ಸಿ) 12 ಕಿ.ಮೀ
ಡಿ) 12 ನಾಟಿಕಲ್ ಮೈಲುಗಳು


1024. ಸರಕು ಮತ್ತು ಸೇವೆಗಳ ತೆರಿಗೆ ಇದಾಗಿರುತ್ತದೆ.
ಎ) ನೇರ ತೆರಿಗೆ ಬಿ) ಪರೋಕ್ಷ ತೆರಿಗೆ
ಸಿ) ಎರಡರ ಮಿಶ್ರಣ ಡಿ) ಇದು ಸರಕು ಮತ್ತು ಸೇವೆಗಳ ತೆರಿಗೆ ಮೇಲೆ ಅವಲಂಬಿಸಿರುತ್ತದೆ.

1025. 1919ರ ಜಲಿಯನ್ ವಾಲಾ ಬಾಗ್ ಹತ್ಯಾಕಾಂಡದ ತನಿಖೆ ನಡೆಸಲು ಯಾವ ಸಮಿತಿಯು ಬ್ರಿಟಿಷ್ ಸರ್ಕಾರದಿಂದ ನೇಮಿಸಲ್ಪಟ್ಟಿತ್ತು?
ಎ) ವೆಲ್ಬಿ ಆಯೋಗ
ಬಿ) ಹಂಟರ್ ಸಮಿತಿ
ಸಿ) ಸೈಮನ್ ಆಯೋಗ
ಡಿ) ಬಟ್ಲರ್ ಸಮಿತಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 73ರ ಉತ್ತರಗಳು: 1001. ಎ, 1002. ಡಿ, 1003. ಸಿ, 1004. ಎ, 1005. ಡಿ, 1006. ಬಿ, 1007. ಎ, 1008. ಡಿ, 1009. ಡಿ, 1010. ಡಿ

ಮಾದಕವಸ್ತುಗಳ ಸಹವಾಸ ಬೇಡ



ಡಾ. ಎ. ಶ್ರೀಧರ

ಸದ್ಯದ ಕಾಲಘಟ್ಟದಲ್ಲಿ ಹದಿಹರೆಯದ ಮಕ್ಕಳಿರುವ ಪೋಷಕರು, ಅದರಲ್ಲಿಯೂ ಹೆಚ್ಚಾಗಿ ಅತಿ ದೊಡ್ಡ ನಗರಗಳ ವಾಸಿಗರಲ್ಲಿ ಕಾಡುವ ಪ್ರಶ್ನೆ ಎಂದರೇ ತಮ್ಮ ಮಕ್ಕಳು 'ಡ್ರಗ್ಸ್' ತೆಗೆದುಕೊಳ್ಳುತ್ತಿರಬಹುದೇ ಎನ್ನುವುದು. ಇಂತಹದೊಂದು ಪ್ರಶ್ನೆ ಮೂಡುವುದಕ್ಕೆ ಅತಿ ಮುಖ್ಯ ಕಾರಣವೆಂದರೆ ಮಾದಕವಸ್ತುಗಳನ್ನು ಸೇವಿಸುವವರ ಬಗ್ಗೆ ಹೊರಬೀಳುತ್ತಿರುವ ಸುದ್ದಿಗಳು. ಮದ್ಯ ಮತ್ತು ಮಾದಕವಸ್ತುಗಳ ಚಟ ಬಹಳ ಹಳೆಯ ವ್ಯಸನವಾಗಿದ್ದು ಇದರಿಂದ ಪಾರಾಗುವುದಕ್ಕೆ ವೈದ್ಯಕೀಯ, ನಾಟಿ ಪದ್ಧತಿಗಳ ಚಿಕಿತ್ಸೆ ಅಥವಾ ಪರಿಹಾರದ ಕ್ರಮಗಳೂ ಇವೆ. ಆದರೂ ಕೂಡ ಈ ವ್ಯಸನದಿಂದ ಸಂಪೂರ್ಣವಾಗಿ ಹೊರಬಂದವರು ವಿರಳ. ಈ ಕಾರಣದಿಂದಲೇ ಇದನ್ನು ಮಾನಸಿಕ ಅಸ್ವಸ್ಥತೆ (ತೀವ್ರಸ್ವರೂಪದ ಅಸಹಾಯಕತೆ) ಎಂಬುದಾಗಿ ಪರಿಗಣಿಸಲಾಗುತ್ತದೆ.

ಮಾದಕವಸ್ತುಗಳ ಸೇವನೆಯಿಂದ ಆರೋಗ್ಯಹಾನಿ, ಮಾನಮಾರ್ಯದೆ ಹಾನಿ, ಇತರರಿಗೆ ತೊಂದರೆ ಮತ್ತು ಅಪರಾಧದ ಕಾರ್ಯಗಳು ನಡೆಯುವುದು ವ್ಯಸನಿಗಳಿಗೆ ಗೊತ್ತಿರುತ್ತದೆ; ಆದರೆ ಅವರಿಗೆ ಚಟದಿಂದ ಮುಕ್ತರಾಗಲು ಸಾಧ್ಯವಾಗದು. ಅಷ್ಟೇ ಅಲ್ಲದೆ, ನಿಜವಾಗಿಯೂ ಈ ವಸ್ತುಗಳ ಸೇವನೆಯಿಂದ ಶರೀರಕ್ಕಾಗಲೀ, ಮನಸ್ಸಿಗಾಗಲೀ ಹಿತ, ಹುರುಪು, ಹರುಷ ಬರುವುದು ಗ್ಯಾರಂಟಿಯಲ್ಲ. ಆದರೂ ತಕ್ಷಣದಲ್ಲಿ ಸೇವಿಸಲೇಬೇಕೆಂಬ ಒತ್ತಡ ಈ ಚಟಕ್ಕೆ ಬಲಿಯಾದವರಲ್ಲಿ ಕಂಡುಬರುತ್ತವೆ.

ಹೊರಬರುವ ಪರಿ

ಕೆಲವರು ಮಾದಕ ವ್ಯಸನಿಗಳು ಯಾವುದೇ ವೈದ್ಯಕೀಯ ಚಿಕಿತ್ಸಾ ಕ್ರಮಗಳಿಗೆ ಒಳಗಾಗದೇ ಅಭ್ಯಾಸವನ್ನು ತೊರೆದಿರುವುದರ ನಿದರ್ಶನಗಳಿವೆ. ವ್ಯಕ್ತಿಗಳು ತಮ್ಮ ವರ್ತನೆಗಳತ್ತ ಹೆಚ್ಚು ನಿಗಾ ವಹಿಸಿದಾಗ ಮದ್ಯ ಅಥವಾ ಮಾದಕ ವ್ಯಸನವನ್ನು ದೂರಸರಿಸುವ ವ್ಯಕ್ತಿ ಪ್ರಯತ್ನಗಳು ಯಶಸ್ವಿಯಾಗುವ ಸಾಧ್ಯತೆಗಳು ಹೆಚ್ಚು. ಇಂತಹ ಪ್ರಯತ್ನಗಳಲ್ಲಿ ಆತ್ಮೀಯರ ಪಾತ್ರ ಮಹತ್ವದ್ದು. ಗೆಳೆತನ, ಆತ್ಮೀಯ ಸಂಬಂಧಗಳು ಮೂಡಿಸುವ ನೆಮ್ಮದಿ, ಗಾಢವಾದ ನಂಬಿಕೆಗಳು, ಆತ್ಮವಿಶ್ವಾಸ, ಆದರದ ಭಾವಗಳನ್ನು ಬಲಪಡಿಸುತ್ತದೆ. ಇದರಿಂದಾಗಿ ಆತ್ಮವಿಮರ್ಶೆಗೂ ಉತ್ತೇಜನ ದೊರೆಯುತ್ತದೆ. ಮದ್ಯ ಅಥವಾ ಮಾದಕ ವಸ್ತುಗಳ ಸೇವನೆಯ ಸಮಯ, ಸಂಗಡಿಗರು, ಸನ್ನಿವೇಶಗಳಿಂದ ಸಂಪೂರ್ಣವಾಗಿ ದೂರಸರಿಯುವ ಪ್ರಯತ್ನಗಳು ಸತತವಾಗಿರಬೇಕು. ಮಾದಕವಸ್ತುಗಳನ್ನು ವಿರೋಧಿಸುವಂತಹ ಮನೆಮಂದಿ, ಆತ್ಮೀಯರ ಸಾಂಗತ್ಯವಿದ್ದಲ್ಲಿ ಬಯಕೆಯ ಒತ್ತಡ ಕ್ರಮೇಣ ಕ್ಷೀಣಿಸುತ್ತದೆ. ಹಾಗೆಯೇ ಚಟಕ್ಕೆ ಬೆಂಬಲ ನೀಡುವ ವಸ್ತುಗಳಿಂದ ದೂರ ಉಳಿಯುವುದು ಕೂಡ ಮನಸಿನಲ್ಲಿರುವ ವ್ಯಸನದ ನಿಗ್ರಹದ ಭಾವವನ್ನು ಬೆಂಬಲಿಸುತ್ತದೆ.

ಈ ವಿಧದ ಪ್ರಯತ್ನಗಳು ಯಶಸ್ವಿಯಾಗದಿರುವುದಕ್ಕೆ ಬಹುಮುಖ್ಯ ಕಾರಣ ಬಾಲ್ಯದಿಂದಲೇ ರೂಢಿಸಿಕೊಂಡಂತಹ ಸ್ವಾವಲಂಬನೆಯ ಗುಣಗಳು. ದುರದೃಷ್ಟಕರದ ವಿಷಯವೆಂದರೆ ಬದುಕು ಉತ್ತಮವಾಗುವುದಕ್ಕೆ ಇವುಗಳು ಅತ್ಯಗತ್ಯ. ಹೀಗಾಗಿ ಬಾಲ್ಯದುದ್ದಕ್ಕೂ ಇದನ್ನು ಬಲಪಡಿಸುವ ವಾತಾವರಣವೇ ಇರುತ್ತದೆ. ಆದರೆ, ಚಟಕ್ಕೆ ಸಿಕ್ಕಿಕೊಂಡ ನಂತರದಲ್ಲಿ ಈ ಗುಣವೇ ಚಿಕಿತ್ಸೆ, ಚೇತರಿಕೆಗೆ ಅಡ್ಡಿಯಾಗಿ ನಿಲ್ಲುವುದು. ಚಟದಿಂದ ವಿಮುಕ್ತಿ ಪಡೆಯುವ ಸಮಯದಲ್ಲಿ ತನ್ನತನವೆಂಬ ಈ ಪ್ರಬಲ ಲಕ್ಷಣವನ್ನು ತೊರೆಯಲೇಬೇಕು. ಉದಾಹರಣೆಗೆ, ಚಟದಿಂದ ಹೊರಬರುವುದಕ್ಕೆ ಕಾರಣ ಎನ್ನಬಹುದಾದ ಸಂದರ್ಭಗಳೆಂದರೆ: ಅಕ್ಕರೆಯ ಮಗುವಿನ ಮೇಲಿರುವ ಅನುಕಂಪ, ಅನುರಾಗ; ಪ್ರಿಯಕರ ಅಥವಾ ಪ್ರೇಯಸಿಯ ಅಪೇಕ್ಷೆಯನ್ನು ಈಡೇರಿಸುವ ಸಲುವಾಗಿ ಮಾಡುವ ಶಪಥ, ಅಥವಾ ಗುರಿ ಸಾಧಿಸಲೇಬೇಕೆಂಬ ತೀರ್ಮಾನವೂ ಚಟಕ್ಕೆ ಸವಾಲಾಗಿ ನಿಲ್ಲಬಲ್ಲದು. ಈ ಮಾದರಿಯ ನಡೆನುಡಿಗಳು ತನ್ನಷ್ಟಕ್ಕೆ ತಾನೇ, ಅಂದರೇ ಔಷಧ, ಚಿಕಿತ್ಸೆಗಳ ನೆರವು ಪಡೆಯದೆಯೇ, ಸ್ವಂತದ ಮನೋಬಲದಿಂದಲೇ ಚಟವನ್ನು ಸಂಹರಿಸುವುದು. ವ್ಯಸನಿಯ ವಯಸ್ಸು ಏರಿದಂತೆಲ್ಲಾ ವ್ಯಸನದ ಬಲ ಕುಗ್ಗಬಲ್ಲದೆನ್ನುವುದನ್ನು ಅಂಕಿ-ಅಂಶಗಳ ಮೂಲಕ ಕೆಲವು ಮನೋವೈಜ್ಞಾನಿಕ ಅಧ್ಯಯನಗಳು ಸೂಚಿಸಿವೆ.

> ಅದೆಷ್ಟೋ ಯುವಕ ಯುವತಿಯರು ಮದ್ಯಸೇವನೆ, ಮಾದಕವಸ್ತು ಸೇವನೆಯನ್ನು ಮಾಡಿರುತ್ತಾರೆ; ಆದರೆ ಅವುಗಳಿಗೆ ದಾಸರಾಗದಿರುವುದರ ಉದಾಹರಣೆಗಳೂ ಇವೆ.

ಮನದ ಬಲ ಹೆಚ್ಚು

ಅದೆಷ್ಟೋ ಯುವಕ ಯುವತಿಯರು ಮದ್ಯಸೇವನೆ, ಮಾದಕವಸ್ತು ಸೇವನೆಯನ್ನು ಮಾಡಿರುತ್ತಾರೆ; ಆದರೆ ಅವುಗಳಿಗೆ ದಾಸರಾಗದಿರುವುದರ ಉದಾಹರಣೆಗಳೂ ಇವೆ.

ಅದೇ ರೀತಿಯಲ್ಲಿ ಇತಿಮಿತಿಯಿಂದ ಜೀವನದುದ್ದಕ್ಕೂ ಮದ್ಯ ಸೇವಿಸಿ ಹಿತಕರ ಜೀವನ ನಡೆಸಿರುವವರ ಸಂಖ್ಯೆ ದೊಡ್ಡದೇ ಇದೆ. ಅಂದ ಮೇಲೆ ಮಾದಕವಸ್ತುಗಳ ಶಕ್ತಿಗಿಂತಲೂ ಮನದ ಬಲ ಹೆಚ್ಚು ಪ್ರಭಾವಶಾಲಿ.

ಬಾಲ್ಯದಿಂದಲೇ ಚಟದ ಗುಣಗಳು ದಿನನಿತ್ಯದ ನಡೆನುಡಿಗಳಲ್ಲಿ ಕಂಡುಬರುತ್ತವೆ. ಆರಂಭದ ದಿನಗಳಿಂದಲೇ ಮಕ್ಕಳ ಸ್ವಭಾವ, ಬಯಕೆಗಳನ್ನು ವ್ಯಕ್ತಪಡಿಸುವ ಮತ್ತು ಈಡೇರಿಸಿಕೊಳ್ಳುವುದರತ್ತ ಪೋಷಕರ ಗಮನವಿರಬೇಕು. ಮಕ್ಕಳ ಕೋಪತಾಪಗಳ ರೀತಿ, ಆಸೆ-ನಿರಾಸೆಗಳ ವ್ಯಕ್ತಪಡಿಸುವ ನಡೆನುಡಿಗಳು ಅಸಮರ್ಪಕವೆಂದೆನಿಸಿದಾಗ ಅಂತಹವುಗಳನ್ನು ಸರಿಪಡಿಸುವುದು ಬಹಳ ಮುಖ್ಯ. ಪೋಷಕರು, ಪಾಲಕರು, ಶಿಕ್ಷಕರು ಕೂಡ ಮದ್ಯ, ಮಾದಕವಸ್ತುಗಳ ಬಳಕೆಯಿಂದ ಉಂಟಾಗುವ ಅಪಾಯಗಳ ಬಗ್ಗೆ ಸೂಕ್ತ ತಿಳಿವಳಿಕೆಯನ್ನು ಪಡೆಯುವುದರಿಂದ ಮಕ್ಕಳ ದುಶ್ಚಟಗಳ ಒಲವನ್ನು ತಡೆಗಟ್ಟಬಹುದು. ❖



ಸುಭಾಷಿತ

ಪ್ರತಿಯೊಬ್ಬರೂ ಇರುವೆಗಳ ಬಗ್ಗೆ ಅಧ್ಯಯನ ಮಾಡಬೇಕು. ನಾಲ್ಕು ಅಂಶಗಳ ಅದ್ಭುತ ತತ್ವಶಾಸ್ತ್ರ ಅವುಗಳ ಬಳಿ ಇದೆ. ಅವೆಂದರೆ: ಎಂದಿಗೂ ಬಿಟ್ಟುಕೊಡದಿರುವುದು, ಮುಂದೆ ಮುಂದೆ ಸಾಗುವುದು, ಸಕಾರಾತ್ಮಕವಾಗಿ ಇರುವುದು ಮತ್ತು ತಮಗೆ ಸಾಧ್ಯವಾದ ಎಲ್ಲವನ್ನೂ ಮಾಡುವುದು.

-ಜಿಮ್ ರೌನ್

ಏರ್ ಇಂಡಿಯಾ ಖರೀದಿ ಟಾಟಾ ಹೊಸ ಔದ್ಯಮಿಕ ಸಾಹಸ

ದೇಶದ ಅತಿದೊಡ್ಡ ಉದ್ಯಮ ಸಮೂಹಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಟಾಟಾ ಸನ್ಸ್, ಬಹುದೊಡ್ಡ ಪಯಣವೊಂದಕ್ಕೆ ಸನ್ನದ್ಧವಾಗಿ ನಿಂತಿದೆ. ಈ ಉದ್ಯಮ ಸಮೂಹದ ಪಾಲಿಗೆ ಬಹುಶಃ ತೀರಾ ಅಪರೂಪದ ಅವಕಾಶ ಇದು. ಹಿಂದೆ ತಾನೇ ಹುಟ್ಟುಹಾಕಿದ್ದ ಏರ್ ಇಂಡಿಯಾ ಕಂಪನಿಯನ್ನು ಟಾಟಾ ಸನ್ಸ್ ಕಂಪನಿಯು ಬಿಡ್ ಮೂಲಕ ಗೆದ್ದುಕೊಂಡಿದೆ. ಏರ್ ಇಂಡಿಯಾ ಬಿಡ್‌ನ ಸ್ಪರ್ಧೆಯಲ್ಲಿ ಇದ್ದವರು ಇಬ್ಬರು ಮಾತ್ರ– ಟಾಟಾ ಸನ್ಸ್ ಹಾಗೂ ಸ್ಪೈಸ್ ಜೆಟ್‌ನ ಪ್ರವರ್ತಕ ಅಜಯ್ ಸಿಂಗ್. ಬಿಡ್ ಗೆದ್ದುಕೊಂಡಿದ್ದು ಟಾಟಾ ಸನ್ಸ್. ಕೇಂದ್ರ ಸರ್ಕಾರಕ್ಕೆ ₹ 2,700 ಕೋಟಿ ನಗದು ಪಾವತಿಸಿ, ಏರ್ ಇಂಡಿಯಾ ಕಂಪನಿಯ ಮೇಲಿರುವ ಒಟ್ಟು ಸಾಲದಲ್ಲಿ ₹ 15,300 ಕೋಟಿಯಷ್ಟನ್ನು ತಾನು ವಹಿಸಿಕೊಂಡು ಟಾಟಾ ಸನ್ಸ್, ಈ ವಿಮಾನಯಾನ ಕಂಪನಿಯನ್ನು ತನ್ನದಾಗಿಸಿಕೊಳ್ಳಲಿದೆ. ಈಗಾಗಲೇ ಎರಡು ವಿಮಾನಯಾನ ಕಂಪನಿಗಳನ್ನು ಟಾಟಾ ಸಮೂಹವು ಮುನ್ನಡೆಸುತ್ತಿದೆ ಎಂಬುದು ಗಮನಾರ್ಹ. ಏರ್ ಇಂಡಿಯಾ ಬಿಡ್ ಗೆದ್ದುಕೊಂಡ ನಂತರ ಭಾವುಕವಾಗಿ ಪ್ರತಿಕ್ರಿಯೆ ನೀಡಿರುವ ಟಾಟಾ ಸನ್ಸ್ ಅಧ್ಯಕ್ಷ ನಟರಾಜನ್ ಚಂದ್ರಶೇಖರನ್ ಅವರು, 'ಇಡೀ ದೇಶ ಹೆಮ್ಮೆಪಡುವ ರೀತಿಯಲ್ಲಿ ಈ ವಿಮಾನಯಾನ ಕಂಪನಿಯನ್ನು ಕಟ್ಟುತ್ತೇವೆ' ಎಂದು ಹೇಳಿದ್ದಾರೆ. ದೇಶದ ವಿಮಾನಯಾನ ಉದ್ಯಮ ವಲಯವು ತೀವ್ರ ಏರಿಳಿತಗಳನ್ನು ಕಂಡಿದೆ. ಇಲ್ಲಿ ದೊಡ್ಡ ಉದ್ಯಮಿಗಳು ಹಣ ಹೂಡಿದ್ದಿದೆ, ದೊಡ್ಡ ದೊಡ್ಡ ಕಂಪನಿಗಳು ಆಗಸದೆತ್ತರಕ್ಕೆ ಬೆಳೆಯುವ ಭರವಸೆಯನ್ನು ಹುಟ್ಟಿಸಿದ್ದಿದೆ. ಹಾಗೆಯೇ, ಕೆಲವು ವಿಮಾನಯಾನ ಕಂಪನಿಗಳು ಆರ್ಥಿಕವಾಗಿ ಕುಸಿದುಬಿದ್ದ ವಿಷಾದಕರ ನಿದರ್ಶನಗಳೂ ಇವೆ. ಈಗ ಕೋವಿಡ್ ಸಾಂಕ್ರಾಮಿಕ ತಂದಿತ್ತ ಪಲ್ಲಟಗಳಿಂದಾಗಿ, ದಿನೇ ದಿನೇ ಹೆಚ್ಚುತ್ತಿರುವ ಇಂಧನ ಬೆಲೆಯಿಂದಾಗಿ ವಿಮಾನಯಾನ ಉದ್ಯಮವು ಒತ್ತಡ ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ, ಏರ್ ಇಂಡಿಯಾ ಕಂಪನಿಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿರುವ ಟಾಟಾ ಸಮೂಹವು, ದೊಡ್ಡ ಪ್ರಮಾಣದ ಔದ್ಯಮಿಕ ಸಾಹಸಕ್ಕೆ ಕೈಹಾಕಿದೆ.



'ಮಹಾರಾಜ'ನ ಗತ ವೈಭವವನ್ನು ಮರಳಿ ತಂದುಕೊಡುವ ಹೊಣೆ ಈಗ ಟಾಟಾ ಸಂಸ್ಥೆ ಮೇಲೆ ಇದೆ

ಏರ್ ಇಂಡಿಯಾ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಈ ಹಿಂದೆಯೂ ಕೇಂದ್ರ ಸರ್ಕಾರ ಪ್ರಯತ್ನಿಸಿತ್ತು. ಆದರೆ ಮಾರಾಟಕ್ಕೆ ಸಂಬಂಧಿಸಿದ ಷರತ್ತುಗಳು ಹಾಗೂ ಏರ್ ಇಂಡಿಯಾ ಮೇಲಿರುವ ಸಾಲದ ಪ್ರಮಾಣವು ಹಿಂದಿನ ಪ್ರಯತ್ನ-ಗಳಿಗೆ ಯಶಸ್ಸು ಕಾಣಲು ಅವಕಾಶ ಮಾಡಿಕೊಡಲಿಲ್ಲ ಎಂದು ಉದ್ಯಮದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ನಂತರ ಕೇಂದ್ರ ಸರ್ಕಾರವು ಬಿಡ್‌ಗೆ ಸಂಬಂಧಿಸಿದ ಷರತ್ತುಗಳಲ್ಲಿ ಕೆಲವು ಮಾರ್ಪಾಡುಗಳನ್ನು ತಂದಿತು. ಅದಾದ ನಂತರದಲ್ಲಿಯೇ ಏರ್ ಇಂಡಿಯಾ ಮಾರಾಟಕ್ಕೆ ಯಶಸ್ಸು ಸಿಕ್ಕಿದ್ದು. ನಷ್ಟ ಹಾಗೂ ಸಾಲದ ಸುಳಿಗೆ ಸಿಲುಕಿದ್ದ ಏರ್ ಇಂಡಿಯಾ ಕಂಪನಿಯನ್ನು ಮಾರಾಟ ಮಾಡುವುದು ಕೇಂದ್ರ ಸರ್ಕಾರದ ಪಾಲಿಗೆ ಅನಿವಾರ್ಯವೂ ಆಗಿತ್ತು. ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಒದಗಿಸಿದರೂ ಕಂಪನಿಯು ನಷ್ಟದ ಸುಳಿಯಿಂದ ಮೇಲೆದ್ದು ಬರುತ್ತಿರಲಿಲ್ಲ. ಖಾಸಗಿ ಕಂಪನಿಯು ಚೆನ್ನಾಗಿ ನಡೆಸುತ್ತಿದ್ದ ವಿಮಾನಯಾನ ಕಂಪನಿಯೊಂದನ್ನು ಸರ್ಕಾರವು ಏಕೆ ರಾಷ್ಟ್ರೀಕರಣ ಮಾಡಬೇಕಿತ್ತು ಎಂಬ ಪ್ರಶ್ನೆ ಉದ್ಯಮ ವಲಯದಲ್ಲಿ ಮೊದಲಿನಿಂದಲೂ ಇದೆ. ಏರ್ ಇಂಡಿಯಾವನ್ನು ಸರ್ಕಾರವು ತನ್ನ ಅಧೀನಕ್ಕೆ ತೆಗೆದುಕೊಂಡ ನಂತರದಲ್ಲಿ ನಡೆದ ವಿದ್ಯಮಾನಗಳು ಈ ಪ್ರಶ್ನೆಗೆ ಪುಷ್ಟಿ ನೀಡುವಂತಿವೆ. ಸಾರ್ವಜನಿಕರಿಂದ ತೆರಿಗೆ ರೂಪದಲ್ಲಿ ಸಂಗ್ರಹಿಸಿದ ಕೋಟ್ಯಂತರ ರೂಪಾಯಿಯನ್ನು ಸುರಿದರೂ, ಏರ್ ಇಂಡಿಯಾ ಲಾಭದ ಹಳಿಗೆ ಬರಲಿಲ್ಲ. ಮೂಲಸೌಕರ್ಯ ಅಭಿವೃದ್ಧಿಗಾಗಿ ಅಥವಾ ಸಾರ್ವಜನಿಕರಿಗೆ ಒಳಿತು ಮಾಡಬಹುದಾದ ಇತರ ಯಾವುದೇ ಉದ್ದೇಶಕ್ಕೆ ಬಳಸಿಕೊಳ್ಳಬಹುದಾಗಿದ್ದ ಹಣ ಪೋಲಾಯಿತು. ಹೆಚ್ಚಿನ ದೇಶಗಳಲ್ಲಿ ನಾಗರಿಕ ವಿಮಾನಯಾನ ವಲಯದಲ್ಲಿ ಸರ್ಕಾರಿ ಕಂಪನಿಗಳು ಇಲ್ಲ. ಈ ರಂಗದಲ್ಲಿ ಖಾಸಗಿಯವರು ಹಣ ಹೂಡಿಕೆ ಮಾಡಿದ್ದಾರೆ.

ಟಾಟಾ ಸಮೂಹವು ಇನ್ನು ಒಂದು ವರ್ಷದವರೆಗೆ ಏರ್ ಇಂಡಿಯಾದ ಯಾವುದೇ ನೌಕರರನ್ನು ಕೆಲಸದಿಂದ ಕೈಬಿಡುವಂತೆ ಇಲ್ಲ. ನಂತರದಲ್ಲಿ ಅವರಿಗೆ ಸ್ವಯಂ ನಿವೃತ್ತಿ ಯೋಜನೆ (ವಿಆರ್‌ಎಸ್) ಜಾರಿಗೆ ತರಲು ಅವಕಾಶ ಇದೆ ಎಂದು ವರದಿಯಾಗಿದೆ. ದೇಶದಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿನ ಕೆಲಸದ ಸಂಸ್ಕೃತಿಯಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸ ಇದೆ. ಏರ್ ಇಂಡಿಯಾ ಉದ್ಯೋಗಿಗಳನ್ನು ಟಾಟಾ ಸಮೂಹವು ತನ್ನಲ್ಲಿನ ಕೆಲಸದ ಸಂಸ್ಕೃತಿಗೆ ಹೇಗೆ ಒಗ್ಗಿಸುತ್ತದೆ ಎಂಬುದನ್ನು ಕಾದು ನೋಡಬೇಕು. ಬಿಕ್ಕಟ್ಟಿನ ಸಂದರ್ಭದಲ್ಲಿ ಏರ್ ಇಂಡಿಯಾ ಕಂಪನಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವ ಟಾಟಾ ಸಮೂಹಕ್ಕೆ ಅದನ್ನು ನಿಭಾಯಿಸುವ, ಹೊಸದಾಗಿ ಅಗತ್ಯ ಬಂಡವಾಳವನ್ನು ತರುವ ಶಕ್ತಿ ಇದೆ ಎಂದು ಉದ್ಯಮದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. 'ಮಹಾರಾಜ'ನ ಗತ ವೈಭವವನ್ನು ಮರಳಿ ತಂದುಕೊಡುವ ಹೊಣೆ ಈಗ ಟಾಟಾ ಮೇಲೆ ಇದೆ.

ದಿನದ ಟ್ವೀಟ್




ಪ್ರಕೃತಿ ಮತ್ತು ಮಕ್ಕಳು

ಹವಾಮಾನ ಬಿಕ್ಕಟ್ಟು ಮಾನವಕುಲಕ್ಕೆ ಈ ಶತಮಾನದ ದೊಡ್ಡ ಸವಾಲಾಗಿದೆ. ಪ್ರಕೃತಿಯ ವಿಷಯದಲ್ಲಿ ನಮ್ಮ ಮಕ್ಕಳನ್ನು ಸಂವೇದನಾಶೀಲರನ್ನಾಗಿಸುವುದು ಮತ್ತು ಮಾಲಿನ್ಯ ನಿವಾರಣೆ ಬಗ್ಗೆ ಅವರಲ್ಲಿ ಕಾಳಜಿ ಮೂಡುವಂತೆ ಮಾಡುವುದು ಯಾವುದೇ ಅರ್ಥಪೂರ್ಣ ಬದಲಾವಣೆ ತರುವ ದಿಸೆಯಲ್ಲಿ ಅತ್ಯಂತ ನಿರ್ಣಾಯಕವಾದುದು. ಇದಕ್ಕೆ ಪೂರಕವಾಗಿ ಮಕ್ಕಳಿಗೆ ಪ್ರಕೃತಿ ಆಧಾರಿತ ಕಥೆಗಳನ್ನು ಹೇಳುವುದಕ್ಕಿಂತ ಉತ್ತಮವಾದ ಮಾರ್ಗ ಬೇರೊಂದಿಲ್ಲ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ವೀರಶೈವ ಲಿಂಗಾಯತರ ಅನುಕಂಪ ಗಿಟ್ಟಿಸಲಿಕ್ಕಾಗಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಸಿದ್ದರಾಮಯ್ಯ ಪೈಪೋಟಿಗೆ ಬಿದ್ದವರಂತೆ, ಆದಾಯ ತೆರಿಗೆ ಇಲಾಖೆಯ ದಾಳಿಯನ್ನು ಯಡಿಯೂರಪ್ಪ ಕುಟುಂಬ ದೊಂದಿಗೆ ಸಮೀಕರಿಸಿ ಮಾತನಾಡುತ್ತಿದ್ದಾರೆ. ಇದರಿಂದ ಕಾಂಗ್ರೆಸ್, ಜೆಡಿಎಸ್‌ಗೆ ಕಿಂಚಿತ್ ಲಾಭವಾಗಲ್ಲ. ಬಿಜೆಪಿಗೆ ನಷ್ಟವೂ ಆಗಲ್ಲ. ಏಕೆಂದರೆ ವೀರಶೈವ ಲಿಂಗಾಯತರು ಬುದ್ಧಿವಂತರು.

ಎಚ್.ವಿಶ್ವನಾಥ್, ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 12-10-1996

• **ಮಾಯಾವತಿಯೇ ಮುಖ್ಯಮಂತ್ರಿ: ಕಾಂಗ್ರೆಸ್ ಷರತ್ತಿಗೆ ರಂಗ ನಕಾರ**

ನವದೆಹಲಿ, ಅ. 11 (ಪಿಟಿಐ)– ಉತ್ತರ ಪ್ರದೇಶದ ಮುಖ್ಯಮಂತ್ರಿ ಹುದ್ದೆಗೆ ಬಿಎಸ್‌ಪಿ ನಾಯಕಿ ಮಾಯಾವತಿ ಅವರಿಗೆ ಕಾಂಗ್ರೆಸ್ ಬೆಂಬಲ ಘೋಷಿಸಿದೆ. ಆದರೆ, ಕಾಂಗ್ರೆಸ್ಸಿನ ಈ ಷರತ್ತಿಗೆ ಸಂಯುಕ್ತರಂಗ ಒಪ್ಪಿಲ್ಲ. ಈ ಮಧ್ಯೆ ಮಾಯಾವತಿಯನ್ನು ಮುಖ್ಯಮಂತ್ರಿ ಮಾಡಲು ಬಿಜೆಪಿ ಸಹಿತ ಯಾರದೇ ಬೆಂಬಲ ಪಡೆಯಲು ತಾವು ಸಿದ್ಧ ಎಂದು ಬಿಎಸ್‌ಪಿ ನಾಯಕ ಕಾನ್ಷಿರಾಂ ಪ್ರಕಟಿಸಿದ್ದು, ಉತ್ತರಪ್ರದೇಶದಲ್ಲಿ ರಾಜಕೀಯ ಸ್ಥಿತಿ ತೀರಾ ಅನಿಶ್ಚಯದ ತಿರುವು ಪಡೆದಿದೆ.

'ಯಾವುದೇ ಪಕ್ಷ ನಮಗೆ ಅಸ್ಪೃಶ್ಯವಲ್ಲ. ಸರ್ಕಾರ ರಚಿಸಲು ನಾವೂ ಎಲ್ಲ ಯತ್ನಗಳನ್ನು ನಡೆಸಲಿದ್ದೇವೆ' ಎಂದು ಬಿಜೆಪಿಯೂ ಹೇಳಿದ್ದು, ಈಗ ಎಲ್ಲರ ಕಣ್ಣು ರಾಜ್ಯಪಾಲರ ಮೇಲಿದೆ.

• **ರಾವ್ ವಿಚಾರಣೆಗೆ ವಿಶೇಷ ಕೋರ್ಟ್**

ನವದೆಹಲಿ, ಅ. 11 (ಪಿಟಿಐ, ಯುಎನ್‌ಐ)– ಪಿ.ವಿ. ನರಸಿಂಹ ರಾವ್ ಆರೋಪಿಯಾಗಿರುವ ಲಕ್ಕೂ ಭಾಯಿ ವಂಚನೆ ಪ್ರಕರಣ ಮತ್ತು ಸೇಂಟ್ ಕಿಟ್ಸ್ ಪ್ರಕರಣದ ವಿಚಾರಣೆಯನ್ನು ದೆಹಲಿಯ ಭದ್ರತಾ ವಲಯಕ್ಕೆ ಸೇರಿದ ವಿಶೇಷ ನ್ಯಾಯಾಲಯದಲ್ಲಿ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 12-10-1971

• **ಮದ್ರಾಸ್ ಭೂ ಸುಧಾರಣೆ ಕಾನೂನು ಕ್ರಮಬದ್ಧ: ಸುಪ್ರೀಂ ಕೋರ್ಟ್ ತೀರ್ಪು**

ನವದೆಹಲಿ, ಅ. 11– ಒಂದು ಸಂಸಾರ ಹೊಂದಿರಬಹುದಾದ ಜಮೀನಿನ ಪರಮಾವಧಿ ಮಿತಿಯನ್ನು 30 ಸ್ಟ್ಯಾಂಡರ್ಡ್ ಎಕರೆಗಳಿಗೆ ಒಳಪಡಿಸುವ 1961ರ ಮದ್ರಾಸ್ ಭೂ ಸುಧಾರಣೆ ಕಾನೂನು ಕ್ರಮಪ್ರಾಪ್ತವೆಂದು ಶ್ರೇಷ್ಠ ನ್ಯಾಯಾಧೀಶ ಶ್ರೀ ಎಸ್.ಎಂ.ಸಕ್ರಿ ಅವರು ಅಧ್ಯಕ್ಷರಾಗಿದ್ದ ಸುಪ್ರೀಂ ಕೋರ್ಟಿನ ಏಳು ಜನ ನ್ಯಾಯಾಧೀಶರ ವಿಶೇಷ ನ್ಯಾಯಪೀಠವು ಇಂದು ತೀರ್ಪು ನೀಡಿತು.

ಆ ಕಾನೂನು ಕ್ರಮಪ್ರಾಪ್ತವೆಂದು ಮದರಾಸು ಹೈಕೋರ್ಟ್ ನೀಡಿದ್ದ ತೀರ್ಪಿನ ವಿರುದ್ಧ ಜಗನ್ನಾಥ್ ಎಂಬುವವರೂ ಮತ್ತಿತರ ಕೆಲವರೂ ಸಲ್ಲಿಸಿದ್ದ ಮನವಿಗಳನ್ನು ನ್ಯಾಯಾಲಯ ವಜಾ ಮಾಡಿತು.

1964ರಲ್ಲಿ ಈ ಕಾನೂನನ್ನು ಸುಪ್ರೀಂ ಕೋರ್ಟ್, ಅದು ಸಂವಿಧಾನ ನೀಡುವ ಆಸ್ತಿ ಹಕ್ಕನ್ನು ಉಲ್ಲಂಘಿಸುವುದೆಂದು ಹೇಳಿ ರದ್ದು ಮಾಡಿತ್ತು.

• **ಗಾಂಧಿ ನಿವಾಸವನ್ನೂ ಬಿಡದ ಸಾರಾಯಿ**

ಮಧುರೆ, ಅ. 11– ಧೋತ್ರ, ಅಂಗಿ ಹಾಕುವುದನ್ನು ತ್ಯಜಿಸಿ, ಅಂದಿನ ಭಾರತದ ಬಡತನ ಪ್ರತಿಬಿಂಬಿಸಲು ತುಂಡು ಪಂಚೆಯನ್ನು ಮಾತ್ರವೇ ಇನ್ನು ಮುಂದೆ ಧರಿಸಬೇಕೆಂಬ ಐತಿಹಾಸಿಕ ನಿರ್ಧಾರವನ್ನು 1921ರಲ್ಲಿ ರಾಷ್ಟ್ರಪಿತ ಗಾಂಧೀಜಿ ಅವರು ತೆಗೆದುಕೊಂಡ ಇಲ್ಲಿನ ಕಟ್ಟಡದಲ್ಲಿ ಈಗ ಸಾರಾಯಿ ಅಂಗಡಿ ತೆರೆಯಲಾಗಿದೆ ಎಂಬ ದೂರನ್ನು ತನಿಖೆಗೆ ಒಪ್ಪಿಸಿರುವುದಾಗಿ ಮಧುರೆಯ ಜಿಲ್ಲಾ ಕಲೆಕ್ಟರರು ಇಂದು ತಿಳಿಸಿದರು.

ಗಾಂಧೀಜಿ ಅವರು ನಿರ್ಧಾರ ತೆಗೆದುಕೊಂಡ ಮನೆಯೇ ಅದಾಗಿದ್ದರೆ, ಅಂಗಡಿಯನ್ನು ಬೇರೆಡೆಗೆ ಬದಲಾಯಿಸುವುದಾಗಿ ಅವರು ತಿಳಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ನಡೆಯಬೇಕೆಂದು ಬಯಸುವ ಪರಾಮರ್ಶೆ ಇತರ ಎಲ್ಲ ಕ್ಷೇತ್ರಗಳಲ್ಲೂ ನಡೆಯಬೇಕಾಗಿದೆ

ಶಿಕ್ಷಣದ ಉದ್ದೇಶ ಮತ್ತು ಸಾಮರ್ಥ್ಯ ವೃದ್ಧಿ



ವಿಶ್ಲೇಷಣೆ

ಎಂ.ಚಂದ್ರ ಪೂಜಾರಿ

ಹೊಸ ಶಿಕ್ಷಣ ನೀತಿ ಹಲವು ಹೊಸ ಸಂಗತಿಗಳನ್ನು ಒಳಗೊಂಡಿದೆ. ಈ ಹಿಂದಿನ ಮೂರು ವರ್ಷಗಳ ಡಿಗ್ರಿ ಬದಲು ನಾಲ್ಕು ವರ್ಷಗಳ ಡಿಗ್ರಿ, ಏಕಶಿಸ್ತು ಬದಲು ಬಹುಶಿಸ್ತಿಗೆ ಒತ್ತು, ಮಧ್ಯದಲ್ಲಿ ಬಿಡುವವರ ಶ್ರಮ ವ್ಯರ್ಥವಾಗುವ ಬದಲು ಅವರಿಗೂ ಒಂದು ಸರ್ಟಿಫಿಕೇಟ್, ಒಂದು ಶಿಸ್ತಿನಿಂದ ಮತ್ತೊಂದು ಶಿಸ್ತಿಗೆ ಬದಲಾಯಿಸುವ ಅವಕಾಶಗಳಿವೆ. ಇವೆಲ್ಲವೂ ಹೊಸ ಶಿಕ್ಷಣ ಹೇಗೆ ಜಾರಿಗೆ ಬರುತ್ತದೆ ಎನ್ನುವ ಪ್ರಶ್ನೆಗೆ ಉತ್ತರ.

ನಡೆಯುತ್ತಿರುವ ಬಹುತೇಕ ಚರ್ಚೆಗಳಲ್ಲಿ ಇವೇ ವಿಚಾರಗಳು ಮುಂಚೂಣಿಗೆ ಬಂದು, ಶಿಕ್ಷಣದ ಉದ್ದೇಶ ಏನು ಎನ್ನುವ ಪ್ರಶ್ನೆ ಮುಂಚೂಣಿಗೆ ಬರಲಿಲ್ಲ. ಶಿಕ್ಷಣದ ಉದ್ದೇಶವನ್ನು ಚರ್ಚಿಸುವುದು ಈ ಲೇಖನದ ಉದ್ದೇಶ.

ಶಿಕ್ಷಣದ ಉದ್ದೇಶ ಏನು ಅಥವಾ ಶಿಕ್ಷಣ ಯಾಕೆ ಬೇಕು ಎನ್ನುವ ಪ್ರಶ್ನೆಗೆ, ವ್ಯಕ್ತಿಯ ಸಾಮರ್ಥ್ಯವನ್ನು ವೃದ್ಧಿ-ಸುವುದಕ್ಕಾಗಿ ಶಿಕ್ಷಣ ಬೇಕು ಎನ್ನುವ ಸರಳ ಉತ್ತರ ಇದೆ. ಆದಾಯ ಗಳಿಸುವ ಸಾಮರ್ಥ್ಯವನ್ನು ವೃದ್ಧಿಸುವುದು ಒಂದು ಉದ್ದೇಶ. ಗಳಿಸಿದ್ದನ್ನು ಬಳಸಿಕೊಂಡು ಹೇಗೆ ಬದುಕಬೇಕೆಂದು ಪಾಠ ಮಾಡುವುದು ಎರಡನೇ ಉದ್ದೇಶ. ಮೊದಲನೆಯದ್ದು ಆದಾಯ ಗಳಿಸುವ ಪರಿಣತಿಗೆ (ಸ್ಕಿಲ್) ಸಂಬಂಧಿಸಿದರೆ, ಎರಡನೆಯದ್ದು ಮೌಲ್ಯಕ್ಕೆ ಸಂಬಂಧಿಸಿದೆ. ಈ ದೃಷ್ಟಿಯಿಂದ ನೋಡಿದರೆ ಹಿಂದಿನ ನೀತಿಗೂ ಹೊಸ ಶಿಕ್ಷಣ ನೀತಿಗೂ ವಿಶೇಷ ವ್ಯತ್ಯಾಸ ಇಲ್ಲ. ಅಂದರೆ ಎರಡೂ ವ್ಯಕ್ತಿಯ ಸಾಮರ್ಥ್ಯ-ವನ್ನು ವೃದ್ಧಿಸುವ ಉದ್ದೇಶಕ್ಕೆ ಹೆಚ್ಚಿನ ಮಹತ್ವ ನೀಡಿವೆ. ಹೊಸ ಶಿಕ್ಷಣ ನೀತಿಯಲ್ಲಿ ಸೃಜನಶೀಲತೆ, ವಿಮರ್ಶಾತ್ಮಕ ದೃಷ್ಟಿಕೋನ ಬೆಳೆಸುವುದರ ಬಗ್ಗೆ ಉಲ್ಲೇಖಗಳಿದ್ದರೂ ಅವು ನೀತಿಯ ಮೂಲ ಆಶಯವಾಗಿಲ್ಲ.

ಶಿಕ್ಷಣದಿಂದ ವ್ಯಕ್ತಿಯ 'ದುಡಿದು ಗಳಿಸುವ ಸಾಮರ್ಥ್ಯ' ವೃದ್ಧಿ ಆದ ಕೂಡಲೇ ಅವರ ಬದುಕಿನ ಸಾಧ್ಯತೆಗಳು ಹೆಚ್ಚಬಹುದೇ? ಶಿಕ್ಷಣ ನೀಡಿದ 'ಮೌಲ್ಯ'ಕ್ಕೆ ಅನುಗುಣವಾಗಿ ಶಿಕ್ಷಿತರು ಬದುಕು ಕಟ್ಟಿಕೊಳ್ಳಬಹುದೇ ಎನ್ನುವ ಪ್ರಶ್ನೆಗಳಿಗೆ ಸಕಾರಾತ್ಮಕ ಉತ್ತರ ಕಷ್ಟ. ಏಕೆಂದರೆ ಈಗಾಗಲೇ ನಮ್ಮ ಮುಂದೆ ಕೋಟಿಗಟ್ಟಲೆ ಶಿಕ್ಷಿತ ನಿರು-ದ್ಯೋಗಿಗಳಿದ್ದಾರೆ. ಬದುಕಿನ ಸಾಧ್ಯತೆಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಶಿಕ್ಷಣದ ಸಾಮರ್ಥ್ಯಕ್ಕಿಂತ ಹುಟ್ಟಿನಿಂದ ಬಂದ ಅನುಕೂಲಗಳು ಹೆಚ್ಚಿನ ಪ್ರಭಾವ ಬೀರುತ್ತಿವೆ. ಶಿಕ್ಷಣ ಪ್ರತಿಪಾದಿಸುವ ಮೌಲ್ಯಗಳನ್ನು, ಹುಟ್ಟಿನಿಂದ ಬಂದ ಮೌಲ್ಯಗಳು ದಿನಾ ಉಲ್ಲಂಘಿಸುತ್ತಿರುವುದನ್ನು ನೋಡುತ್ತಿದ್ದೇವೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವ್ಯಕ್ತಿಯ ಸಾಮರ್ಥ್ಯವನ್ನು ವೃದ್ಧಿಸುವ ಉದ್ದೇಶ ಹೊಸ ಶಿಕ್ಷಣ ನೀತಿ ಬಯಸುವ 'ತಳಸ್ತರವನ್ನು ಬೆಂಬಲಿಸುವ' (ಈಕ್ವಿಟಿ), 'ಎಲ್ಲರನ್ನೂ ಒಳಗೊಳ್ಳುವ' (ಇನ್‌ಕ್ಲೂಸಿವ್) ಮತ್ತು 'ಎಲ್ಲರಿಗೂ ಲಭ್ಯವುಳ್ಳ' (ಆ್ಯಕ್ಸಸ್) ಶಿಕ್ಷಣ ವ್ಯವಸ್ಥೆ ಮತ್ತು ಸಮಾಜವನ್ನು ರೂಪಿಸುವುದು ಕಷ್ಟ. ಏಕೆಂದರೆ ವ್ಯಕ್ತಿಯ ಬದುಕುವ ಸಾಧ್ಯತೆಗಳನ್ನು ಶಿಕ್ಷಣ ರೂಪಿಸುವುದಕ್ಕಿಂತ ಹೆಚ್ಚು ಹೊರಗಿನ ಪರಿಸರ ರೂಪಿಸುತ್ತಿದೆ.

ಈ 70 ವರ್ಷಗಳಲ್ಲಿ ಶಿಕ್ಷಣ ತನ್ನ ಆದರ್ಶಕ್ಕೆ ಅನುಗುಣವಾಗಿ ಸಮಾಜವನ್ನು ರೂಪಿಸುವ ಬದಲು ಸಮಾಜ ತನ್ನ (ಬಲಾಢ್ಯರ) ಆಸಕ್ತಿಗೆ ಅನುಸಾರ ಶಿಕ್ಷಣವನ್ನು ರೂಪಿಸಿದೆ. ಈ ಬೆಳವಣಿಗೆಯನ್ನು ದೇಶೀಯತೆ, ಸ್ಥಳೀಯತೆ, ನಮ್ಮ ಪರಂಪರೆ, ಸಂಸ್ಕೃತಿ ಇತ್ಯಾದಿ ನೆಲೆಯಲ್ಲಿ ಸ್ವೀಕರಿಸುತ್ತಾ ಬಂದಿದ್ದೇವೆ.

ಇಂತಹ ಸಂದರ್ಭದಲ್ಲಿ ಹೊಸ ಶಿಕ್ಷಣ ನೀತಿ ಬಯಸುವ ಎಲ್ಲರನ್ನೂ ಒಳಗೊಳ್ಳುವ, ತಳಸ್ತರದವರನ್ನು ಬೆಂಬಲಿಸುವ ಮತ್ತು ಎಲ್ಲರಿಗೂ ಲಭ್ಯವಾಗುವ ಶಿಕ್ಷಣ ವ್ಯವಸ್ಥೆ ಮತ್ತು ಸಮಾಜ ರೂಪುಗೊಳ್ಳಬೇಕಾ-ದರೆ ಶಿಕ್ಷಣದ ಉದ್ದೇಶ- ಜ್ಞಾನ ಸೃಷ್ಟಿ ಮತ್ತು ಜ್ಞಾನ ವರ್ಗಾವಣೆ ಆಗಬೇಕು. ಇಲ್ಲಿ ಜ್ಞಾನ ಎಂದರೇನು ಮತ್ತು ಅದರ ಸೃಷ್ಟಿ ಹೇಗಾಗುತ್ತದೆ ಎನ್ನುವ ಎರಡು ಪ್ರಮುಖ ಪ್ರಶ್ನೆಗಳಿವೆ. ಸತ್ಯ ಎಂದು ಸಾಧಿಸಿ ತೋರಿಸಬಹುದಾದ ನಂಬಿಕೆಯನ್ನು ಜ್ಞಾನ ಎನ್ನಬಹುದು. ದಿನನಿತ್ಯದ ಬದುಕಿನಲ್ಲಿ ಸಾಮಾನ್ಯವಾಗಿ ಯಾವುದನ್ನು ನಾವು ಸತ್ಯವೆಂದು ನಂಬುತ್ತೇವೆ? ಬರುತ್ತೇನೆಂದು ಬಂದಾಗ, ಮಾಡುತ್ತೇನೆಂದು ಮಾಡಿದಾಗ, ಆಗುವುದಿಲ್ಲ ಎನ್ನುವುದು ಆಗದಿರುವಾಗ, ಆಗುತ್ತದೆ ಎನ್ನುವುದನ್ನು ಆಗುಮಾಡಿದಾಗ ನಂಬಿಕೆ ಸೃಷ್ಟಿ ಆಗುತ್ತದೆ. ಅಂದರೆ ಮಾತು ಮತ್ತು ಕೃತಿ ನಡುವೆ ಸಂಬಂಧ ಏರ್ಪಟ್ಟಾಗ ನಂಬಿಕೆ ಸೃಷ್ಟಿ ಆಗುತ್ತದೆ. ವ್ಯಕ್ತಿಯೊಬ್ಬರಿಗೆ ನಿರ್ದಿಷ್ಟ ಮಾರ್ಗದಲ್ಲಿ ಸತ್ಯದರ್ಶನ ಆಗಿದೆ ಎನ್ನುವುದನ್ನು ಮತ್ತೊಬ್ಬರು ನಂಬಬೇಕಾದರೆ ಅವರಿಗೂ ಅದೇ ಮಾರ್ಗದಲ್ಲಿ ಸತ್ಯದರ್ಶನ ಆದಾಗ ಸತ್ಯದ ನಂಬಿಕೆ ಸೃಷ್ಟಿ ಆಗುತ್ತದೆ. ಇಲ್ಲಿ ಸತ್ಯದ ಪ್ರತಿಪಾದನೆಯನ್ನು ಪ್ರಶ್ನಿಸುವುದು, ಪರೀಕ್ಷಿಸಿ, ಪ್ರಯೋಗಿಸಿ ತಮಗೂ ಸತ್ಯದರ್ಶನ ಆದ ನಂತರ ಸತ್ಯದ ನಂಬಿಕೆ ಸೃಷ್ಟಿ ಆಗುವುದು ಮುಖ್ಯ. ಅಂದರೆ ಪ್ರಶ್ನೆ, ಪರೀಕ್ಷೆ, ಪ್ರಯೋಗ, ಪರಾಮರ್ಶೆಗಳು ಸತ್ಯದ ನಂಬಿಕೆ ಸೃಷ್ಟಿಯ ಆಧಾರಸ್ತಂಭಗಳು.

ಪರೀಕ್ಷೆ, ಪ್ರಯೋಗ, ಪರಾಮರ್ಶೆ ಇವೆಲ್ಲವೂ ಆರಂಭವಾಗುವುದು ಪ್ರಶ್ನೆಯಿಂದ. ಪ್ರಶ್ನೆ ಏಕೆ ಹುಟ್ಟುತ್ತದೆ? ವ್ಯಕ್ತಿಯ ಒಳಗಿನ ಅಥವಾ ಹೊರಗಿನ ಸ್ಥಿತಿಗೆ ಅಥವಾ ಬೆಳವಣಿಗೆಗೆ ಈಗಾಗಲೇ ಇರುವ ವಿವರಣೆ ಸಮಾಧಾನ ತರದಿದ್ದರೆ ಪ್ರಶ್ನೆ ಹುಟ್ಟುತ್ತದೆ. ಈಗಾಗಲೇ ಇರುವ ವಿವರಣೆಗಿಂತ ಭಿನ್ನವಾದ ವ್ಯಕ್ತಿಯ ಸ್ವತಂತ್ರ ಆಲೋಚನೆ ಅಸಮಾಧಾನಕ್ಕೆ ಕಾರಣವಾಗುತ್ತದೆ. ಹೀಗೆ ಸ್ವತಂತ್ರ ಆಲೋಚನೆ ಪ್ರಶ್ನೆಯ ಬುನಾದಿ.


ವ್ಯಕ್ತಿ ಸ್ವಾತಂತ್ರ್ಯವುಳ್ಳ ಪರಿಸರದಲ್ಲಿ ಸ್ವತಂತ್ರ ಆಲೋಚನೆ ಬೆಳೆದಷ್ಟು ವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸುವ ಪರಿಸರದಲ್ಲಿ ಬೆಳೆಯಲು ಸಾಧ್ಯವಿಲ್ಲ. ಇದೇ ರೀತಿಯಲ್ಲಿ ಮನಸ್ಸಲ್ಲಿರುವ ಪ್ರಶ್ನೆ ಸಾರ್ವಜನಿಕಗೊಳ್ಳಬೇಕಾದರೆ (ಹೊರಗೆ ಪ್ರಕಟವಾಗಬೇಕಾದರೆ) ಪರಿಣಾಮದ ಬಗ್ಗೆ ಚಿಂತೆ ಇರಬಾರದು. ಅಂದರೆ ಪ್ರಶ್ನೆಯ ಪರಿಣಾಮ ಏನೇ ಆದರೂ (ಸಕಾರಾತ್ಮಕ ಅಥವಾ ನಕಾರಾತ್ಮಕ) ಅದು ವ್ಯಕ್ತಿಯ ಅಸ್ತಿತ್ವವನ್ನು ಅಲುಗಾಡಿಸುವುದಿಲ್ಲ ಎನ್ನುವ ಆತ್ಮವಿಶ್ವಾಸ ಇದ್ದಾಗ ಪ್ರಶ್ನೆ ಸಾರ್ವಜನಿಕಗೊಳ್ಳುತ್ತದೆ. ಸಮಾನತೆಯ ಪ್ರಜ್ಞೆ ಮಾತ್ರ ಇಂತಹ ಆತ್ಮ-ವಿಶ್ವಾಸವನ್ನು ಕೊಡಲು ಸಾಧ್ಯ. ಅಂದರೆ ಪರಿಸರದಲ್ಲಿ ಸಮಾನತೆ ಇದ್ದಾಗ ಪ್ರಶ್ನೆಗಳು ಸಾರ್ವಜನಿಕಗೊಳ್ಳುತ್ತವೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನತೆಗಳು ಕಾನೂನಿನಿಂದಲೇ ಆಚರಣೆಗೆ ಬರುವ ಸಂಗತಿಗಳಲ್ಲ. ಇವನ್ನು ಪೋಷಿಸಿ ಬೆಳೆಸುವ ಸಾಂಸ್ಕೃತಿಕ ಪರಿಸರದ ಅಥವಾ ಭ್ರಾತೃತ್ವದ ಅವಶ್ಯಕತೆ ಇದೆ.

ಇವೆಲ್ಲದರ ಹಿನ್ನೆಲೆಯಲ್ಲಿ ತೀರ್ಮಾನಿಸುವುದಾದರೆ ಶಿಕ್ಷಣದ ಉದ್ದೇಶ ಈಡೇರಬೇಕಾದರೆ– ಒಂದು, ಶಿಕ್ಷಣದ ಉದ್ದೇಶ 'ಜ್ಞಾನ ಸೃಷ್ಟಿ ಮತ್ತು ಜ್ಞಾನ ವರ್ಗಾವಣೆ' ಆಗಬೇಕು ಮತ್ತು ಎರಡು, ಹೊರಗಿನ 'ಪರಿಸರದಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳು ಜೀವಂತ' ಇರಬೇಕು. ಆದರೆ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ- ಈ ಮೂರು ಮೌಲ್ಯಗಳನ್ನು ಅಲ್ಲಗಳೆಯುವ ಶಕ್ತಿಗಳು ಸಮಾಜದಲ್ಲಿ ಕಾರುಬಾರು ಮಾಡುತ್ತಿವೆ. ಅಧಿಕಾರದಲ್ಲಿರುವವರು (ಹಿರಿತನದ, ಸಾಂಸ್ಕೃತಿಕ ಅಧಿಕಾರಗಳನ್ನು ಸೇರಿಸಿಕೊಂಡು) ಹೇಳಿದ್ದಾರೆನ್ನುವ ಕಾರಣಕ್ಕೆ ಸತ್ಯ ಎಂದು ನಂಬುವ, ಪರಂಪರೆಯಿಂದ ಬಂದಿದೆ ಅಥವಾ ಶತಮಾನಗಳಿಂದ ಇದೆ ಅಥವಾ ವೇದ, ಉಪನಿಷತ್‌ಗಳಲ್ಲಿ, ರಾಮಾಯಣ, ಮಹಾಭಾರತದಲ್ಲಿದೆ ಅಥವಾ ಕುರಾನ್, ಬೈಬಲ್‌ನಲ್ಲಿದೆ ಎನ್ನುವ ಕಾರಣಕ್ಕೆ ಸತ್ಯ ಎಂದು ನಂಬುವ ಮತ್ತು ಬಹುತೇಕರು ನಂಬಿದ್ದಾರೆ ಎನ್ನುವ ಕಾರಣಕ್ಕೆ ಸತ್ಯ ಎಂದು ನಂಬುವ ಪರಿಸರ ಇದೆ. ಬಹುತೇಕರ ನಂಬಿಕೆಯ ನೆಲೆಯಲ್ಲಿ ಸತ್ಯ ತೀರ್ಮಾನ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಕೋರ್ಟ್ ಕೂಡ ಸಾಕ್ಷ್ಯ, ಪುರಾವೆಗಳನ್ನು ಅಲ್ಲಗಳೆದು ಬಹುತೇಕರ ನಂಬಿಕೆ ನೆಲೆಯಲ್ಲಿ ಸತ್ಯ ತೀರ್ಮಾನ ಮಾಡುವ ಮಟ್ಟಕ್ಕೆ ಹೋಗಿದೆ. ಹಾಗೆಂದು ಇಲ್ಲೆಲ್ಲ ಸತ್ಯ ಇಲ್ಲ ಎನ್ನುವ ವಾದ ನನ್ನದಲ್ಲ. ಆದರೆ ಇವುಗಳಲ್ಲಿರುವ ಸತ್ಯವನ್ನು ಪ್ರಶ್ನಿಸುವ, ಪರೀಕ್ಷಿಸುವ, ಪರಾಮರ್ಶಿಸುವ ಪರಿಸರ ಇಲ್ಲ ಎನ್ನುವ ವಾದ ನನ್ನದು.

ಈ ಬಗೆಯ ಸತ್ಯದ ನಂಬಿಕೆಗಳನ್ನು ಪ್ರಶ್ನಿಸುವ, ಪರಾಮರ್ಶಿಸುವ ಕೆಲಸ ಶಿಕ್ಷಣ ಕ್ಷೇತ್ರದ ಶಕ್ತಿಗೆ ಮೀರಿದ್ದು. ಶಿಕ್ಷಣ ಕ್ಷೇತ್ರದಲ್ಲಿ ನಡೆಯಬೇಕೆಂದು ಬಯಸುವ ಪ್ರಶ್ನೆ, ಪರಾಮರ್ಶೆಗಳು ಹೊರಗಿನ ಎಲ್ಲ ಕ್ಷೇತ್ರಗಳಲ್ಲೂ ನಡೆಯಬೇಕಾಗಿದೆ. ಹಾಗಾದರೆ ಮಾತ್ರ ಶಿಕ್ಷಣ ಸೃಷ್ಟಿಸುವ ಸಾಮರ್ಥ್ಯಗಳನ್ನು ಬಳಸುವ ಪರಿಸರ ಸೃಷ್ಟಿ ಆಗಲು ಸಾಧ್ಯ. ಇವೆಲ್ಲ ಘಟಿಸಿದರೆ ಮಾತ್ರ ತಳಸ್ತರವನ್ನು ಪ್ರೀತಿಯಿಂದ ಕಾಣುವ ಮತ್ತು ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ರೂಪಿಸಲು ಸಾಧ್ಯ.



ಚುರುಮುರಿ



ಪ್ರಜಾಸದರ

• ಲಿಂಗರಾಜು ಡಿ.ಎಸ್.

ದಸರಾ ನೋಡಮು ಅಂತ ಬಂದೋರು ಮೈಸೂರುಪಾಕು ತಿಂದು ದೊಡ್ಡಗಡಿಯಾರದ ಮುಂದೆ ಚಟ್ಟೆಕ್ಕಾರನ ಥರಾ ಓಡಾಡ್ತಿದ್ದೋ. ಅಂಬಾರಿ ಹೊರೋ ಆನೆ ನೋಡಿ, ಎಂಥಾ ಅದೃಷ್ಟವಂತ ಪ್ರಾಣಿಗಳು ಇವು ಅನ್ನಿಸಿ ತುರೇಮಣೆಗೆ ಹೇಳಿದೆ.

'ಆನೆ ನೋಡ್ತಿದ್ರೆ ನಿನ್ನೇ ನೋಡ್ದಂಗಾಯ್ತದೆ ಕನೋ ಅಣ್ತಮ್ಮ!' ಯಂಟಪ್ಪಣ್ಣ ಹಕ್ಲಾಸ ಮಾಡಿತು.

'ಕುರಿತೇಟಾಗೇಳಿದ್ರಿ ಯಂಟಪ್ಪಣ್ಣ. ವ್ಯವಸ್ಥೆ ನಮ್ಮನ್ನ ದಸರಾ ಆನೆ ಮಾಡಿ ಹಿಂದ್ಕೆ ಮುಂದ್ಕೆ ಗುನ್ನಂಪಟ್ಟೆ ಕಟ್ಟಿ 'ನೋಡು ಹ್ಯಂಗದೆ!' ಅಂತ ಮಾಲೀಸು ಮಾಡಿ ಅಂಬಾರಿ ಹೊರಿಸಿ ದಿಬ್ಬಣ ಹೊಂಡುಸ್ತದೆ! ಎಲ್ಲೂ ನಿಲ್ಲಂಗುಲ್ಲ, ಕೂರಂಗುಲ್ಲ ಸರ್ಕಾರ ತಿವೀತ್ಲೇ ಇರತದೆ. ತೆರಿಗೆ ಕೊಡೋದು ಜನರ ಕರ್ತವ್ಯ, ಸಾಧನೆ ಮಾತ್ರ ಸರ್ಕಾರದ್ದು ಅಂತ ತೋರಿಸೋ ಸ್ತಬ್ಧಚಿತ್ರಗಳು ಇರತವೆ. ರಾಜಕಾರಣಿಗಳು ಮಾಡ ಕ್ಯಾಮೆ ಬುಟ್ಟು ಊರೊಟ್ಟಿನ ದುಡ್ಡು ಎಪ್ಸ್ ಮಾಡೋ ಮಾಮಾಚಾರಿಗಳ ಜೊತೆ ಸೇರಿಕ್ಯಂದು ತರಂಥರ ವಾದ್ಯ ಊದಿಕ್ಯಂದು ನಮ್ಮ ಸುತ್ತ ವಾದ್ಯಗೋಷ್ಠಿ ಮಾಡ್ತಾ ಇರತರೆ. ಇಕ್ಕಡೆ ಸೋ-ಶೋ ಪಾಲುದಾರಿಕೆ ಕ್ಯಾಕೆ, ಅಕ್ಕಡೆ ಡಿಕೆಶಿ-ಕುಮಾರಣ್ಣ ಕುಶಾಲು, ಹುಲಿಯಾ-ಅರಗ ಸಲ್ಲಾಪ ನಡೀತಿರ್ತದೆ! ನಾವು ಇದೇ ಸ್ವರ್ಗ ಅಂದ್ಕಂಡು ಕಣ್ಮುಚ್ಕಂದಿರತೀವಿ! ಈತರಕೀತರ ದಸರಾ ಈಗ ಪ್ರಜಾಸದರ ಆಗೋಗ್ಯದೆ!' ದಸರಾ ವಿವರಣೆ ಕೊಟ್ಟರು ತುರೇಮಣೆ.

'ಮೈಸೂರು ಮಾರಾಜರು ಅವುರ ಮನೆ ಒಡವೆ, ದುಡ್ಡು ಕೊಟ್ಟು ಕೆಆರೆಸ್ ಕಟ್ಟಿದರಂತೆ. ಈಗಿನವು ದಿಮ್ಮಲೆ ರಂಗ ಅಂತ ಸರ್ಕಾರದ ದುಡ್ಡು ಲಪಟಾಯಿಸಿ ಸ್ವಂತಮನೆ ಕಟ್ಟಿಗ್ಯಂತವೆ!' ಯಂಟಪ್ಪಣ್ಣ ಎಕ್ಸ್‌ಪರ್ಟ್ ಕಾಮೆಂಟ್ ಕೊಟ್ಟಿತು.

'ಅಣೈ, ಅಕ್ರಮ ಕಾಮಗಾರಿ ಬೇರು ಎಲ್ಲೆಲ್ಲೋಗ್ಯದೋ! ಸಿಗೇ ಬಿದ್ದಿರ ವಾಟ್ಸಪ್ ಬಿಲ್ಡಾರರಿಗೆ ಆದಾಯ ತೆರಿಗೆ ಒಳೇಟು ಕೊಟ್ಟು ಜಲ-ಮಲ ಬಂದ್ ಮಾಡ್ಯದಂತೆ! ಮೋದಿ ಚಿಗಪ್ಪ ಇದರಲ್ಲಿ ಕೈಕಟ್-ಬಾಯ್ಮುಚ್ ರಾಜಕೀಯ ಮಾಡದೇ ಅಪಾಪೋಲಿಗಳ ತೆಂಡೆ ಕಿತ್ತಾಕ್ಬೇಕು!' ಅಚ್ಛೇ ದಿನ್ ಅಬ್ಬರದಲ್ಲಿ ನನ್ನ ಮಾತು ಯಾರಿಗೂ ಕೇಳಿಸಲಿಲ್ಲ.

ಸಂಗತ

ಮೋದಿ ಮೌನ ಮತ್ತು ಮಾನವೀಯತೆ!

ಲಖಿಂಪುರ– ಖೇರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಪ್ರಮುಖರ ಹೇಳಿಕೆಗಳು ವ್ಯಕ್ತಿ ಸ್ವಾತಂತ್ರ್ಯ ಹಾಗೂ ಶಾಂತಿಯುತ ಪ್ರತಿಭಟನೆಯ ಹಕ್ಕಿನ ನಿರ್ಭೀತ ಉಲ್ಲಂಘನೆಯಾಗಿವೆ

• ಪ್ರೊ. ಬಿ.ಕೆ.ಚಂದ್ರಶೇಖರ್

ಉತ್ತರಪ್ರದೇಶದ ಲಖಿಂಪುರ- ಖೇರಿ ಜಿಲ್ಲೆಯಲ್ಲಿ ಇದೇ 3ರಂದು ಸಂಜೆ, ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸಿ ಹಿಂದಿರುಗುತ್ತಿದ್ದ ರೈತರ ಮೇಲೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರಿಗೆ ಸೇರಿದ ವಾಹನ ಹಾಯ್ದು ನಾಲ್ವರು ರೈತರು ಮೃತಪಟ್ಟಿದ್ದು ದೇಶದಾದ್ಯಂತ ತೀವ್ರ ಟೀಕೆಗೆ ಒಳಗಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಬಿಜೆಪಿಯ ಕೆಲವು ಪ್ರಮುಖ ನಾಯಕರ ಹೇಳಿಕೆಗಳು, ನಮ್ಮ ಸಂವಿಧಾನವು ಪ್ರಜೆಗಳಿಗೆ ನೀಡಿರುವ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಶಾಂತಿಯುತ ಪ್ರತಿಭಟನೆಯ ಹಕ್ಕಿನ ನಿರ್ಭೀತ ಉಲ್ಲಂಘನೆಯಾಗಿವೆ.

ಯಾವುದೇ ವ್ಯಕ್ತಿಯನ್ನು ಬಂಧಿಸುವಾಗ ಕಾನೂನಿನ ಪ್ರಕಾರ ಅನುಸರಿಸಬೇಕಾದ ಪ್ರಕ್ರಿಯೆಗೆ ವಿರುದ್ಧವಾಗಿ ಪ್ರಿಯಾಂಕಾ ಗಾಂಧಿ ಅವರನ್ನು ಬಂಧಿಸಿದರು. ಬಂಧಿಸಿ 24 ಗಂಟೆಗಳು ಕಳೆದರೂ ಅವರನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಿಲ್ಲ ಹಾಗೂ ಅಧಿಕೃತವಾದ ಪೊಲೀಸ್ ಠಾಣೆಯಲ್ಲಿ ಇರಿಸದೆ ಖಾಸಗಿ ಕಟ್ಟಡದಲ್ಲಿ ಇರಿಸಿದ್ದರು. ಅವರಿಗೆ ವಕೀಲರನ್ನು ಸಂಪರ್ಕಿಸುವ, ತಮ್ಮ ಕುಟುಂಬದವರೊಡನೆ ದೂರವಾಣಿಯಲ್ಲಿ ಮಾತನಾಡುವ ಅವಕಾಶವನ್ನೂ ನಿರಾಕರಿಸಲಾಯಿತು. ವಿರೋಧ ಪಕ್ಷಗಳ ಧುರೀಣರು ಸ್ಥಳಕ್ಕೆ ಭೇಟಿ ನೀಡಿ ರೈತ ಕುಟುಂಬಗಳಿಗೆ ಸಾಂತ್ವನ ಹೇಳಲು ಆ ಸಂದರ್ಭದಲ್ಲಿ ಅವಕಾಶ ಕೊಡಲಿಲ್ಲ. ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಬಹಿರಂಗ ಸಭೆಗಳನ್ನು ನಡೆಸುವಂತಿಲ್ಲ ಎಂಬ ಷರತ್ತಿನೊಡನೆ ಅವಕಾಶ ಕಲ್ಪಿಸಬಹುದಿತ್ತು ಅಲ್ಲವೇ?

ಖೇರಿ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅಜಯ್ ಮಿಶ್ರಾ ಅವರಿಗೆ ನರೇಂದ್ರ ಮೋದಿ ಅವರು ಸಂಪುಟದಲ್ಲಿ ಸ್ಥಾನ ಕಲ್ಪಿಸಿ, ಹೇಳಿಕೇಳಿ 'ಕಾನೂನು ಸುವ್ಯವಸ್ಥೆ' ನೋಡಿಕೊಳ್ಳುವ ಗೃಹ ಖಾತೆಯ ರಾಜ್ಯ ಸಚಿವರ ಹೊಣೆ ವಹಿಸಿದ್ದಾರೆ! ಹತ್ಯಾಕಾಂಡ ನಡೆದ ಮಾರನೆಯ ದಿನವೇ ಅವರು 'ನನ್ನ ಮಗ ಆ ಸ್ಥಳದಲ್ಲಿ ಇರಲಿಲ್ಲ. ಒಂದು ವೇಳೆ ಇದ್ದಿದ್ದರೆ ಆತನನ್ನು ಕೊಂದು-ಹಾಕುತ್ತಿದ್ದರು' ಎಂಬ ಅಚ್ಚರಿಯ ಹೇಳಿಕೆ ಕೊಟ್ಟರು! ಪ್ರತ್ಯಕ್ಷದರ್ಶಿಗಳು ಹೇಳಿದ್ದೇ ಬೇರೆ. ಘಟನೆ ನಡೆದ ಸಮಯದಲ್ಲಿ ಮಿಶ್ರಾ ಅವರ ಮಗ ಆಶಿಷ್ ಅಲ್ಲಿದ್ದರು ಎಂಬುದನ್ನು ಈಗ ಪೊಲೀಸರೇ ಖಚಿತಪಡಿಸಿದ್ದಾರೆ. ಆಶಿಷ್ ಹೆಸರನ್ನು ತಡವಾಗಿ ಎಫ್‌ಐಆರ್‌ನಲ್ಲಿ ಸೇರಿಸಿದ್ದೇಕೆ?

ಸಚಿವ ಮಿಶ್ರಾ ಅವರು ರೈತರಿಗೆ ಎಚ್ಚರಿಕೆ ಕೊಡಲು ಹೇಳಿದ್ದ ಮಾತುಗಳನ್ನು ನೋಡಿ: 'ನನ್ನ ನಿಜವಾದ ತಾಕತ್ತು ತೋರಿದರೆ ಈ ರೈತರು ಗ್ರಾಮ ಬಿಡಿ, ಜಿಲ್ಲೆಯನ್ನೇ ಬಿಟ್ಟು ಓಡಬೇಕಾಗುತ್ತದೆ. ನನ್ನ ವಿರುದ್ಧ ಕಪ್ಪುಬಾವುಟ ಎತ್ತಿ ಹಿಡಿದರೆ ಪರಿಣಾಮ ನೆಟ್ಟಗಿರುವುದಿಲ್ಲ'. ಸಂವಿಧಾನ, ಪ್ರಮಾಣವಚನ, ಶಿಷ್ಟಾಚಾರದ ನಡವಳಿಕೆ ಎಲ್ಲವೂ ಕಸದ ಬುಟ್ಟಿ ಸೇರಿದವೇ? ಇಂತಹವರು ನಮ್ಮೆಲ್ಲರ ಕೇಂದ್ರ ಸಚಿವರು!

ಬಿಜೆಪಿಯ ಮತ್ತೊಬ್ಬ ನಾಯಕ, ಹರಿಯಾಣದ ಮುಖ್ಯಮಂತ್ರಿ ಮನೋಹರಲಾಲ್ ಕಟ್ಟರ್ ಅವರು ಕಾರ್ಯಕ್ರಮವೊಂದರಲ್ಲಿ ಪಕ್ಷದ ಕಾರ್ಯಕರ್ತರಿಗೆ ಕೊಟ್ಟ ಅಪ್ಪಣೆ ಹೀಗಿದೆ: 'ಸ್ವಯಂಸೇವಕರ ತಂಡಗಳನ್ನು ರಚಿಸಿಕೊಳ್ಳಿ, ಈ ತಂಡಗಳು ದೊಣ್ಣೆಗಳನ್ನು ಕೈಗೆತ್ತಿಕೊಂಡು, ಪ್ರತಿಭಟನಾನಿರತ ರೈತರ ಏಟಿಗೆ ಎದಿರೇಟು ನೀಡಬೇಕು'.

ಇದರಿಂದ ಸಂವಿಧಾನದ ಆಶಯಗಳನ್ನು ಧಿಕ್ಕರಿಸಿದಂತೆ ಆಗುವುದಿಲ್ಲವೇ? ಅಷ್ಟೇ ಮುಖ್ಯವಾಗಿ, ಹಿಂಸಾಚಾರಕ್ಕೆ- ಶ್ರೀರಕ್ಷೆಯ ಭರವಸೆಯೊಡನೆ- ಮುಖ್ಯಮಂತ್ರಿಯೇ ಪ್ರಚೋದಿಸಿದಂತೆ ಆಗಲಿಲ್ಲವೇ? ಹರಿಯಾಣ, ದೆಹಲಿ, ಉತ್ತರಪ್ರದೇಶದ ಪೊಲೀಸರ ಜೊತೆಗೆ ರಾಜಕೀಯ ಪಕ್ಷದ ಇಂತಹ ಒಂದು ಸಶಸ್ತ್ರ ಕಾರ್ಯಕರ್ತರ ಪಡೆಯೂ ಬೇಕೆ?



ಎಂಟು ಜನ ಜೀವ ಕಳೆದುಕೊಂಡ ಈ ಕ್ರೂರ ಕೃತ್ಯದಿಂದ ಪ್ರಧಾನಿಯೂ ಒಳಗೊಂಡಂತೆ ಯಾರೊಬ್ಬ ಬಿಜೆಪಿ ನಾಯಕರಿಗೂ ತಲ್ಲಣವಾಗಲಿಲ್ಲ (ವರುಣ್ ಗಾಂಧಿಯವರನ್ನು ಹೊರತುಪಡಿಸಿ! ಅದರ ಪರಿಣಾಮವನ್ನು ಅವರು, ಅವರ ತಾಯಿ ಈಗಾಗಲೇ ಅನುಭವಿಸುತ್ತಿದ್ದಾರೆ!). ದೆಹಲಿಯಿಂದ ಲಖನೌಗೆ ಬಂದು ಚುನಾವಣೆಯ ಹಿನ್ನೆಲೆಯಲ್ಲಿ 75 ಹೊಸ ಯೋಜನೆಗಳನ್ನು ಉದ್ಘಾಟಿಸಿದ ಪ್ರಧಾನಿಗೆ, ಸಮೀಪದ ಲಖಿಂಪುರ- ಖೇರಿಗೆ ಭೇಟಿ ಕೊಡುವುದು ಅಗತ್ಯವೆನಿಸಲಿಲ್ಲ. 'ಆಜಾದಿ 75: ನಯಾ ಭಾರತ್ ಕಾ ನಯಾ ಉತ್ತರಪ್ರದೇಶ್' ಸಭೆಯಲ್ಲೂ ರೈತರ ಭೀಕರ ಹತ್ಯೆ ಕುರಿತು ಒಂದೇ ಒಂದು ಮಾತು ಅವರಿಂದ ಬರಲಿಲ್ಲ. ಮೋದಿಯವರ ಮೌನವನ್ನು ಅರ್ಥೈಸುವು-ದಾದರೂ ಹೇಗೆ? ಇದು ಕೇವಲ ರಾಜನೀತಿಯ ಪ್ರಶ್ನೆ ಅಲ್ಲ, ಮಾನವೀಯತೆಯ ಪ್ರಶ್ನೆ. ಅವರ ಮೌನ ಕಿವಿ ಒಡೆಯುವಂತೆ ಶಬ್ದ ಮಾಡಿದೆ!

2012ರಲ್ಲಿ ತಾವು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ, 'ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು 'ಮೌನ್' ಮೋಹನ್ ಸಿಂಗ್ ಎಂದು ಕರೆಯುವುದು ಹೆಚ್ಚು ಸೂಕ್ತ, ಏಕೆಂದರೆ ಅವರು ಯಾವ ವಿಷಯದ ಕುರಿತೂ ಬಾಯೇ ಬಿಡುವುದಿಲ್ಲ' ಎಂದು ಹಂಗಿಸಿದವರು ಇದೇ ಮೌನಮೂರ್ತಿ ಮೋದಿಯವರಲ್ಲವೇ! ಇದೇ ಸಂದರ್ಭದಲ್ಲಿ ಅವರು ಹೇಳಿದ ಮತ್ತೊಂದು ಮಾತು: 'ಕೇಂದ್ರದಲ್ಲಿರುವ ಯುಪಿಎ ಸರ್ಕಾರವು ತನ್ನ ರಾಜಕೀಯ ಎದುರಾಳಿಗಳನ್ನು ಮಣಿಸಲು ಸಿಬಿಐ ಅನ್ನು ಬಳಸುತ್ತಿದೆ!' ಆದರೆ, ಸಿಬಿಐ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆಯಂತಹ ಶಾಸನಬದ್ಧ ಸ್ವತಂತ್ರ ಸಂಸ್ಥೆಗಳು ಹಿಂದೆಂದೂ ಇಲ್ಲದ ರೀತಿಯಲ್ಲಿ ರಾಜಕೀಯ ವಿರೋಧಿಗಳನ್ನು ಬಗ್ಗುಬಡಿಯುವ ಅಸ್ತ್ರಗಳಾಗಿ ಈಗ ಬಳಕೆಯಾಗುತ್ತಿವೆ. ಎಂತಹ ವಿಪರ್ಯಾಸ!

ಲೇಖಕ: ಕೆಪಿಸಿಸಿ ವಕ್ತಾರ

ವಾಚಕರ ವಾಣಿ

ದೋಷ ಸರಿಪಡಿಸಲು ಹಲ್ಲೆ ಪರಿಹಾರವೇ?

'ಪಠ್ಯಪುಸ್ತಕಗಳಲ್ಲಿನ ದೋಷಗಳನ್ನು ಸಾರ್ವಜನಿಕರು ಗಂಭೀರವಾಗಿ ಗಮನಿಸಿದ್ದರೆ ಸಂಬಂಧಿಸಿದವರ ಮೇಲೆ ಹಲ್ಲೆ ನಡೆಸುತ್ತಿದ್ದರು' ಎಂದು ಶಿಕ್ಷಣ ಸಚಿವರು ಪ್ರಚೋದನಾತ್ಮಕ ಹೇಳಿಕೆ ನೀಡಿದ್ದಾರೆ. ಆದರೆ ಅವರು ಪಠ್ಯಪುಸ್ತಕಗಳ ಯಾವ ಭಾಗಗಳಲ್ಲಿ ಅಂತಹ ದೋಷಗಳಿವೆ ಎಂಬುದನ್ನು ತಿಳಿಸಿಲ್ಲ. ಸಚಿವರ ಪ್ರಕಾರ, ದೋಷಗಳನ್ನು ಸರಿಪಡಿಸಲು 'ಹಲ್ಲೆ' ಪರಿಹಾರ ಎಂಬಂತಾಗಿದೆ.

ಕಳೆದ 18 ತಿಂಗಳುಗಳಿಂದ ಗ್ರಾಮೀಣ ಪ್ರದೇಶದ 1ರಿಂದ 10ನೇ ತರಗತಿಯ ಮಕ್ಕಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸುಮಾರು 25 ಲಕ್ಷ ಮಕ್ಕಳು ಆನ್‌ಲೈನ್ ಪಾಠಕ್ಕೆ ನೆಟ್‌ವರ್ಕ್ ಸಿಗದೆ ವಂಚಿತರಾಗಿದ್ದಾರೆ. ಇದುವರೆಗೆ ಈ ಸಮಸ್ಯೆಯ ಬಗ್ಗೆ ಸರ್ಕಾರ ಚಕಾರವೆತ್ತಿಲ್ಲ. ಇಲ್ಲಿನ ವಿಶೇಷವನ್ನು ಗಮನಿಸಬೇಕು. ಕಳೆದ 20-25 ತಿಂಗಳುಗಳಿಂದ ಪಠ್ಯಪುಸ್ತಕಗಳ ಬಗ್ಗೆ ವಿವಾದ ಹುಟ್ಟುಹಾಕುತ್ತಿರುವವರಲ್ಲಿ ಹೆಚ್ಚಿನವರು ಚಾತುರ್ವರ್ಣೀಯರಾಗಿದ್ದಾರೆ, ಏಕೆ?

ಟಿ.ಆರ್.ಚಂದ್ರಶೇಖರ, ಬೆಂಗಳೂರು

ನಿಶ್ಶಕ್ತರಿಗೆ ಕಹಿ ಗುಳಿಗೆ ಅಪಥ್ಯ...

'ಕಾಂಗ್ರೆಸ್: ನಿಶ್ಶಕ್ತಿ ನಿವಾರಣೆಗೆ ಬೇಕಿದೆ ಕಹಿ ಗುಳಿಗೆ' ಸಂಪಾದಕೀಯ (ಪ್ರ.ವಾ., ಅ. 11) ಹಾಗೂ 'ರಾಷ್ಟ್ರ ರಾಜಕಾರಣಕ್ಕೆ ಸಿದ್ದರಾಮಯ್ಯ ನಿರಾಕರಣೆ' ಎಂಬ ಸುದ್ದಿ ಇಂದಿನ ಸನ್ನಿವೇಶಕ್ಕೆ ಪ್ರಸ್ತುತವಾಗಿವೆ. ದುರಂತವೆಂದರೆ, ಪಕ್ಷದಲ್ಲಿನ ಹಿರಿಯ ನಿಷ್ಠ ದಿಗ್ಗಜರು (23 ಮಂದಿ) ಪಕ್ಷವನ್ನು ಬಲಿಷ್ಠವಾಗಿಸಲು 'ಪಕ್ಷದ ಸಭೆ ಕರೆಯಿರಿ, ಚರ್ಚೆ ಮಾಡೋಣ' ಎಂದುದಕ್ಕೂ ಸಿದ್ಧರಾಗದ ಪಕ್ಷದ ತ್ರಿಮೂರ್ತಿಗಳು ಕಹಿ ಗುಳಿಗೆ ಸೇವಿಸುತ್ತಾರೆಯೇ? ಬದಲಾದ ಸನ್ನಿವೇಶದಲ್ಲಿ, ಅಧಿಕಾರ ವಿಕೇಂದ್ರೀಕರಣವಾಗದೆ 'ಚಪ್ಪಾಳೆ ತಟ್ಟುವವರಿಗೆ ಮಾತ್ರ ಅವಕಾಶ' ಎಂಬಂತಾಗಿದೆ. ಅಂದರೆ, ಒಂದು ಶಾಲೆಯ ಪ್ರಾಧ್ಯಾಪಕನ ಸ್ಥಾನಕ್ಕೆ, ಹಿರಿಯ ನುರಿತ ಅಧ್ಯಾಪಕರ ಬದಲು, ನಿವೃತ್ತ ಪ್ರಾಧ್ಯಾಪಕನ ಪುತ್ರನಿಗೇ ಪಟ್ಟ ಮೀಸಲು ಇಡುವಂತಾದರೆ, ಶಾಲೆ, ಮಕ್ಕಳು, ಶಿಕ್ಷಣದ ಗತಿ ಅಧೋಗತಿಗೆ ಹೋದಂತೆ ಆಗಿದೆ ಕಾಂಗ್ರೆಸ್ಸಿನ ಪರಿಸ್ಥಿತಿ. ಹಿಂದೆ, ಕಾಂಗ್ರೆಸ್‌ನಲ್ಲಿ ವಂಶಪಾರಂಪರ್ಯಕ್ಕೆ ತೂಕವಿದ್ದದ್ದು ದಿಗ್ಗಜರು, ಪಾಂಡಿತ್ಯ ಪಡೆದವರು, ಅರ್ಹತೆ ಇದ್ದವರು ಜನರ ಕಣ್ಮಣಿಗಳಾಗಿದ್ದಾಗ. ಈಗ, ಆಡಳಿತ ಪಕ್ಷವಾಗಿ ಬಿಜೆಪಿ ಬಲಿಷ್ಠವಾಗುತ್ತಲೇ ಹೋಗುತ್ತಿದ್ದರೂ ವಂಶಪಾರಂಪರ್ಯ ಆಡಳಿತ ನಡೆಸುತ್ತಿರುವವರು ಪಕ್ಷದ ಮೂಲಭೂತ ನಂಬಿಕೆಯನ್ನೇ ಗ್ರಹಿಸದೆ, ಹಿರಿಯರ ಅಭಿಪ್ರಾಯಕ್ಕೂ ಮಣಿಯದಂತೆ ಇರುವುದು ಸರಿಯೇ?

ಬಿಜೆಪಿಯಲ್ಲಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಹಿಡಿತ ಸಾಧಿಸಿರುವುದಕ್ಕೆ ಕಾರಣ, ಅವರ ಹಿರಿತನ, ಚಾಣಾಕ್ಷತೆ, ಮಾತಿನ ವರಸೆ, ಹೋರಾಟದ ನಿಲುವು, ಪಕ್ಷವನ್ನು ಬೆಳೆಸಿ ಎಲ್ಲರಿಂದ ಮಾನ್ಯತೆ ಪಡೆಯುತ್ತಿರುವ ವಿಶೇಷತೆ. ಇದನ್ನು ಅರಿಯದೆ, ಪಕ್ಷವನ್ನು ಹಿಡಿತದಲ್ಲಿ ಇಟ್ಟುಕೊಂಡಿರುವ ತ್ರಿಮೂರ್ತಿಗಳು ಹಿರಿಯರನ್ನು ಕಡೆಗಣಿಸಿ, 'ನಮ್ಮನ್ನು ಬೆಂಬಲಿಸದಿದ್ದರೆ, ಪಕ್ಷದಿಂದ ಹೊರನಡೆಯಿರಿ' ಎಂಬಂತೆ ವರ್ತಿಸಿದರೆ ಪಕ್ಷ ಬೆಳೆಯುತ್ತದೆಯೇ? ಬೆಳಕಿನಲ್ಲೂ ಬಾವಿಗೆ ಬೀಳಲು ನಿಶ್ಚಯ ಮಾಡಿದವರನ್ನು ತಡೆಯುವುದಕ್ಕೆ ಆಗುವುದೇ?

ಪಿ.ಸಿ.ಕೇಶವ, ಬೆಂಗಳೂರು

ತಾಯಂದಿರಾಗದ್ದಕ್ಕೆ ನಾನಾ ಕಾರಣ

'ಆಧುನಿಕ ಮಹಿಳೆಯರು ಮಕ್ಕಳಿಗೆ ಜನ್ಮ ನೀಡಲು ಇಚ್ಛಿಸುತ್ತಿಲ್ಲ' ಎಂದು ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ಹೇಳಿದ್ದಾರೆ ಎಂದು ವರದಿಯಾಗಿದೆ (ಪ್ರ.ವಾ., ಅ. 11). ಒಬ್ಬ ವೈದ್ಯರೂ ಆಗಿರುವ ಅವರು ಈ ಬೀಸು ಹೇಳಿಕೆಯನ್ನು ನೀಡಿರುವುದು ಆಶ್ಚರ್ಯಕರ ಮತ್ತು ಆಘಾತಕಾರಿ. ಹಿಂದಿನ ಕಾಲದಲ್ಲಿ ಕುಟುಂಬದ ಬಲವಂತದಿಂದ ಮಹಿಳೆಯರು ಹತ್ತಾರು ಮಕ್ಕಳಿಗೆ ಜನ್ಮ ನೀಡಬೇಕಾದ ಒತ್ತಡಕ್ಕೆ ಒಳಗಾಗುತ್ತಿದ್ದರು. ಆದರೆ ಆಧುನಿಕ ಮಹಿಳೆಯರು ತಮಗೆ ಯಾವಾಗ ಮಗು ಬೇಕು, ಎಷ್ಟು ಮಕ್ಕಳು ಬೇಕು, ಅವುಗಳ ನಡುವೆ ಅಂತರ ಎಷ್ಟು ಇರಬೇಕು ಎಂಬುದನ್ನು ಸ್ವತಃ ನಿರ್ಧರಿಸಲಾರಂಭಿಸಿದ್ದಾರೆ. ಇದು ಗಂಡಾಳಿಕೆಯ ಪೂರ್ವಗ್ರಹ ಹೊಂದಿರುವವರಿಗೆ ಅಪಥ್ಯವೆನಿಸುತ್ತದೆ.

ಒಬ್ಬ ವೈದ್ಯಳಾಗಿದ್ದು, ದಶಕಗಳ ಕಾಲ ಸಾಮಾಜಿಕ ಕಾರ್ಯಕರ್ತೆಯೂ ಆಗಿ ಕೆಲಸ ಮಾಡುತ್ತಿರುವ ನನಗೆ ಇದಕ್ಕಿಂತ ಭಿನ್ನವಾದ ಅಭಿಪ್ರಾಯ ಇದೆ. ಅನಾರೋಗ್ಯದ ಕಾರಣಕ್ಕೆ ಮಕ್ಕಳಾಗದ ವಿವಾಹಿತ ಮಹಿಳೆಯರು ತಮಗೆ ಮಕ್ಕಳು ಬೇಕೆಂದು ಎಷ್ಟು ತೀವ್ರವಾದ ಆಕಾಂಕ್ಷೆಯನ್ನು ಹೊಂದಿರುತ್ತಾರೆ, ಅದಕ್ಕಾಗಿ ಎಂತಹ ಒತ್ತಡವನ್ನು ಅನುಭವಿಸುತ್ತಾರೆ ಎಂಬುದನ್ನು ಕಣ್ಣಾರೆ ಕಂಡಿದ್ದೇವೆ. ಹೇಗಾದರೂ ಒಂದು ಮಗುವನ್ನು ಪಡೆಯಬೇಕು ಎಂದು ಅವರು ಹಲವಾರು ರೀತಿಯ ದುಬಾರಿ ಸಂತಾನೋತ್ಪತ್ತಿ ಚಿಕಿತ್ಸೆಗೆ ಮೊರೆ ಹೋಗುತ್ತಾರೆ. ಕೃತಕ ಗರ್ಭಧಾರಣಾ ಕೇಂದ್ರಗಳು ನೂರಾರು ಸಂಖ್ಯೆಯಲ್ಲಿ ತಲೆ ಎತ್ತುತ್ತಿವೆ. ಇದೇ ಸಮಾಜದಲ್ಲಿ ಇರುವ ಸಾಮಾನ್ಯ ಪ್ರವೃತ್ತಿ. ಮಕ್ಕಳು ಬೇಡ ಎನ್ನುವವರು ವಿರಳಾತಿವಿರಳ. ಅಷ್ಟಕ್ಕೂ ಅದು ಅವರವರ ಆಯ್ಕೆ. ಅದರ ಹಿಂದಿನ ಕಾರಣಗಳು ಸಂಕೀರ್ಣ. ಅದರ ಒಟ್ಟಾರೆ ಪರಿಶೀಲನೆ ಮತ್ತು ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳದೆ ಆಧುನಿಕ ಮಹಿಳೆಯರ ಬಗ್ಗೆ, ಅವರ ಆಯ್ಕೆಯ ಹಕ್ಕಿನ ಬಗ್ಗೆ ತಪ್ಪು ಅಭಿಪ್ರಾಯ ಮೂಡುವಂತೆ ಮಾತನಾಡುವುದು ಸರಿಯಲ್ಲ.

ಇಷ್ಟಾಗಿ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸರ್ವೇಕ್ಷಣೆ 2 ಮತ್ತು 3 ಅನ್ನು ಹೋಲಿಸಿ ನೋಡಿದರೆ, ಸಂತಾನಹೀನತೆಯ ಪ್ರಮಾಣವು ಶೇ 3ರಿಂದ 2.5ಕ್ಕೆ ಇಳಿದಿರುವುದು ಕಂಡುಬರುತ್ತದೆ. ಮಕ್ಕಳಾಗದಿರುವುದಕ್ಕೆ ಪ್ರಮುಖ ಕಾರಣ ದೈಹಿಕ ಆರೋಗ್ಯದ ಸಮಸ್ಯೆಗಳು. ಉನ್ನತ ವ್ಯಾಸಂಗ ಮತ್ತು ಉದ್ಯೋಗದ ಬೇಟೆಯ ಕಾರಣದಿಂದ ತಡವಾಗಿ ಸಂತಾನದ ಪ್ರಯತ್ನ ಮತ್ತು ಅದು ವಿಫಲವಾಗುವ ಸಾಧ್ಯತೆ. ಕೆಲವೊಮ್ಮೆ ಆಧುನಿಕ ದಂಪತಿ ಕೂಡಿ ಮಕ್ಕಳು ಬೇಡ ಎಂದು ಅಥವಾ ದತ್ತು ತೆಗೆದುಕೊಳ್ಳುವ ನಿರ್ಧಾರ ಮಾಡುವುದು ಮತ್ತೊಂದು ಕಾರಣ. ಪರಿಸ್ಥಿತಿ ಹೀಗಿರುವಾಗ, 'ನಾನು ದುಬಾರಿ ಬಾಡಿಗೆ ತಾಯ್ತನದ ಮೂಲಕ ತಾಯಿ ಆಗುತ್ತೇನೆ' ಎನ್ನುವವರು ಎಷ್ಟು ಜನ? ಜೊತೆಗೆ ಬಾಡಿಗೆ ತಾಯ್ತನ ಹೇಗೆ ಬಡರಾಷ್ಟ್ರಗಳ, ಬಡತಾಯಂದಿರ ಶೋಷಣೆಗೆ ಕಾರಣವಾಗಿದೆ ಎಂಬ ಕಡೆಗೆ ಸಚಿವರು ಗಮನಕೊಡುವುದು ಒಳ್ಳೆಯದು. ಕೆಲವರು ಸ್ವಯಂ ಇಚ್ಛೆಯ ಕಾರಣದಿಂದಲೇ ಅಂತಹ ಆಯ್ಕೆಯನ್ನು ಮಾಡಿಕೊಳ್ಳಬಹುದು. ಅದನ್ನು ಅಲ್ಲಗಳೆಯುವುದು ಏಕೆ?

ಡಾ. ಎಚ್.ಜಿ.ಜಯಲಕ್ಷ್ಮಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಲ್ಲಿದ್ದಲು ಕೊರತೆ ಕೋಲಾಹಲ

ದೇಶದಲ್ಲಿ ವಿದ್ಯುತ್ ಕೊರತೆಯ ಕಾರ್ಮೋಡ ಆವರಿಸುತ್ತಿದೆ. ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಕಲ್ಲಿದ್ದಲು ಕೊರತೆ ತೀವ್ರವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಗಂಭೀರ ಸ್ಥಿತಿಗೆ ತಲುಪುವ ಸೂಚನೆಗಳಿವೆ.

ದೆಹಲಿ, ಪಂಜಾಬ್, ಆಂಧ್ರಪ್ರದೇಶ ಸೇರಿದಂತೆ ಕೆಲವು ರಾಜ್ಯಗಳು ಕಲ್ಲಿದ್ದಲು ಬಿಕ್ಕಟ್ಟಿನ ಬಗ್ಗೆ ದನಿ ಎತ್ತಿವೆ. ತಕ್ಷಣ ಕಲ್ಲಿದ್ದಲು ಪೂರೈಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ. ಕೆಲವು ರಾಜ್ಯಗಳು ಈಗಾಗಲೇ ವಿದ್ಯುತ್ ಕಡಿತ ಪ್ರಕಟಿಸಿದ್ದರೆ, ಸಂಭಾವ್ಯ ವಿದ್ಯುತ್ ಕಡಿತದ ಬಗ್ಗೆ ಇನ್ನೂ ಕೆಲವು ರಾಜ್ಯಗಳು ಜನರಿಗೆ ಮುನ್ಸೂಚನೆ ನೀಡಿವೆ. ಆದರೆ ಕೇಂದ್ರ ಸರ್ಕಾರ ಮಾತ್ರ ದಿಗಿಲು ಬೀಳುವಂಥದ್ದು ಏನೂ ಇಲ್ಲ ಎಂದು ಪ್ರತಿಪಾದಿಸುತ್ತಿದೆ.


ಧಾರಾಕಾರ ಮಳೆಯು ಕಲ್ಲಿದ್ದಲು ಸಾಗಣೆಗೆ ಅಡ್ಡಿಪಡಿಸಿದೆ. ಜೊತೆಗೆ ಆಮದು ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಗಳು ದುಬಾರಿ ದರ ಏರಿಕೆಯ ಕಾರಣ, ಅವುಗಳ ಸಾಮರ್ಥ್ಯದ ಅರ್ಧಕ್ಕಿಂತ ಕಡಿಮೆ ವಿದ್ಯುತ್ ಉತ್ಪಾದಿಸುತ್ತಿವೆ.

ದೇಶದಲ್ಲಿ 135 ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿವೆ. ದೇಶದ ವಿದ್ಯುತ್ ಅಗತ್ಯದ ಶೇ 50ಕ್ಕಿಂತ ಹೆಚ್ಚನ್ನು ಇವು ಪೂರೈಸುತ್ತವೆ. ಅಕ್ಟೋಬರ್ 5ರ ಮಾಹಿತಿ ಪ್ರಕಾರ, ಈ ಪೈಕಿ 106 ಸ್ಥಾವರಗಳಲ್ಲಿ ಶೇ 80ಕ್ಕಿಂತಲೂ ಹೆಚ್ಚು ಕಲ್ಲಿದ್ದಲು ಖಾಲಿಯಾಗಿದೆ. ಮೂರಾಲ್ಕು ದಿನಗಳಲ್ಲಿ ಇದೂ ಖಾಲಿಯಾಗಲಿದೆ, ಪರಿಸ್ಥಿತಿ ಬಿಗಡಾಯಿಸಲಿದೆ.

ಮಹಾರಾಷ್ಟ್ರದ 13, ಕೇರಳದ 4, ಪಂಜಾಬ್‌ನ ಮೂರು ಸ್ಥಾವರಗಳು ಕಲ್ಲಿದ್ದಲು ಇಲ್ಲದೆ ಈಗಾಗಲೇ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಿವೆ. ವಿದ್ಯುತ್ ಉಳಿತಾಯ ಮಾಡುವಂತೆ ಮಹಾರಾಷ್ಟ್ರ ಸರ್ಕಾರ ಜನರಿಗೆ ಮನವಿ ಮಾಡಿದೆ. ಲೋಡ್ ಶೆಡ್ಡಿಂಗ್ ಮಾಡುವ ಸೂಚನೆಯನ್ನು ಕೇರಳ ಸರ್ಕಾರ ನೀಡಿದೆ.

ವಿದ್ಯುತ್ತನ್ನು ವಿವೇಚನೆಯಿಂದ ಬಳಸುವಂತೆ ಟಾಟಾ ಪವರ್ ಸಂಸ್ಥೆಯು ಜನರನ್ನು ಕೇಳಿಕೊಂಡಿದೆ. ಆದರೆ ಜನರಲ್ಲಿ ಭೀತಿ ಹುಟ್ಟಿಸಲಾಗುತ್ತಿದೆ ಎಂದು ಕಿಡಿಕಾರಿರುವ ಕೇಂದ್ರ ಸರ್ಕಾರವು ಸಂಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದೆ. ದೆಹಲಿಯಲ್ಲಿ ಕಲ್ಲಿದ್ದಲು ಬಿಕ್ಕಟ್ಟು ಬಿಗಡಾಯಿಸುತ್ತಿದ್ದು, ಪ್ರಧಾನಿ ಮಧ್ಯಪ್ರವೇಶಿಸಬೇಕು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮನವಿ ಮಾಡಿದ್ದಾರೆ.

ಕಲ್ಲಿದ್ದಲು ಕೊರತೆಯಿಂದ ಮಹಾರಾಷ್ಟ್ರದಲ್ಲಿ 3330 ಮೆಗಾವಾಟ್ ವಿದ್ಯುತ್ ಉತ್ಪಾದನೆ ಕಡಿತವಾಗಿದ್ದು ಅನ್ಯ ಮೂಲಗಳಿಂದ ಉತ್ಪಾದನೆ ಹೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಪಂಜಾಬ್‌ನಲ್ಲಿ ಈಗಾಗಲೇ 3ರಿಂದ 6 ಗಂಟೆ ವಿದ್ಯುತ್ ಕಡಿತ ಘೋಷಿಸಲಾಗಿದ್ದು, ಇದರ ವಿರುದ್ಧ ರಾಜ್ಯದ ವಿವಿಧೆಡೆ ಪ್ರತಿಭಟನೆಗಳೂ ಆರಂಭವಾಗಿವೆ. ರಾಜ್ಯದ ಒಟ್ಟು 5,620 ಮೆಗಾವಾಟ್ ಸಾಮರ್ಥ್ಯದ ಪೈಕಿ ಈಗ 2,800 ಮೆಗಾವಾಟ್ ಮಾತ್ರ ಉತ್ಪಾದನೆಯಾಗುತ್ತಿದೆ. ಖಾಸಗಿ ಸಂಸ್ಥೆಗಳು ಮತ್ತು ಅಕ್ಕಪಕ್ಕದ ರಾಜ್ಯಗಳಿಂದ ವಿದ್ಯುತ್ ಖರೀದಿಗೆ ಸರ್ಕಾರ ಮಾತುಕತೆ ನಡೆಸುತ್ತಿದೆ.



ಕರ್ನಾಟಕದಲ್ಲೂ ಕಲ್ಲಿದ್ದಲು ಕೊರತೆ ಇದ್ದು, 4 ರೇಕ್ ಕಲ್ಲಿದ್ದಲು ಪೂರೈಸುವಂತೆ ಕೇಂದ್ರಕ್ಕೆ ಮನವಿ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಮಹಾರಾಷ್ಟ್ರದ ಚಂದ್ರಾಪುರ ಮತ್ತು ಒಡಿಶಾದ ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್‌ನ ಗಣಿಗಳಿಂದ ಕರ್ನಾಟಕಕ್ಕೆ ಕಲ್ಲಿದ್ದಲು ಹಂಚಿಕೆಯಾಗಿದ್ದು, ಈ ಎರಡೂ ಯೋಜನೆಗಳಿಗೆ ಅನುಮತಿ ಸಿಗಬೇಕಿದೆ.

ರಾಜಸ್ಥಾನದಲ್ಲಿ ನಿತ್ಯ ಒಂದು ಗಂಟೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಎಂಟು ಮೆಟ್ರಿಕ್ ಟನ್ ಕಲ್ಲಿದ್ದಲು ಪೂರೈಕೆಗೆ ಮಧ್ಯಪ್ರದೇಶ ಸರ್ಕಾರ ಟೆಂಡರ್ ಹೊರಡಿಸಿದೆ. ಗುಜರಾತ್, ಪಂಜಾಬ್, ಮಹಾರಾಷ್ಟ್ರ, ಹರಿಯಾಣ ರಾಜ್ಯಗಳಿಗೆ ವಿದ್ಯುತ್ ಪೂರೈಸುವ ಟಾಟಾ ಸಂಸ್ಥೆಯು ತನ್ನ ಗುಜರಾತ್ ಸ್ಥಾವರದಲ್ಲಿ ವಿದ್ಯುತ್ ಉತ್ಪಾದನೆ ನಿಲ್ಲಿಸಿದೆ. ಆಂಧ್ರ ಪ್ರದೇಶದಲ್ಲಿ ಒಂದೆರಡು ದಿನಗಳಿಗಾಗುವಷ್ಟು ಕಲ್ಲಿದ್ದಲು ದಾಸ್ತಾನಿದೆ. ಇದು ಮುಂಬರುವ ಕತ್ತಲ ದಿನಗಳ ಮುನ್ಸೂಚನೆಯಾಗಿದೆ.



ವಿದ್ಯುತ್ ಬೇಡಿಕೆ ಮತ್ತು ಪೂರೈಕೆ(ಕೋಟಿ ಯುನಿಟ್)

ವರ್ಷ	ಬೇಡಿಕೆ	ಪೂರೈಕೆ
2016-17	1.14 ಲಕ್ಷ	1.13 ಲಕ್ಷ
2017-18	1.21 ಲಕ್ಷ	1.2 ಲಕ್ಷ
2018-19	1.27 ಲಕ್ಷ	1.26 ಲಕ್ಷ
2019-20	1.29 ಲಕ್ಷ	1.28 ಲಕ್ಷ
2020-21	1.27 ಲಕ್ಷ	1.27 ಲಕ್ಷ
2021-22 (ಆಗಸ್ಟ್ ಅಂತ್ಯದವರೆಗೆ)	46,624	46,480

ಆಧಾರ: ಇಂಧನ ಸಚಿವಾಲಯ

ದೇಶದಲ್ಲಿ ಈಗ ಎದುರಾಗಿರುವ ಕಲ್ಲಿದ್ದಲು ಕೊರತೆಗೆ ಸರ್ಕಾರವು ಹಲವು ಕಾರಣಗಳನ್ನು ಮುಂದಿಡುತ್ತಿದೆ. ಮುಖ್ಯವಾಗಿ ಭಾರಿ ಮಳೆಯಿಂದ ಕಲ್ಲಿದ್ದಲು ಗಣಿಗಳು ಕೆಲಸ ಮಾಡುತ್ತಿಲ್ಲ ಮತ್ತು ವಿದ್ಯುತ್‌ನ ಬೇಡಿಕೆ ಹೆಚ್ಚಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಈಗಿನ ಪರಿಸ್ಥಿತಿಗೆ ಸರ್ಕಾರವು ಮೂರು ಪ್ರಮುಖ ಕಾರಣಗಳನ್ನು ಬೊಟ್ಟುಮಾಡಿ ತೋರಿಸುತ್ತಿದೆ.

1. ಅತಿ ಮಳೆಯಿಂದ ಕಲ್ಲಿದ್ದಲು ಕೊರತೆ

ಈ ಸಾಲಿನ ಮುಂಗಾರಿನ ಅವಧಿ ದೀರ್ಘವಾಗಿದೆ. ಛತ್ತೀಸಗಡ, ಜಾರ್ಖಂಡ್‌ನಲ್ಲಿನ ಬಹುತೇಕ ಕಲ್ಲಿದ್ದಲು ಗಣಿಗಳು ಜಲಾವೃತವಾಗಿ ಕಲ್ಲಿದ್ದಲನ್ನು ತೆಗೆಯಲು ಸಾಧ್ಯವಾಗಿಲ್ಲ. ಮುಂಗಾರಿನ ಅವಧಿಯಲ್ಲಿ ಎಷ್ಟೋ ದಿನ ಕಲ್ಲಿದ್ದಲು ಗಣಿಗಳು ಕಾರ್ಯನಿರ್ವಹಿಸಿಲ್ಲ. ಆ ಅವಧಿಯಲ್ಲಿ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲನ್ನು ಪೂರೈಸಿಲ್ಲ. ಆದರೆ ಅದೇ ಅವಧಿಯಲ್ಲಿ ಸ್ಥಾವರಗಳು ತಮ್ಮಲ್ಲಿದ್ದ ಕಲ್ಲಿದ್ದಲಿನ ಸಂಗ್ರಹವನ್ನು ಬಳಕೆ ಮಾಡಿಕೊಂಡಿವೆ. ಅಲ್ಲಿನ ಸಂಗ್ರಹ ಮುಗಿಯುತ್ತಾ ಬಂದಿದೆ. ಆದರೆ ನಿರೀಕ್ಷಿತ ಅವಧಿಯಲ್ಲಿ ಕಲ್ಲಿದ್ದಲು ಗಣಿಗಳು ಕಾರ್ಯಾರಂಭ ಮಾಡದೇ ಇದ್ದ ಕಾರಣ ಕಲ್ಲಿದ್ದಲು ಪೂರೈಕೆ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿರಲಿಲ್ಲ. ಹೀಗಾಗಿ ಸ್ಥಾವರಗಳಲ್ಲಿ ಕಲ್ಲಿದ್ದಲು ಕೊರತೆಯಾಗಿದೆ. ಈಗ ಗಣಿಗಳು ಕಾರ್ಯಾರಂಭ ಮಾಡಿದ್ದು, ಕಡಿಮೆ ಸಂಗ್ರಹವಿರುವ ಸ್ಥಾವರಗಳಿಗೆ ಪೂರೈಕೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ಸರ್ಕಾರವು ಹೇಳಿದೆ.

2. ಆಮದು ಸಮಸ್ಯೆ

ಜಾಗತಿಕ ಮಟ್ಟದಲ್ಲಿ ಕಲ್ಲಿದ್ದಲಿನ ಸಮಸ್ಯೆ ಉಂಟಾಗಿದೆ. ಚೀನಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ಕಲ್ಲಿದ್ದಲು ಗಣಿಗಳಲ್ಲಿ ಉತ್ಪಾದನೆ ಕಡಿಮೆಯಾಗಿದೆ. ಹೀಗಾಗಿ ವಿಶ್ವದ ಹಲವು ದೇಶಗಳಿಗೆ ಕಲ್ಲಿದ್ದಲಿನ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಭಾರತವೂ ಕಲ್ಲಿದ್ದಲನ್ನು ಹಲವು ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಆದರೆ ಕಲ್ಲಿದ್ದಲಿನ ಕೊರತೆ ಇರುವ ಕಾರಣ, ಭಾರತಕ್ಕೂ ಕಲ್ಲಿದ್ದಲು ಆಮದು ಆಗುವಲ್ಲಿ ವ್ಯತ್ಯಯವಾಗಿದೆ. ಹೀಗಾಗಿ ದೇಶದ ಕಲ್ಲಿದ್ದಲಿನ ಗಣಿಗಳ ಮೇಲೆ ಒತ್ತಡ ಹೆಚ್ಚಾಗಿದೆ.

3. ಅತಿಯಾದ ಬೇಡಿಕೆ

ಕೋವಿಡ್‌ನ ಎರಡನೇ ಲಾಕ್‌ಡೌನ್ ತೆರವಾದ ನಂತರ ದೇಶದ ಎಲ್ಲೆಡೆ ಆರ್ಥಿಕ ಚಟುವಟಿಕೆ ಪುನರಾರಂಭವಾಗಿದೆ. ಕೈಗಾರಿಕೆಗಳು, ವಿದ್ಯುತ್ ಹೆಚ್ಚು ಬಳಸುವ ಸೇವಾ ಕ್ಷೇತ್ರಗಳು ಕೆಲಸ ಶುರು ಮಾಡಿವೆ. ಹೀಗಾಗಿ ದೇಶದಲ್ಲಿ ಈ ಹಿಂದಿಗಿಂತ ವಿದ್ಯುತ್‌ಗೆ ಹೆಚ್ಚು ಬೇಡಿಕೆ ಇದೆ. ಆ ಬೇಡಿಕೆಯನ್ನು ಪೂರೈಸಲು, ಉಷ್ಣ ವಿದ್ಯುತ್ ಸ್ಥಾವರಗಳು ತಮ್ಮಲ್ಲಿದ್ದ ಕಲ್ಲಿದ್ದಲಿನ ಸಂಗ್ರಹವನ್ನು ಬಳಕೆ ಮಾಡಿಕೊಂಡಿವೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ವಿದ್ಯುತ್‌ಗೆ ಬೇಡಿಕೆ ಹೆಚ್ಚುತ್ತದೆ. ಈ ಬಾರಿ ಮುಂಗಾರಿನ ಅವಧಿ ದೀರ್ಘವಾಗಿದ್ದ ಕಾರಣ ಹೆಚ್ಚು ವಿದ್ಯುತ್ ಬಳಕೆ ಮಾಡಲಾಗಿದೆ. ಹೆಚ್ಚುವರಿ ವಿದ್ಯುತ್ ಉತ್ಪಾದಿಸಲು ಸಂಗ್ರಹದಲ್ಲಿದ್ದ ಕಲ್ಲಿದ್ದಲನ್ನು ಬಳಸಲಾಗಿದೆ. ಕಲ್ಲಿದ್ದಲಿನ ಸಂಗ್ರಹ ಕಡಿಮೆಯಾಗಲು ಅಥವಾ ಮುಗಿಯಲೂ ಇದೂ ಒಂದು ಪ್ರಮುಖ ಕಾರಣ ಎಂದು ಸರ್ಕಾರ ಹೇಳಿದೆ.

ಆದರೆ 2020-21ನೇ ಸಾಲಿನಲ್ಲಿ ಬಳಕೆಯಾದ ಒಟ್ಟು ವಿದ್ಯುತ್‌ಗೆ ಹೋಲಿಸಿದರೆ, 2021-22ನೇ ಸಾಲಿನ ಮೊದಲ ಆರು ತಿಂಗಳಲ್ಲಿ ಬಳಕೆಯಾದ ವಿದ್ಯುತ್‌ನ ಪ್ರಮಾಣ ಇಳಿಕೆಯಾಗಿದೆ. 2020-21ನೇ ಸಾಲಿನಲ್ಲಿ ಒಟ್ಟು 1.27 ಲಕ್ಷ ಕೋಟಿ ಯುನಿಟ್‌ಗಳಿಗೆ ಬೇಡಿಕೆ ಬಂದಿತ್ತು. ಆದರೆ 2021-22ನೇ ಆರ್ಥಿಕ ವರ್ಷದ (ಏಪ್ರಿಲ್‌ನಿಂದ ಆಗಸ್ಟ್ ಅಂತ್ಯದವರೆಗೆ) ಕೇವಲ 46,624 ಕೋಟಿ ಯುನಿಟ್‌ಗಳಿಗೆ ಬೇಡಿಕೆ ಬಂದಿದೆ. ಅರ್ಧ ವರ್ಷ ಕಳೆದರೂ ಈ ಹಿಂದಿನ ವರ್ಷದಲ್ಲಿದ್ದ ಬೇಡಿಕೆಯಲ್ಲಿ ಅರ್ಧದಷ್ಟೂ ಬೇಡಿಕೆ ಬಂದಿಲ್ಲ. ಆದರೆ, 'ಬೇಡಿಕೆ ಹೆಚ್ಚಿದ ಕಾರಣ, ಅದನ್ನು ಪೂರೈಸಲು ಹೆಚ್ಚುವರಿ ಕಲ್ಲಿದ್ದಲು ಬಳಕೆ ಮಾಡಲಾಗಿದೆ. ಹೀಗಾಗಿ ಕಲ್ಲಿದ್ದಲು ಕೊರತೆಯಾಗಿದೆ' ಎಂದು ಸರ್ಕಾರ ಹೇಳುತ್ತಿದೆ.

ಪರಿಣಾಮಗಳು

ಆರ್ಥಿಕ ಚಟುವಟಿಕೆ ಮತ್ತೆ ಕುಸಿಯುವ ಸಾಧ್ಯತೆ: ಕಲ್ಲಿದ್ದಲಿನ ಕೊರತೆ ಕಾರಣ ವಿದ್ಯುತ್ ಉತ್ಪಾದನೆಯಲ್ಲಿ ಕಡಿತವಾಗಿದೆ. ಕೋವಿಡ್ ಸಾಂಕ್ರಾಮಿಕದಿಂದ ಆರ್ಥಿಕ ಸಂಕಷ್ಟ ಎದುರಿಸಿದ್ದ ಉದ್ಯಮಗಳು ಈಗ ಚೇತರಿಕೆಯ ಹಾದಿಯಲ್ಲಿವೆ. ಸರ್ಕಾರ ನೀಡಿರುವ ಮಾಹಿತಿ ಪ್ರಕಾರ 2021ರ ಆಗಸ್ಟ್‌ನಲ್ಲಿದ್ದ ವಿದ್ಯುತ್ ಬೇಡಿಕೆಯು 2019ರ ಆಗಸ್ಟ್‌ನ ವಿದ್ಯುತ್ ಬೇಡಿಕೆಗಿಂತ ಶೇ 17ರಷ್ಟು ಜಾಸ್ತಿ ಇದೆ. ಇಂಥ ಸಮಯದಲ್ಲಿ ಉದ್ಯಮಗಳಿಗೆ ವಿದ್ಯುತ್ ಕೊರತೆ ಕಾಡಿದರೆ ದೇಶದಲ್ಲಿ ಆರ್ಥಿಕ ಚೇತರಿಕೆಗೆ ಮತ್ತೆ ಹೊಡೆತ ಬೀಳಬಹುದು ಎಂದು ಅಂದಾಜಿಸಲಾಗಿದೆ.


ಅಕ್ಟೋಬರ್ ಎರಡನೇ ವಾರದಿಂದ ದೇಶದಲ್ಲಿ ಸಾಲುಸಾಲು ಹಬ್ಬಗಳು ಶುರುವಾಗುವುದರಿಂದ ಹಲವಾರು ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳೂ ಉತ್ಪಾದನೆ ಹೆಚ್ಚಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿವೆ. ವಿದ್ಯುತ್ ವ್ಯತ್ಯಯ ಉಂಟಾದರೆ ಈ ಉದ್ದಿಮೆಗಳು ಚೇತರಿಸಿಕೊಳ್ಳಲು ಸಿಕ್ಕಿದ್ದ ಉತ್ತಮ ಅವಕಾಶ ಕೈತಪ್ಪಿದಂತಾಗುತ್ತದೆ.

ದರ ಹೆಚ್ಚಳದ ಬೀತಿ: ಕಲ್ಲಿದ್ದಲನ್ನು ಭಾರಿ ದರ ನೀಡಿ ಕೊಳ್ಳುತ್ತಿರುವ ಕಾರಣ ಮುಂದಿನ ದಿನಗಳಲ್ಲಿ ಉಕ್ಕು ಉತ್ಪನ್ನದ ದರ ಹೆಚ್ಚಳವಾಗಬಹುದು ಎಂದು ಈ ಹಿಂದೆಯೇ ಜಿಂದಾಲ್ ಸ್ಟೀಲ್ ಆ್ಯಂಡ್ ಪವರ್ ಸಂಸ್ಥೆ ಹೇಳಿತ್ತು. ಕಲ್ಲಿದ್ದಲು, ವಿದ್ಯುತ್ ಅಭಾವದಿಂದ ಪೆಟ್ರೋಲಿಯಂ, ಅಲ್ಯುಮಿನಿಯಂ, ಸಿಮೆಂಟ್, ಸಕ್ಕರೆ ಸೇರಿ ಇತರ ವಸ್ತುಗಳ ಬೆಲೆಗಳೂ ಹೆಚ್ಚಳವಾಗಬಹುದು. ರೆಫ್ರಿಜಿರೇಟರ್ ಮೇಲೆ ಅವಲಂಬಿತವಾಗಿರುವ ಆಹಾರ ತಯಾರಿಕೆ ಮತ್ತು ಸಂಸ್ಕರಣಾ ಕ್ಷೇತ್ರಕ್ಕೂ ಹೆಚ್ಚಿನ ತೊಂದರೆ ಆಗಲಿದೆ.

ಅದಾನಿ ಬಂದರು ಮತ್ತು ಎಸ್‌ಇಝೆಡ್‌ನ ಪ್ರಕಟಣೆ

ಇರಾನ್, ಪಾಕ್, ಅಫ್ಗನ್ ಸರಕು ನಿರ್ವಹಣೆ ಇಲ್ಲ

ಪ್ರಜಾವಾಣಿ ವಾರ್ತೆ



ಮುಂದ್ರಾ ಬಂದರಿನ ಕಂಟೇನರ್ ಟರ್ಮಿನಲ್

ಅಹಮದಾಬಾದ್: 'ಇರಾನ್, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಿಂದ ನವೆಂಬರ್ 15ರಿಂದ ಜಾರಿಗೆ ಬರುವಂತೆ ಮುಂದಿನ ಸೂಚನೆಯವರೆಗೆ ಯಾವುದೇ ಸರಕು ಸಾಗಣೆಯನ್ನು ನಿರ್ವಹಿಸುವುದಿಲ್ಲ' ಎಂದು ಅದಾನಿ ಸಮೂಹ ಮಾಲೀಕತ್ವದ ಅದಾನಿ ಬಂದರು ಮತ್ತು ಎಸ್‌ಇಝೆಡ್ ಸಂಸ್ಥೆಯು ಸೋಮವಾರ ಪ್ರಕಟಿಸಿದೆ.

ಅದಾನಿ ಬಂದರು ಮತ್ತು ಎಸ್‌ಇಝೆಡ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಬ್ರತ್ ತ್ರಿಪಾಠಿ ಅವರು ಈ ಕುರಿತು ಕಂಪನಿಯ ಗ್ರಾಹಕ ಸಮೂಹಕ್ಕೆ ಮಾಹಿತಿ ನೀಡಿದ್ದಾರೆ.

ಅದಾನಿ ಸಮೂಹ ನಿರ್ವಹಣೆ ಮಾಡುತ್ತಿರುವ ಎಲ್ಲ ಟರ್ಮಿನಲ್‌ಗಳು ಮತ್ತು ಒಪ್ಪಂದವುಳ್ಳ ಟರ್ಮಿನಲ್‌ಗಳಿಗೂ ಇದು ಅನ್ವಯವಾಗಲಿದೆ. ಮುಂದಿನ ಸೂಚನೆವರೆಗೂ ಇದು ಜಾರಿಯಲ್ಲಿರುತ್ತದೆ ಎಂದು ಹೇಳಿಕೆ ತಿಳಿಸಿದೆ.

ಕಂಪನಿಯು ನಿರ್ವಹಣೆ ಮಾಡುವ ಮುಂದ್ರಾ ಬಂದರಿನಲ್ಲಿ ಸುಮಾರು ₹ 21 ಸಾವಿರ ಕೋಟಿ ಮೌಲ್ಯದ 3000 ಕೆ.ಜಿ ಹೆರಾಯಿನ್ ಜಪ್ತಿಯಾದ ಘಟನೆಯ ಒಂದು ತಿಂಗಳ ನಂತರ ಕಂಪನಿಯ ಈ ಹೇಳಿಕೆ ಹೊರಬಿದ್ದಿದೆ.

ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ಸೆಪ್ಟೆಂಬರ್ 11ರಂದು ಹೆರಾಯಿನ್ ಪತ್ತೆ ಮಾಡಿದ್ದರು. ಚೆನ್ನೈ ಮೂಲದ, ವಿಜಯವಾಡದಲ್ಲಿ ನೋಂದಣಿಯಾಗಿದ್ದ ಆಶಿ ಟ್ರೇಡಿಂಗ್ ಸಂಸ್ಥೆಯ ಹೆಸರಿನಲ್ಲಿ ಇದನ್ನು ತರಿಸಿಕೊಳ್ಳಲಾಗಿತ್ತು. ಭಾಗಶಃ ಸಂಸ್ಕರಿಸಿದ್ದ ಶಿಲೆಗಳು ಎಂದು ಹೇಳಲಾಗಿತ್ತು. ಮಚವರಂ ಸುಧಾಕರ್ ಮತ್ತು ಅವರ ಹೆಂಡತಿ ಗೋವಿಂದರಾಜು ದುರ್ಗಾಪೂರ್ಣ ವೈಶಾಲಿ ಅವರ ಹೆಸರಿನಲ್ಲಿ 40 ಅಡಿಯ ಎರಡು ಕಂಟೇನರ್‌ಗಳನ್ನು ಆಮದು ಮಾಡಿಕೊಳ್ಳಲಾಗಿತ್ತು. ಅಫ್ಗಾನಿಸ್ತಾನದಿಂದ ಇದನ್ನು ಆಮದು ಮಾಡಿಕೊಳ್ಳಲಾಗಿತ್ತು. ಇರಾನ್‌ನ ಬಂದರ್ ಅಬ್ಬಾಸ್‌ನಲ್ಲಿ ಇದನ್ನು ಹಡಗಿಗೆ ಹಾಕಲಾಗಿತ್ತು. ಅಫ್ಗಾನಿಸ್ತಾನದ ಹಸನ್–ಹುಸೇನ್ ಲಿ. ಎಂಬ ಕಂಪನಿಯು ಇದನ್ನು ರಪ್ತು ಮಾಡಿತ್ತು. ಎರಡು ಕಂಟೇನರ್‌ಗಳಲ್ಲಿರುವ ಸರಕಿನ ಮೌಲ್ಯ₹7.5 ಕೋಟಿ ಎಂದು ಹೇಳಲಾಗಿತ್ತು ಎಂಬ ವಿಚಾರಗಳು ತನಿಖೆಯಲ್ಲಿ ತಿಳಿದು ಬಂದಿದ್ದವು.

ಅಪಪ್ರಚಾರ ತಡೆ ಯತ್ನ

ಮುಂದ್ರಾ ಬಂದರಿನಲ್ಲಿ ಭಾರಿ ಪ್ರಮಾಣದ ಡ್ರಗ್ಸ್ ಪತ್ತೆಯಾದ ಬಳಿಕ ಅದಾನಿ ಸಮೂಹದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿತ್ತು. ಹಾಗಾಗಿ, ಸೆಪ್ಟೆಂಬರ್ 21ರಂದು ಕಂಪನಿಯು ಹೇಳಿಕೆ ಬಿಡುಗಡೆ ಮಾಡಿತ್ತು. 'ಅದಾನಿ ಸಮೂಹದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆಗುತ್ತಿರುವ ಅಪಪ್ರಚಾರ ತಡೆಯುವುದಕ್ಕಾಗಿಯೇ ಹೇಳಿಕೆ ನೀಡಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿತ್ತು. ಅದಾನಿ ಬಂದರು ಮತ್ತು ಎಸ್‌ಇಝೆಡ್ ಸಂಸ್ಥೆಯು ಬಂದರು ನಿರ್ವಹಣೆ ಸೇವೆಗಳನ್ನು ಮಾತ್ರ ಒದಗಿಸುತ್ತದೆ. ಮುಂದ್ರಾ ಮತ್ತು ನಮ್ಮ ಇತರ ಬಂದರುಗಳ ಮೂಲಕ ಸಾವಿರಾರು ಟನ್ ಸರಕು ಸಾಗಾಟವಾಗುತ್ತದೆ. ಅವೆಲ್ಲವನ್ನೂ ತನಿಖೆಗೆ ಒಳಪಡಿಸುವ ಕೆಲಸ ಮಾಡುವುದಿಲ್ಲ' ಎಂದು ಹೇಳಿಕೆ ನೀಡಲಾಗಿತ್ತು.

ಕೋರ್ಟ್ ತರಾಟೆ

ಕೆಲವು ಆರೋಪಿಗಳನ್ನು ಭುಜ್‌ನ ನ್ಯಾಯಾಲಯಕ್ಕೆ ಸೆ.26ರಂದು ಹಾಜರುಪಡಿಸಿದಾಗ, ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳನ್ನು ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಡ್ರಗ್ಸ್ ಸಾಗಾಟದಲ್ಲಿ ಮುಂದ್ರಾ ಬಂದರಿನ ಅಧಿಕಾರಿಗಳ ಪಾತ್ರ ಏನು ಎಂಬುದನ್ನೂ ತನಿಖೆಗೆ ಒಳಪಡಿಸಿ ಎಂದು ಹೇಳಿತ್ತು. ಮುಂದ್ರಾ ಬಂದರಿನ ಅಧಿಕಾರಿಗಳ ಗಮನಕ್ಕೇ ಬಾರದೆ 3,000 ಕೆ.ಜಿ. ಹೆರಾಯಿನ್ ತರುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿತ್ತು. ಡ್ರಗ್ಸ್ ಸಾಗಾಟದಿಂದ ಬಂದರಿನ ನಿರ್ವಾಹಕರು ಮತ್ತು ಅಧಿಕಾರಿಗಳಿಗೆ ಏನಾದರೂ ಲಾಭ ಆಗಿದೆಯೇ ಎಂಬುದನ್ನೂ ಪರಿಶೀಲಿಸಲು ಕೋರ್ಟ್ ಸೂಚಿಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪೊಲೀಸ್ ಸಮವಸ್ತ್ರದಲ್ಲಿರುವವರಿಗೆ ಜನರು ಕಲ್ಲು ತೂರಾಟ ನಡೆಸುತ್ತಿರುವ ವಿಡಿಯೊವೊಂದು ಜಾಲತಾಣಗಳಲ್ಲಿ ವೈರಲ್ ಆಗಿದೆ. ಕೆಲ ದಿನಗಳ ಹಿಂದೆ ರಾಜಸ್ಥಾನದ ಜೈಪುರದಲ್ಲಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆದಿತ್ತು. ಈ ವಿಡಿಯೊ ಜೈಪುರ ಘಟನೆಗೆ ಸಂಬಂಧಿಸಿದ್ದು ಎಂದು ವಿಡಿಯೊ ಕುರಿತು ಹೇಳಲಾಗುತ್ತಿದೆ. ಕಲ್ಲು ತೂರುತ್ತಿರುವವರು 'ಅಲ್ಲಾ ಹು ಅಕ್ಬರ್' ಎಂದು ಹೇಳುತ್ತಿರುವುದು ವಿಡಿಯೊದಲ್ಲಿ ಕೇಳುತ್ತದೆ. ಇದನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದ ವ್ಯಕ್ತಿ 'ರಾಜಸ್ಥಾನವು ಕಾಶ್ಮೀರವಾಗಿ ಬದಲಾಗಿದ್ದನ್ನು ನಾವು ಗಮನಿಸಿರಲಿಲ್ಲ' ಎಂದು ತಲೆ ಬರಹ ನೀಡಿದ್ದಾರೆ.



ವಿಡಿಯೊದಲ್ಲಿರುವ ಘಟನೆ ಜೈಪುರಕ್ಕೆ ಸಂಬಂಧಿಸಿದ್ದಲ್ಲ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಈ ವಿಡಿಯೊವನ್ನು 2017ರ ಸೆಪ್ಟೆಂಬರ್‌ನಲ್ಲಿ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ಲಾಲ್ ಚೌಕದಲ್ಲಿ ನಾಲ್ಕು ವರ್ಷಗಳ ಹಿಂದೆ ನಡೆದಿದ್ದ ಘಟನೆಗೆ ಸಂಬಂಧಿಸಿದ ವಿಡಿಯೊ ಇದು. ರಿವರ್ಸ್ ಇಮೇಜ್ ಸರ್ಚ್ ತಂತ್ರಜ್ಞಾನ ಬಳಸಿ ಈ ವಿಡಿಯೊ ಸೆರೆಯಾಗಿರುವ ಸ್ಥಳ ಪತ್ತೆ ಮಾಡಲಾಗಿದೆ. ಇತ್ತೀಚೆಗೆ ನಡೆದ ಜೈಪುರ ಘಟನೆಗೂ ಈ ವಿಡಿಯೊಗೂ ಯಾವುದೇ ಸಂಬಂಧವಿಲ್ಲ ಎಂದು ಆಲ್ಟ್ ನ್ಯೂಸ್ ಹೇಳಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಮೃತ್ಯುಂಜಯತೆ

ಬಿದ್ದುದನು ನಿಲ್ಲಿಪುದೆ ನರನ ಮೃತ್ಯುಂಜಯತೆ।
ಶುದ್ಧಿಸದೆ ನಭ ಧರೆಯ ಮರಮರಳಿ ಮಳೆಯಿಂ?॥
ಗದ್ದೆ ಕೊಯ್ಲಾಗೆ ಮಗುಳ್ದದು ಬೆಳೆಯ ಕುಡದಿಹುದೆ?।
ಬಿದ್ದ ಮನೆಯನು ಕಟ್ಟೊ – ಮಂಕುತಿಮ್ಮ ॥474॥

ಪದ-ಅರ್ಥ: ನಿಲ್ಲುಪುದೆ = ನಿಲ್ಲಿಸುವುದು, ಮೃತ್ಯುಂಜಯತೆ = ಸಾವನ್ನು ಗೆಲ್ಲುವಿಕೆ, ನಭ = ಆಕಾಶ, ಮಗುಳ್ದದು = ಮತ್ತೆ ಮರಳಿ.

ವಾಚ್ಯಾರ್ಥ: ಬಿದ್ದ ವ್ಯವಸ್ಥೆಯನ್ನು ಕಟ್ಟುವದರಲ್ಲೇ ಮನುಷ್ಯನ ಅಮರತ್ವವಿದೆ. ಆಕಾಶ ಮೇಲಿಂದ ಮೇಲೆ ಮಳೆಯನ್ನು ಸುರಿಸಿ ಭೂಮಿಯನ್ನು ಶುದ್ಧಿಗೊಳಿಸುವುದಿಲ್ಲವೆ? ಗದ್ದೆಯಲ್ಲಿಯ ಬೆಳೆಯನ್ನು ಕೊಯ್ದು ತೆಗೆದರೆ ಮತ್ತೆ ಧರೆ ಬೆಳೆಯನ್ನು ಕೊಡುವುದಿಲ್ಲವೆ? ಅದಕ್ಕಾಗಿ ಬಿದ್ದ ವ್ಯವಸ್ಥೆಯನ್ನು ಕಟ್ಟು.

ವಿವರಣೆ: ಮೃತ್ಯುಂಜಯ ಎಂದರೆ ಮೃತ್ಯುವನ್ನು ಜಯಿಸುವುದು. ಮೃತ್ಯುವನ್ನು ಗೆಲ್ಲುವುದು ಸಾಧ್ಯವೆ? ಯಾರಾದರೂ ಮೃತ್ಯುವನ್ನು ಗೆದ್ದಿದ್ದಾರೆಯೆ? ಹಾಗಾದರೆ ಮೃತ್ಯುಂಜಯತೆ ಎನ್ನುವ ಮಾತಿಗೆ ಏನರ್ಥ? ಈ ಮಾತು ಸೂಕ್ಷ್ಮವಾಗಿ ಕಠೋಪನಿಷತ್ತಿನಲ್ಲಿ ಬರುತ್ತದೆ. ಪುಟ್ಟ ಬಾಲಕ ನಚಿಕೇತ ಯಮನ ಬಳಿ ಹೋಗುತ್ತಾನೆ. ಸಾವಿನ ಗುಟ್ಟನ್ನು ಕೇಳುತ್ತಾನೆ. ಸಾವನ್ನು ಗೆಲ್ಲುವುದು ಸಾಧ್ಯವೇ ಎಂದು ಪ್ರಶ್ನಿಸುತ್ತಾನೆ. ಸಾವನ್ನು ಗೆಲ್ಲುವುದು ಸಾಧ್ಯವಿಲ್ಲ ಎನ್ನುತ್ತಾನೆ ಯಮ ಎಂದುಕೊಂಡಿದ್ದ ನನಗೆ ಅವನ ಉತ್ತರ ಬೆರಗು ಹುಟ್ಟಿಸಿತ್ತು. ಅದೊಂದು ಸೂಕ್ಷ್ಮ ನಿರ್ದೇಶ. ಯಮ ಹೇಳುತ್ತಾನೆ, 'ಸಾವನ್ನು ಗೆಲ್ಲಬಹುದು ಆದರೆ ದೇಹದಿಂದಲ್ಲ, ಮಾಡುವ ಸಾಧನೆಯಿಂದ'! ಈ ದೇಹದ ಲಕ್ಷಣವೇ ಕರಗಿ ಹೋಗುವುದು. ಆದರೆ ಅದರ ಮೂಲಕ ಮಾಡಿದ ಕಾರ್ಯ ಚಿರಾಯು. ಒಬ್ಬ ರಾಜಕುಮಾರ ಸತ್ಯವಚನ ಮತ್ತು ಏಕಪತ್ನೀ ವ್ರತಸ್ಥತೆಯಿಂದ, ರಾಕ್ಷಸನ ದಮನ ಮಾಡಿ, ಲೋಕೋತ್ತರನಾದ. ಶ್ರೀರಾಮನೆಂದು, ದೇವರೆಂದು, ಶಾಶ್ವತನಾದ.

ಯಾದವರ ಹುಡುಗ ತನ್ನ ಬದುಕಿನುದ್ದಕ್ಕೂ ನಿರಪೇಕ್ಷನಾಗಿ, ಚಕ್ರವರ್ತಿಗಳ ಕಿರೀಟಗಳು ಪದತಲದಲ್ಲೇ ಇದ್ದರೂ, ತಾನು ರಾಜನಾಗದೆ, ಕೇವಲ ಧರ್ಮಸ್ಥಾಪನೆಗೆ ತನ್ನ ಬದುಕನ್ನು ಅಹರ್ನಿಶಿ ಸವೆಸಿದ, ಶ್ರೀ ಕೃಷ್ಣ ಎಂದು ದೇವರಾದ. ಆಸೆಯನ್ನೇ ನಿರಾಕರಿಸಿ, ಜಗಕೆಲ್ಲ ಬೋಧಿಸಿದ ಬುದ್ಧ ಅವತಾರಿಯಾದ. ಇದೇ ರೀತಿಯಲ್ಲಿ ಮಹಾವೀರ, ಏಸುಕ್ರಿಸ್ತ, ಪ್ರವಾದಿಗಳು, ಶಂಕರಾಚಾರ್ಯ, ಬಸವಣ್ಣ, ಶ್ರೀರಾಮಕೃಷ್ಣ, ವಿವೇಕಾನಂದ, ಗಾಂಧಿ ಇವರೆಲ್ಲ ಚಿರಾಯುಗಳಾದವರು. ಇವರಲ್ಲಿ ಯಾರೂ ದೇಹದಿಂದ ಬದುಕಿಲ್ಲ. ಆದರೆ ಅವರ ಗಾಥೆ ಶಾಶ್ವತವಾಗಿದೆ. ಎಲ್ಲರೂ ವ್ಯವಸ್ಥೆಯನ್ನು ಕಟ್ಟಿದವರು. ಅದನ್ನೇ ಈ ಕಗ್ಗ ಹೇಳುತ್ತದೆ - ಬಿದ್ದುದನು ನಿಲ್ಲುಪದೆ ನರನ ಮೃತ್ಯುಂಜಯತೆ. ಯಾವಾಗ, ಎಲ್ಲಿ ವ್ಯವಸ್ಥೆ ಕುಸಿಯುತ್ತದೆಯೋ, ಎಲ್ಲಿ ಅರಾಜಕತೆ ಮತ್ತು ಅನಾಯಕತ್ವ ತಲೆ ಎತ್ತುತ್ತದೋ ಅಲ್ಲಿ ಎದ್ದು ಬರುವ ನಾಯಕ ಚಿರಂಜೀವಿಯಾಗುತ್ತಾನೆ. ಭಗವದ್ಗೀತೆಯಲ್ಲಿ ಕೃಷ್ಣ ಹೇಳುವುದೂ ಅದನ್ನೇ. 'ಎಲ್ಲಿ ಎಲ್ಲಿ ಧರ್ಮ ಕುಸಿದು ಅಧರ್ಮ ಮೇಲೆದ್ದು ಬರುತ್ತದೋ ಆಗ ನಾನು ಮತ್ತೆ ಮತ್ತೆ ಹುಟ್ಟಿ ಬರುತ್ತೇನೆ'. ವ್ಯವಸ್ಥೆಯ ಸಾವು, ಮೃತ್ಯುಂಜಯನ ಹುಟ್ಟಿಗೆ ಕಾರಣವಾಗುತ್ತದೆ. ಅದು ಒಬ್ಬ ವ್ಯಕ್ತಿಯೇ ಆಗಿರಬೇಕೆಂದಿಲ್ಲ, ಅದು ಒಂದು ಸಮುದಾಯದ ಪ್ರಕ್ರಿಯೆಯೂ ಆಗಿರಬಹುದು. ಹಿರೋಶಿಮಾ, ನಾಗಾಸಾಕಿಗಳ ಮೇಲೆ ಬಿದ್ದ ಬಾಂಬುಗಳು ಇಡೀ ಜಪಾನ್ ದೇಶವನ್ನು ಉಧ್ವಸ್ಥಗೊಳಿಸಿದಾಗ, ಜಪಾನಿನ ಜನ ದೇಶವನ್ನು ಜಗತ್ತು ಬೆರಗಾಗುವಂತೆ ಪುನರ್ ನಿರ್ಮಾಣ ಮಾಡಿದ್ದು, ಎರಡೂ ಮಹಾಯುದ್ಧಗಳನ್ನು ಪ್ರಾರಂಭಿಸಿ, ತನ್ನ ದೇಶವನ್ನು ನುಚ್ಚುನೂರು ಮಾಡಿಕೊಂಡಿದ್ದ ಜರ್ಮನಿ ಮತ್ತೆ ಫೀನಿಕ್ಸ್ ಪಕ್ಷಿಯಂತೆ ಮೇಲೆದ್ದು ತನ್ನನ್ನು ಅಭೂತಪೂರ್ವವಾಗಿ ಸೃಷ್ಟಿಕೊಂಡದ್ದು, ಮೃತ್ಯುಂಜಯತೆಯ ಕಾರ್ಯಗಳೇ. ಕಗ್ಗ ಸುಂದರವಾಗಿ ಎರಡು ಉದಾಹರಣೆಗಳನ್ನು ನೀಡುತ್ತದೆ. ಎಷ್ಟು ಸಲ ಭೂಮಿ ಕೊಳೆಯಾದರೂ, ಮಳೆ ಮತ್ತೆ ಮತ್ತೆ ಬಂದು ಅದನ್ನು ತೊಳೆಯುತ್ತದೆ. ಎಷ್ಟು ಬಾರಿ ಬೆಳೆಯನ್ನು ಕತ್ತರಿಸಿದರೂ ಧರೆ ಮತ್ತೆ ಮತ್ತೆ ನೀಡುತ್ತದೆ. ಅಂತೆಯೇ ಪ್ರತಿ ಬಾರಿ ವ್ಯವಸ್ಥೆ ಕುಸಿದಾಗ ಅದನ್ನು ಕಟ್ಟುವುದೇ ಮೃತ್ಯುಂಜಯತೆ ಎಂದು ಸಾರುತ್ತದೆ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಅಕ್ಟೋಬರ್ 12, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ಸಪ್ತಮೀ ಗಂ. 48-27 (ರಾ. 1-38) ಮಂಗಳವಾರ ನಿತ್ಯ ನಕ್ಷತ್ರ ಮೂಲ ಗಂ. 24-38 (ಹ. 4-07) ಶೋಭನ ನಾಮ ಯೋಗ ಗಂ. 19-43 ಗರಜ ಕರಣ ಗಂ. 21-19 ವಿಷ ಗಂ. 20-53 ಪುನರ್ವಿಷ ಗಂ.47-8 ಅಮೃತ ಗಂ 9- ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-13 ಸೂರ್ಯಾಸ್ತ: 6-00 ಅದೃಷ್ಟ ಸಂಖ್ಯೆ 3 4

ಮೇಷ: ಮಧ್ಯವರ್ತಿಗಳಿಗೆ ಹೆಚ್ಚಿನ ಆರ್ಥಿಕ ಲಾಭ ಪ್ರಾಪ್ತಿ. ಆರೋಗ್ಯದಲ್ಲಿ ಏರಿಳಿತ. ಹಿರಿಯರ ಆರೋಗ್ಯದಲ್ಲಿ ಹೆಚ್ಚಿನ ವ್ಯತ್ಯಯ. ಸಂಗೀತ ಕ್ಷೇತ್ರದಲ್ಲಿರುವವರಿಗೆ ಗೌರವಾದರಗಳು ದೊರಕಲಿದೆ.

ವೃಷಭ: ರಾಜಕಾರಣಿಗಳಿಗೆ ಒತ್ತಡದ ದಿನ. ಸಾರ್ವಜನಿಕ ರಂಗದಲ್ಲಿ ಪುರಸ್ಕಾರ. ಧಾರ್ಮಿಕ ಕ್ಷೇತ್ರದಲ್ಲಿ ಆಸಕ್ತಿ. ವಿದ್ಯಾರ್ಥಿಗಳಿಗೆ ನೆಮ್ಮದಿಯ ದಿನ. ಆಹಾರ ಪದಾರ್ಥಗಳ ವ್ಯಾಪಾರಸ್ಥರಿಗೆ ಉತ್ತಮ ಲಾಭ.

ಮಿಥುನ: ಕಾರ್ಖಾನೆ ಕೆಲಸಗಾರರಿಗೆ ಸಮಾಧಾನಕರ ದಿನ. ನಿರುದ್ಯೋಗಿಗಳಿಗೆ ಪ್ರಯತ್ನಪೂರಕವಾದ ಸಫಲತೆ. ತಂದೆತಾಯಿಯಿಂದ ಪ್ರೋತ್ಸಾಹ ದೊರಕಲಿದೆ. ಹೊಸ ಉದ್ಯಮ ಆರಂಭಿಸಲು ಉತ್ತಮ ಕಾಲ.

ಕರ್ಕಾಟಕ: ಹೆಚ್ಚಿನ ಯಶಸ್ಸಿಗಾಗಿ ವಿದ್ಯಾರ್ಥಿಗಳು ಶ್ರಮವಹಿಸುವುದ ಅಗತ್ಯ. ಕಂಕಣ ಭಾಗ್ಯ ಕೂಡುವುದು. ಸಾಲದಿಂದ ಮುಕ್ತಿ. ಹೊಸ ಯೋಜನೆಯೊಂದನ್ನು ರೂಪಿಸುವ ಸಾಧ್ಯತೆ.

ಸಿಂಹ: ಕಲಾವಿದರಿಗೆ ಸಮಾಧಾನಕರ ದಿನ. ಗೌರವ ಪ್ರಾಪ್ತಿ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ಹಿರಿಯರ ಆರೋಗ್ಯದ ವಿಚಾರದಲ್ಲಿ ಅಸಡ್ಡೆ ತೋರಿಸುವುದು ಉಚಿತವಲ್ಲ.

ಕನ್ಯಾ: ಓದು ಅಥವಾ ಉದ್ಯೋಗ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ. ರೈತರಿಗೆ ಸಂತೋಷದ ದಿನ. ಹೊಸ ಆಯಾಮಕ್ಕೆ ಸಿದ್ಧತೆ. ಭೂಮಿ, ವಾಹನ ಇತ್ಯದಿಗಳ ಖರೀದಿಗೆ ಸಕಾಲ.

ತುಲಾ: ಕಾರ್ಯ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನಿರಾಳ. ಮಿತವ್ಯಯ ಮಾಡುವಿರಿ. ಆರ್ಥಿಕವಾಗಿ ಸಬಲರಾಗುವಿರಿ.

ವೃಶ್ಚಿಕ: ಆರ್ಥಿಕ ಲಾಭ. ಶುಭ ಸುದ್ದಿಯನ್ನು ಕೇಳುವಿರಿ. ಹಳೆಯ ವೈಮನಸ್ಸು ಮತ್ತೆ ಬುಗಿಲೇಳುವ ಸಾಧ್ಯತೆ. ಮಾನಸಿಕವಾಗಿ ತೊಳಲಾಟ.

ಧನು: ಉದ್ಯೋಗದಲ್ಲಿ ಯಶಸ್ಸು. ಕುಟುಂಬ ಸಂಬಂಧ ಕಲಹದಿಂದ ಮುಕ್ತಿ. ಆರೋಗ್ಯದಲ್ಲಿ ಚೇತರಿಕೆ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿಯ ಸಾಧ್ಯತೆ ಕಂಡುಬರುತ್ತಿದೆ.

ಮಕರ: ಸೈನಿಕರಿಗೆ, ರಕ್ಷಣಾ ಇಲಾಖೆಯಲ್ಲಿ ತೊಡಗಿರುವವರಿಗೆ ಸಂತೋಷದ ದಿನ. ಜೀವನದಲ್ಲಿ ಸಾಧನೆಯ ಆತ್ಮತೃಪ್ತಿ. ಸಾಂಸಾರಿಕ ಜೀವನದಲ್ಲಿ ಸಂತೋಷ.

ಕುಂಭ: ವಸ್ತ್ರಾದಿ ವ್ಯವಹಾರಸ್ಥರಿಗೆ ಅಧಿಕ ಲಾಭ. ನೌಕರಸ್ಥರಿಗೆ ಸಹೋದ್ಯೋಗಿಗಳಿಂದ ಸಂತೋಷದ ವಾತಾವರಣ. ವಿಶೇಷ ಸಮಾರಂಭದಲ್ಲಿ ಭಾಗಿ. ಆರೋಗ್ಯದಲ್ಲಿ ಕಿರಿಕಿರಿ.

ಮೀನ: ಮನಸ್ಸಿನಲ್ಲಿ ಗೊಂದಲಕರ ವಾತಾವರಣ ಕಂಡುಬರುತ್ತದೆ. ಸಂಸಾರದಲ್ಲಿ ಸಮಾಧಾನ ಮುಖ್ಯ. ಮಕ್ಕಳಿಂದ ಸಂತೋಷ. ದೃಢ ನಿರ್ಧಾರವಿರಲಿ.

ನಿಮ್ಮ ಜನ್ಮದಿನ 12-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಧಾರ್ಮಿಕ ಕಾರ್ಯದಲ್ಲಿ ಅತಿಯಾದ ಆಸಕ್ತಿ. ಸ್ವಯಂ ಉದ್ಯೋಗಿಗಳಿಗೆ ಸ್ವಲ್ಪಮಟ್ಟಿನ ಸಂಕಷ್ಟಗಳು ಎದುರಾಗುವ ಸಾಧ್ಯತೆ. ಕೀರ್ತಿ ಸ್ಥಾನಮಾನ ಪ್ರಾಪ್ತಿಯಾಗಲಿದೆ. ಮಹಿಳೆಯರಿಗೆ ಕಿರಿಕಿರಿಯ ದಿನಗಳು ಎದುರಾದೀತು.

ಪದಬಂಧ 4746


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಹುರಿಯಿದ್ದಾಗ ಕಾಣಿಸಿದ ಸ್ವೇಚ್ಛಾ ವೃತ್ತಿ (4)
3.ಕತೆಯೊಳಗೆ ಉಕ್ಕಿದ ಪ್ರೀತಿ! (4)
5.ಪುರಿಯಲ್ಲಿರುವ ಮುಂದಾಳು (3)
7.ಉದರಕ್ಕೆ ಅಂಟಿರುವ ಎದೆ! (2)
8.ಕಿತಾಪತಿ ಮಾಡುತ್ತಿರುವ ಯಜಮಾನ! (2)
11.ರಭಸದಲ್ಲಿರುವ ದ್ರವ (2)
13.ಆಸ್ಥಾನದಲ್ಲಿಯೇ ಸಿಕ್ಕ ಜಾಗ! (2)
14.ಹುಟ್ಟಿದ ಕಾಲದ ತಿಥಿ ನಕ್ಷತ್ರ ಇತ್ಯಾದಿ ತಿಳಿಸುವ ಪತ್ರಿಕೆ (3)
16.ಕುದುರೆಯ ಬಾಯಿಗೆ ಹಾಕುವ ಉಕ್ಕಿನ ತುಂಡು (4)
17.ರತ್ನಗಳನ್ನೊಳಗೊಂಡ ಸಮುದ್ರ (4)

ಮೇಲಿಂದ ಕೆಳಕ್ಕೆ

1.ಕೈಯನ್ನಿಟ್ಟು ಮಧ್ಯೆ ಪ್ರವೇಶಿಸುವಿಕೆ! (4)
2.ಪುಢಾರಿ ಬಳಿ ಕಾಣಿಸಿಕೊಂಡ ಶತ್ರು (2)
3.ಪಾಪ! ಕಮರಿಯಲ್ಲಿ ಬಿದ್ದಿದೆ ಈ ಆನೆ! (2)
4.ತೆರ ಬಾಕಿ ಉಳಿಸಿಕೊಂಡಿರುವ ದಡ್ಡ (3)
6.ಹೀಗೆ ಹೊಳಪು ಮಾಡು (3)
7.ಕೊನೆಗಿದ್ದ ಚಾರ ಮಾಡಿದ ಶುಶ್ರೂಷೆ (4)
9.ಕಾಣದಂತಾಗುವಿಕೆ (4)
10.ಕಡಿದಾದ ಕೊರಕಲು (3)
11.ವರ ನೋಡುತ್ತಿರುವ ಕೊಳ (4)
13.ಈತ ನೆಲೆಗೊಳಿಸಿದವನು (3)
14.ಕಾಜಾಣವನ್ನು ನೋಡುತ್ತಿರುವವನು ದಡ್ಡನಲ್ಲ! (2)
15.ಕಠೋರ ಕೆಲಸ ಮಾಡಿದ ಕೈಯಿದು (2)



4745ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಧೋಮುಖ 3.ಕಷಾಯ 5.ಗರ್ಭಿಣಿ 7.ಒಸಡು 8.ಸಮೂಹಗಾನ 11.ಗಲಾಟೆ 12.ಬತೇರಿ 15.ಪರೋಕ್ಷ 16.ಆಜುಬಾಜು

ಮೇಲಿಂದ ಕೆಳಕ್ಕೆ: 1.ಅಭ್ಯಂಗ 2.ಖರ್ಚು 3.ಕರಡು 4.ಯಮಶಿಕ್ಷೆ 6.ಣಿರಸ 7.ಒಣಹರಟೆ 9.ನವಾಬ 10.ಅನುಲೇಪ 11.ಗವಾಕ್ಷ 13.ರಿವಾಜು 14.ಮೆಳೆ

ಸುಡೊಕು 5132

6		4	9		7	3		8
				4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5131 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಬಿಜೆಪಿ ಶಾಸಕ ಬಿ.ಎಸ್‌. ಯಡಿಯೂರಪ್ಪ ಆಪ್ತರ ಮೇಲಿನ ಐಟಿ ದಾಳಿ ಗುಟ್ಟೇನು?

ಬಿಎಸ್‌ವೈ, ವಿಜಯೇಂದ್ರ ‘ಭಿನ್ನ’ ನಡೆ ತಡೆಯುವ ತಂತ್ರ

ಬೆಂಗಳೂರು: ‘ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಹಾಗೂ ಪಕ್ಷದ ರಾಜ್ಯಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಮುಂದಿನ ಸಂಭಾವ್ಯ ‘ಭಿನ್ನ’ ನಡೆಯನ್ನು ಆರಂಭದಲ್ಲೇ ಚಿವುಟಿ ಹಾಕಲು ಅವರ ಆಪ್ತರ ಮೇಲೆ ಆದಾಯ ತೆರಿಗೆ(ಐ.ಟಿ) ಇಲಾಖೆ ದಾಳಿ ನಡೆದಿರುವ ಸಾಧ್ಯತೆಯೇ ಹೆಚ್ಚಿದೆ..’

‘ಯಡಿಯೂರಪ್ಪ ಅವರ ಆಪ್ತರ ಮೇಲಿನ ಐಟಿ ದಾಳಿ ಗುಟ್ಟೇನು’ ಎಂಬ ವಿಷಯ ಕುರಿತು ಸೋಮವಾರ ನಡೆದ ‘ಪ್ರಜಾವಾಣಿ’ ಸಂವಾದದಲ್ಲಿ ಪಾಲ್ಗೊಂಡಿದ್ದ ವಿವಿಧ ಪ್ರಮುಖರು ವ್ಯಕ್ತಪಡಿಸಿದ ಅಭಿಪ್ರಾಯದ ಹೂರಣ ಇದು.

ಸಂಪೂರ್ಣ ಚರ್ಚೆ ವೀಕ್ಷಿಸಲು: www.facebook.com/prajavani.net


ಬ್ಲಾಕ್‌ಮೇಲ್ ರಾಜಕಾರಣ



ಕೇಂದ್ರದಲ್ಲಿರುವ ರಾಜ್ಯದ ಶಕ್ತಿಯೊಂದರ ಪ್ರಭಾವದಿಂದ ಯಡಿಯೂರಪ್ಪ ಅವರನ್ನು ರಾಜಕೀಯವಾಗಿ ತೆರೆಮರೆಗೆ ಸರಿಸುವ ಉದ್ದೇಶದಿಂದ ಈ ದಾಳಿ ನಡೆದಿದೆ. ಜನರನ್ನು ದಾರಿ ತಪ್ಪಿಸಲು ಮತ್ತು ಪಕ್ಷದೊಳಗಿನ ಶತ್ರುಗಳನ್ನು ಮಣಿಸಲು ಈ ರೀತಿಯ ತಂತ್ರ ನಡೆದಿರುವುದು ನಿಚ್ಚಳವಾಗಿ ಗೊತ್ತಾಗುತ್ತದೆ. ಗುತ್ತಿಗೆದಾರರು ತೆರಿಗೆ ಪಾವತಿಸುತ್ತಿಲ್ಲ ಎಂಬ ಕಾರಣಕ್ಕೆ ದಾಳಿ ನಡೆದಿದೆ ಎನ್ನುವುದು ಸರಿಯಲ್ಲ. ರಾಜ್ಯದಲ್ಲಿ ತೆರಿಗೆ ಪಾವತಿಸದ ಹತ್ತಾರು ಜನರು ಇದ್ದಾರೆ. ಅವರ ಮೇಲೆ ಏಕೆ ದಾಳಿ ನಡೆದಿಲ್ಲ? ಬಿಎಂಟಿಸಿ ನೌಕರರಾಗಿಯೇ ಉಮೇಶ್ ಉಳಿದಿದ್ದರೆ ಯಾವ ಐಟಿ ಅಧಿಕಾರಿಯೂ ದಾಳಿ ನಡೆಸುತ್ತಿರಲಿಲ್ಲ. ಅವರ ಬಳಿ ಸಿಕ್ಕಿರುವ ದಾಖಲೆಗಳ ಪ್ರಕಾರ ಗುತ್ತಿಗೆದಾರರು, ಅಧಿಕಾರಿಗಳು ಮತ್ತು ಯಡಿಯೂರಪ್ಪ ಮಧ್ಯೆ ಸಂಪರ್ಕ ಇರುವುದು ಗೊತ್ತಾಗಿದೆ. ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರನ್ನು ರಾಜಕೀಯವಾಗಿ ಸುಮ್ಮನಿರಿಸಲು ನೀಡಿರುವ ಸ್ಯಾಂಪಲ್ ಡೋಸ್ ಇದು. ಪಕ್ಷವನ್ನುಅಧಿಕಾರಕ್ಕೆ ತಂದ ನಾಯಕರನ್ನು ಮಣಿಸುವುದು ಯಾವ ಪಕ್ಷಕ್ಕೂ, ಯಾವ ದೇಶಕ್ಕೂ ಒಳ್ಳೆಯದಲ್ಲ. ಬಿಜೆಪಿ ಹೈಕಮಾಂಡ್‌ನದ್ದು ಬ್ಲಾಕ್ ಮೇಲ್ ರಾಜಕಾರಣ. ಇದರ ಪರಿಣಾಮ ಎದುರಿಸಬೇಕಾಗುತ್ತದೆ.

ಎಲ್.ಹನುಮಂತಯ್ಯ, ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ

ತನಿಖೆಯಿಂದಷ್ಟೇ ಸತ್ಯ ಹೊರಬೀಳಲಿದೆ



ದೇಶದ ಎಲ್ಲೆಡೆ ಅಕ್ಟೋಬರ್ ಮೊದಲ ವಾರದಲ್ಲಿ ಐಟಿ ದಾಳಿ ನಡೆದಿದೆ. ಅದೇ ರೀತಿ ಕರ್ನಾಟಕದಲ್ಲೂ ದಾಳಿ ನಡೆದಿದೆ. ಜಲಸಂಪನ್ಮೂಲ ಇಲಾಖೆಯ ವಿಶ್ವೇಶ್ವರಯ್ಯ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಸೇರಿದಂತೆ ವಿವಿಧ ನಿಗಮಗಳಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರ ನಡುವೆ ಅಕ್ರಮ ನಡೆದಿರಬಹುದು ಎನ್ನುವ ಜಾಡು ಹಿಡಿದು ದಾಳಿ ನಡೆದಿದೆಯೇ ಹೊರತು; ಇದಕ್ಕೂ ಯಡಿಯೂರಪ್ಪ ಅವರಿಗೂ ಯಾವುದೇ ಸಂಬಂಧ ಇಲ್ಲ. ರಾಜಕೀಯವಾಗಿ ಟಾರ್ಗೆಟ್ ನಡೆದಿದೆ ಎನ್ನುವುದು ಸರಿಯಲ್ಲ.

ಈ ಹಿಂದೆ ಸಿದ್ದರಾಮಯ್ಯ ಕಾಂಗ್ರೆಸ್ ಸರ್ಕಾರದಲ್ಲಿ ಅವರ ಆಪ್ತರಾಗಿ ಗುರುತಿಸಿಕೊಂಡಿದ್ದ ಎಂಜಿನಿಯರ್‌ಗಳಾದ ಚಿಕ್ಕರಾಯಪ್ಪ ಮತ್ತು ಜಯಚಂದ್ರ ಅವರ ಮೇಲೂ ಐಟಿ ದಾಳಿ ನಡೆದಿತ್ತು. ಹಾಗಂತ ತಳಕು ಹಾಕಲು ಸಾಧ್ಯವೇ? ಈಗ ನಡೆದಿರುವುದು ಆರೋಪವೇ ಹೊರತು; ಸತ್ಯ ಅಲ್ಲ. ತನಿಖೆಯಿಂದಷ್ಟೇ ಸತ್ಯ ಹೊರಬೀಳಲಿದೆ.

ನೆಲಮಂಗಲ ಸುರೇಶ್, ಬಿಜೆಪಿ ವಕ್ತಾರ

ಪ್ರಜಾವಾಣಿ ಸಂವಾದ


ತನಿಖಾ ವರದಿಗಳ ಮೇಲೆ ತನಿಖೆ ನಡೆಯಲಿ



ಉಪಚುನಾವಣೆ ಸಂದರ್ಭದಲ್ಲಿ ಯಡಿಯೂರಪ್ಪ ಅವರಿಗೆ ರಾಜಕೀಯ ಸಂದೇಶವೊಂದನ್ನು ರವಾನಿಸುವ ಉದ್ದೇಶದಿಂದ ಈ ದಾಳಿ ನಡೆದಿದೆ. ಸರ್ಕಾರದಲ್ಲಿ ಯಡಿಯೂರಪ್ಪ ಅವರ ಹಸ್ತಕ್ಷೇಪ ಇದೆಯೇ ? ಅಥವಾ ಪಕ್ಷಕ್ಕೆ ನಿಮ್ಮ ಸೇವೆ ಸಾಕು ಎನ್ನುವ ಉದ್ದೇಶವೇ ಎಂಬುದು ಸ್ಪಷ್ಟತೆ ಇಲ್ಲ. ಆದರೆ, ಯಾವುದೋ ರಾಜಕೀಯ ಸಂದೇಶವನ್ನು ಪರೋಕ್ಷವಾಗಿ ರವಾನಿಸಲಾಗಿದೆ. ಅಕ್ರಮಗಳನ್ನು ಬಯಲಿಗೆ ಎಳೆಯಲು ಎಸಿಬಿಯಂತಹ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಯಬೇಕೇ ಹೊರತು; ಆದಾಯ ತೆರಿಗೆ ಅಧಿಕಾರಿಗಳಿಂದ ಅಲ್ಲ. ಇಲ್ಲಿಯವರೆಗಿನ ತನಿಖಾ ವರದಿಗಳ ಮೇಲೆ ತನಿಖೆ ನಡೆಸುವ ಅಗತ್ಯವಿದೆ. ಈ ದಾಳಿ ರಾಜಕೀಯವೇ, ಉದ್ದೇಶಪೂರ್ವಕವಾಗಿ ನಡೆದಿದೆಯೇ ಎಂಬ ಸತ್ಯಾಂಶ ಹೊರಬರಬೇಕು. ಈ ದಾಳಿ ಬಗ್ಗೆ ಸ್ವಪಕ್ಷೀಯರೇ ಆರೋಪ ಮಾಡುತ್ತಿದ್ದು ಇದರಲ್ಲಿ ರಾಜಕೀಯವೂ ಅಡಗಿದೆ.

ನಾರಾಯಣ ಎ., ರಾಜಕೀಯ ವಿಶ್ಲೇಷಕ

ಜನರ ದಿಕ್ಕುತಪ್ಪಿಸುವ ಯತ್ನ



ದೊಡ್ಡ ಮಟ್ಟದ ಗುತ್ತಿಗೆದಾರರು ಅಕ್ರಮದಲ್ಲಿ ಸಿಲುಕಿ ಕೋರ್ಟ್ ಮೆಟ್ಟಿಲು ಏರಿದಾಗ ಅಧಿಕಾರಿಗಳೇ ಪೂರಕ ಮಾಹಿತಿ ಒದಗಿಸಿಕೊಡುತ್ತಾರೆ. ಯಡಿಯೂರಪ್ಪ ಅವರ ಬಳಿ ಆಪ್ತನಾಗಿದ್ದ ಸಾಮಾನ್ಯ ಚಾಲಕರೊಬ್ಬರ ಬಳಿ ಟೆಂಡರ್‌ಗೆ ಸಂಬಂಧಿಸಿದ ಎಲ್ಲ ದಾಖಲೆಗಳು ಸಿಕ್ಕಿರುವುದರಿಂದ ಇದಕ್ಕೆ ಬೇರೆ ಆಯಾಮವೇ ಇದೆ. ಯಾರೋ ಒಬ್ಬರನ್ನು ಗುರಿಯಾಗಿಸಿಕೊಂಡು ನಡೆದಿರುವ ದಾಳಿ ಇದಾಗಿದೆ. ಹಿಂದೆ ವಿರೋಧ ಪಕ್ಷಗಳನ್ನು ಮಣಿಸಲು ದಾಳಿ ನಡೆಯುತ್ತಿತ್ತು. ಈ ರೀತಿಯ ದಾಳಿ ಚುನಾವಣೆ ಸಂದರ್ಭದಲ್ಲಿ ಮಾತ್ರ ನಡೆದಿರುವುದು ಜನರನ್ನು ದಿಕ್ಕುತಪ್ಪಿಸುವ ಹುನ್ನಾರವೂ ಹೌದು.

ವೆಂಕಟರಾವ್ ನಾಡಗೌಡ, ಜೆಡಿಎಸ್ ಶಾಸಕ

‘ವರಿಷ್ಠರು ಒಪ್ಪಿದರೆ ರಾಜ್ಯ ರಾಜಕಾರಣಕ್ಕೆ’

ಶಿರಸಿ: ‘ಪಕ್ಷದ ವರಿಷ್ಠರು ಒಪ್ಪಿದರೆ ರಾಜ್ಯ ರಾಜಕಾರಣ ಪ್ರವೇಶಿಸುತ್ತೇನೆ’ ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಮುಂಬರುವ ವಿಧಾನಸಭೆ ಚುನಾವಣೆಗೆ ಶಿಕಾರಿಪುರದಿಂದ ಸ್ಪರ್ಧಿಸುತ್ತೀರಾ’ ಎಂಬ ಪ್ರಶ್ನೆಗೆ ಹೀಗೆ ಪ್ರತಿಕ್ರಿಯಿಸಿದರು.

‘ಯಡಿಯೂರಪ್ಪ ಹಾಗೂ ನನ್ನನ್ನು ಬಿಜೆಪಿ ಬೆಳೆಸಿದೆ. ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಪಕ್ಷ ನಮಗೆ ತಾಯಿಯಂತೆ. ಪಕ್ಷದ ತೀರ್ಮಾನದಂತೆ ಮುಂದುವರಿಯುತ್ತೇನೆ’ ಎಂದರು.

‘ಯಡಿಯೂರಪ್ಪ ಆಪ್ತರ ಮನೆ ಮೇಲೆ ಐಟಿ ದಾಳಿ ನಡೆದಿದ್ದು ರಾಜಕೀಯ ಷಡ್ಯಂತ್ರವಲ್ಲ. ಅದು ತನಿಖಾದಳಗಳ ಸಹಜ ಪ್ರಕ್ರಿಯೆ. ತನಿಖೆ ಪಾರದರ್ಶಕವಾಗಿ ನಡೆಯಲಿ. ಆ ಬಳಿಕ ಸತ್ಯಾಸತ್ಯತೆ ಸ್ಪಷ್ಟವಾಗಲಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪ ಸತ್ಯಕ್ಕೆ ದೂರವಾಗಿದೆ’ ಎಂದು ಹೇಳಿದರು.

‘ಉದ್ಯಮಿಯಾಗು– ಉದ್ಯೋಗ ನೀಡು’ ಕಾರ್ಯಾಗಾರ

‘ರಾಜ್ಯಕ್ಕೆ ಹೊಸ ಉದ್ಯೋಗ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಹೊಸ ಉದ್ಯೋಗ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ರೂಪಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಸೋಮವಾರ ನಗರದಲ್ಲಿ ಆಯೋಜಿಸಿದ್ದ ‘ಉದ್ಯಮಿಯಾಗು–ಉದ್ಯೋಗ ನೀಡು’ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ‘ಗರಿಷ್ಠ ಉದ್ಯೋಗಗಳನ್ನು ಸೃಷ್ಟಿಸುವವರಿಗೆ ಹೆಚ್ಚಿನ ಉತ್ತೇಜನ ನೀಡುವುದು ಉದ್ಯೋಗ ನೀತಿಯ ಆಶಯವಾಗಿದೆ. ಹೆಚ್ಚು ಉದ್ಯೋಗಗಳನ್ನು ನೀಡುವುದು ಇಂದಿನ ಅಗತ್ಯವಾಗಿದೆ’ ಎಂದು ವಿವರಿಸಿದರು.



ಬೆಂಗಳೂರಿನಲ್ಲಿ ಸೋಮವಾರ ನಡೆದ ‘ಉದ್ಯಮಿಯಾಗು–ಉದ್ಯೋಗ ನೀಡು’ ಕಾರ್ಯಾಗಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಸಚಿವರಾದ ಹಾಲಪ್ಪ ಆಚಾರ್, ಎಸ್‌.ಟಿ. ಸೋಮಶೇಖರ್, ಡಾ.ಸಿ.ಎನ್‌. ಅಶ್ವತ್ಥ ನಾರಾಯಣ, ಶಾಸಕ ಬಿ.ಎಸ್. ಯಡಿಯೂರಪ್ಪ, ಸಚಿವ ಮುರುಗೇಶ ಆರ್. ನಿರಾಣಿ ಇದ್ದರು– ಪ್ರಜಾವಾಣಿ ಚಿತ್ರ

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 75 ಸಾವಿರ ಮಕ್ಕಳಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡಲಾಗುವುದು. ಈ ಮೂಲಕ ಸಮಾಜದ ಎಲ್ಲ ವರ್ಗದವರು ಉದ್ಯಮಿಗಳಾಗಬೇಕು ಎನ್ನುವ ಆಶಯವನ್ನು ಸರ್ಕಾರ ಹೊಂದಿದೆ’ ಎಂದರು.

‘ಇದೇ ರೀತಿ, ದೇಶದಲ್ಲಿ ಮೊದಲ ಬಾರಿ ಸಂಶೋಧನೆ ಮತ್ತು ಅಭಿವೃದ್ಧಿ ನೀತಿಯನ್ನು ರಾಜ್ಯ ಸರ್ಕಾರ ರೂಪಿಸುತ್ತಿದೆ. ಎಲ್ಲ ವಲಯಗಳಲ್ಲಿ ಸಂಶೋಧನೆಗಳು ನಡೆಯಬೇಕಾಗಿವೆ. ಈಗಾಗಲೇ ವಿದ್ಯುನ್ಮಾನ, ಬಾಹ್ಯಾಕಾಶ ತಂತ್ರಜ್ಞಾನ ಸೇರಿದಂತೆ 180ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ರಾಜ್ಯದಲ್ಲಿವೆ’ ಎಂದು ಹೇಳಿದರು.

‘ರಾಜ್ಯದಲ್ಲಿ ಅತಿ ಹೆಚ್ಚು ನವೋದ್ಯಮಗಳಿವೆ. ಇವುಗಳಲ್ಲಿ ಹೆಚ್ಚಿನವು ಬೆಂಗಳೂರಿನಲ್ಲಿವೆ. 488 ನವೋದ್ಯಮಗಳಲ್ಲಿ ಶೇ 30ರಷ್ಟು ಮಹಿಳೆಯರಿಗೆ ಅವಕಾಶ ಕಲ್ಪಿಸಲಾಗಿದೆ. ಶೇ 24ರಷ್ಟು ನವೋದ್ಯಮಗಳು ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಸ್ಥಾಪಿಸಲಾಗಿದೆ. ಇದೊಂದು ದೊಡ್ಡ ಸಾಧನೆ. ಯುವಕರು ನವೋದ್ಯಮ ಆರಂಭಿಸಿದರೆ ₹50 ಲಕ್ಷ ಆರ್ಥಿಕ ನೆರವು ಒದಗಿಸಲಾಗುವುದು. ಈ ರೀತಿಯ ನೀತಿ ಯಾವ ರಾಜ್ಯದಲ್ಲಿಯೂ ಇಲ್ಲ’ ಎಂದು ಹೇಳಿದರು.

ಶಾಸಕ ಬಿ.ಎಸ್. ಯಡಿಯೂರಪ್ಪ ಮಾತನಾಡಿ, ‘ಕರ್ನಾಟಕವು ಉದ್ಯಮ ಸ್ನೇಹಿಯಾಗಿದೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸುವ ಮೂಲಕ ರಾಜ್ಯವನ್ನು ಹೂಡಿಕೆದಾರರ ತಾಣವನ್ನಾಗಿ ಪರಿವರ್ತಿಸಲಾಗಿದೆ. ಸುಲಲಿತ ಉದ್ಯಮಗಳನ್ನು ನಡೆಸುವ ವಾತಾವರಣವನ್ನುರಾಜ್ಯದಲ್ಲಿ ಸೃಷ್ಟಿಸಲಾಗಿದೆ’ ಎಂದು ಪ್ರತಿಪಾದಿಸಿದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ಆರ್. ನಿರಾಣಿ ಮಾತನಾಡಿ, ‘ವಿದೇಶಿ ಬಂಡವಾಳ ಆಕರ್ಷಿಸುವಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. 2022ರಲ್ಲಿ ನವೆಂಬರ್‌ನಲ್ಲಿ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ ಆಯೋಜಿಸುವ ಮೂಲಕ ಹತ್ತು ಲಕ್ಷ ಉದ್ಯೋಗ ಸೃಷ್ಟಿಗೆ ಯೋಜನೆ ರೂಪಿಸಲಾಗುವುದು’ ಎಂದು ತಿಳಿಸಿದರು. ಮೊರೊಕ್ಕೊ ರಾಯಭಾರಿ ಮೊಹಮ್ಮದ್ ಮಲಿಕಿ ಇದ್ದರು.

ರಾಮನಗರದಲ್ಲಿ ‘ಸ್ಕಿಲ್ ಹಬ್’ ಸ್ಥಾಪನೆ

‘ಲಭ್ಯವಿರುವ ಉದ್ಯೋಗಾವಕಾಶಗಳ ಬಗ್ಗೆ ಯುವಕರಿಗೆ ಮಾಹಿತಿ ನೀಡಲು ಮತ್ತು ಅಗತ್ಯ ತರಬೇತಿ ನೀಡಲು ರಾಮನಗರದಲ್ಲಿ ಸ್ಕಿಲ್ ಹಬ್ ಸ್ಥಾಪಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

‘ಉದ್ಯಮರಂಗವು ಎದುರಿಸುತ್ತಿರುವ ಸಮಸ್ಯೆಗಳಿಗೆಲ್ಲ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪರಿಹಾರವಿದೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಹಲವು ವೃತ್ತಿಗಳಿಗೆ ಮಕ್ಕಳು ತೆರೆದುಕೊಳ್ಳುವಂತೆ ಮಾಡುವ ಸದಾಶಯವನ್ನು ಈ ನೀತಿ ಹೊಂದಿದೆ’ ಎಂದು ತಿಳಿಸಿದರು.

ಶುಲ್ಕ ಕಟ್ಟಲಾಗದೇ ಪರಿತಪಿಸಿದ್ದ ಗ್ರೀಷ್ಮಾ ರಾಜ್ಯಕ್ಕೆ ಪ್ರಥಮ

ಒಂದನೇ ಪುಟದಿಂದ...

ಶೇ 55.54 ಫಲಿತಾಂಶ: ‘ಸೆಪ್ಟೆಂಬರ್ 27 ಹಾಗೂ 29 ರಂದು ನಡೆದಿದ್ದ ಪೂರಕ ಪರೀಕ್ಷೆಗೆ ಒಟ್ಟು 59,155 ಮಂದಿ ಹಾಜರಾಗಿದ್ದರು. ಈ ಪೈಕಿ 29,522 ವಿದ್ಯಾರ್ಥಿಗಳು (ಶೇ 55.54) ಉತ್ತೀರ್ಣರಾಗಿದ್ದಾರೆ. ಈ ಬಾರಿ 17,973 ಬಾಲಕಿಯರು ಪರೀಕ್ಷೆ ಬರೆದಿದ್ದರು. ಇದರಲ್ಲಿ 10,290 ಜನ (ಶೇ 57.25) ತೇರ್ಗಡೆಯಾಗಿದ್ದಾರೆ. 35,182 ಬಾಲಕರಲ್ಲಿ 19,232 ಜನ (ಶೇ 54.66) ಉತ್ತೀರ್ಣರಾಗಿದ್ದಾರೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸಚಿವ ಬಿ.ಸಿ.ನಾಗೇಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

‘3,232 ಸರ್ಕಾರಿ ಶಾಲೆಗಳ 27,313 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದರು. ಈ ಪೈಕಿ 15,855 ಮಂದಿ ತೇರ್ಗಡೆ ಹೊಂದಿದ್ದಾರೆ. ನಗರಕ್ಕಿಂತ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಉತ್ತಮ ಸಾಧನೆ ಮಾಡಿದ್ದಾರೆ’ ಎಂದು ಹೇಳಿದರು.

ಪಿಯುಸಿ ಪೂರಕ ಪರೀಕ್ಷೆ ಇಲ್ಲ: ‘ಪಿಯುಸಿ ಪೂರಕ ಪರೀಕ್ಷೆಗಳನ್ನು ನಡೆಸುವ ಆಲೋಚನೆ ಸದ್ಯಕ್ಕಂತೂ ಇಲ್ಲ. ಕೇವಲ 12 ಸಾವಿರ ಮಂದಿಗಾಗಿ ಅಗತ್ಯ ಮೂಲ ಸೌಕರ್ಯ ಸೃಜಿಸಿ ಪರೀಕ್ಷೆ ಆಯೋಜಿಸುವುದು ತುಂಬಾ ಕಷ್ಟ’ ಎಂದು ತಿಳಿಸಿದರು.

‘ಇಷ್ಟೆಲ್ಲಾ ಖರ್ಚು ಮಾಡಿ ಪರೀಕ್ಷೆ ನಡೆಸಿದರೂ ಅದರಲ್ಲಿ ಉತ್ತೀರ್ಣರಾದವರಿಗೆ ಕಾಲೇಜುಗಳಲ್ಲಿ ದಾಖಲಾತಿ ಪಡೆಯುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಪರೀಕ್ಷೆ ನಡೆಸದಿರಲು ತೀರ್ಮಾನಿಸಿದ್ದೇವೆ.ಪಠ್ಯಕ್ರಮ ಕಡಿತಗೊಳಿಸುವ ಆಲೋಚನೆ ಇಲ್ಲ. ಪಠ್ಯಕ್ರಮ ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಶನಿವಾರ ಹಾಗೂ ಭಾನುವಾರವೂ ತರಗತಿಗಳನ್ನು ನಡೆಸಲು ಶಿಕ್ಷಕರೇ ಉತ್ಸುಕರಾಗಿದ್ದಾರೆ’ ಎಂದೂ ಹೇಳಿದರು.

‘ಒಪ್ಪಿಗೆ ಸಿಕ್ಕರೆ 1 ರಿಂದ 5ನೇ ತರಗತಿ ಆರಂಭ’

‘ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಒಪ್ಪಿಗೆ ನೀಡಿದರೆ ದಸರಾ ರಜೆಯ ಬಳಿಕ 1 ರಿಂದ 5ನೇ ತರಗತಿ ಆರಂಭಿಸಲಾಗುತ್ತದೆ. ಒಪ್ಪಿಗೆ ನಿರಾಕರಿಸಿದರೆ 3 ರಿಂದ 5ನೇ ತರಗತಿ ಆರಂಭಕ್ಕೆ ಮನವಿ ಮಾಡುತ್ತೇವೆ. ಶಾಲಾ ಆರಂಭಕ್ಕೆ ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಇದೇ 21ರಿಂದ ಮಧ್ಯಾಹ್ನದ ಬಿಸಿಯೂಟವನ್ನೂ ಪ್ರಾರಂಭಿಸಲಾಗುತ್ತಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ನಾಗೇಶ್ ಮಾಹಿತಿ ನೀಡಿದರು.

‘6 ರಿಂದ 10ನೇ ತರಗತಿಯ ಶಾಲೆಗಳು ಸುಸೂತ್ರವಾಗಿ ನಡೆಯುತ್ತಿವೆ. ಕೆಲ ಶಾಲೆಗಳಲ್ಲಿ ಶೇ 90ಕ್ಕಿಂತ ಹೆಚ್ಚು ಹಾಜರಾತಿ ದಾಖಲಾಗುತ್ತಿದೆ. 1 ರಿಂದ 5ನೇ ತರಗತಿಗಳನ್ನೂ ಆರಂಭಿಸುವಂತೆ ಮಕ್ಕಳೇ ಮನವಿ ಮಾಡುತ್ತಿದ್ದಾರೆ. ಶಾಲಾ ಶುಲ್ಕದ ವಿಚಾರವಾಗಿ ಖಾಸಗಿ ಶಾಲೆಗಳ ಆಡಳಿತ ಮಂಡಳಿ ಹಾಗೂ ಪೋಷಕರ ನಡುವೆ ಉದ್ಭವಿಸಿರುವ ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತದೆ. ನ್ಯಾಯಾಲಯದ ತೀರ್ಪು ಹೊರಬಿದ್ದ ಬಳಿಕ ನಿರ್ಧಾರ ಪ್ರಕಟಿಸುತ್ತೇವೆ’ ಎಂದು ಹೇಳಿದರು.

ಮಾಧ್ಯಮವಾರು ಫಲಿತಾಂಶ (ಶೇಕಡಾವಾರು)

ಮಾಧ್ಯಮ	ಹಾಜರಾದವರು	ಉತ್ತೀರ್ಣ	ಫಲಿತಾಂಶ
ಕನ್ನಡ	42,971	24,929	58.01
ಇಂಗ್ಲಿಷ್	6,622	2,744	41.44
ಉರ್ದು	2,673	1,390	52.00
ಮರಾಠಿ	848	445	52.48
ತೆಲುಗು	21	5	23.81
ತಮಿಳು	9	3	33.33
ಹಿಂದಿ	11	6	54.55

ಹಿಂದಿನ ಮೂರು ವರ್ಷಗಳ ಫಲಿತಾಂಶ

ವರ್ಷ	ಹಾಜರಾದವರು	ಉತ್ತೀರ್ಣ	ಶೇಕಡಾ
2018–19	1,92,181	81,613	42.47
2019–20	2,13,955	1,09,719	51.28
2020–21	53,155	29,522	55.54

ನಗರ ಮತ್ತು ಗ್ರಾಮೀಣವಾರು ಫಲಿತಾಂಶ

ಹಾಜರಿ	ಉತ್ತೀರ್ಣ	ಶೇಕಡಾ
ನಗರ		
22,757	10,968	48.2
ಗ್ರಾಮೀಣ		
30,398	18,554	61.04

ಶಾಲಾವಾರು ಫಲಿತಾಂಶ

ಶಾಲೆಯ ವಿಧ	ಒಟ್ಟು ಶಾಲೆ	ಹಾಜರಾದವರು	ಉತ್ತೀರ್ಣ	ಶೇಕಡಾ
ಸರ್ಕಾರಿ	3,232	27,313	15,855	58.05
ಅನುದಾನಿತ	2,355	16,736	9,050	54.08
ಅನುದಾನರಹಿತ	2,151	9,106	4,617	50.7

ಶಿಕ್ಷಕರ ವರ್ಗಾವಣೆ ವಿಷಯ ನ್ಯಾಯಾಲಯದಲ್ಲಿದೆ. ನ್ಯಾಯಾಲಯದ ಆದೇಶ ಹೊರಬಿದ್ದ ಬಳಿಕ ವರ್ಗಾವಣೆ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು

ಬಿ.ಸಿ. ನಾಗೇಶ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

ಜುಲೈನಲ್ಲಿ ಪರೀಕ್ಷೆ ಬರೆಯಲು ಅವಕಾಶ ಸಿಗದಿದ್ದಾಗ ಬೇಸರವಾಗಿತ್ತು. ಪೂರಕ ಪರೀಕ್ಷೆ ಬರೆದಿದ್ದಕ್ಕೂ ಸಾರ್ಥಕವೆನಿಸಿದೆ. ಅಕ್ಕನ ನೆರವಿನೊಂದಿಗೆ ಮನೆಯಲ್ಲೇ ಓದಿ ಪರೀಕ್ಷೆ ಬರೆದಿದ್ದೆ

ಗ್ರೀಷ್ಮಾ, ವಿದ್ಯಾರ್ಥಿನಿ

ಉಸ್ತುವಾರಿ ಕಾರ್ಯದರ್ಶಿಗಳ ನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸದ ಕುಲದೀಪ್ ರೈ ಶರ್ಮಾ ಮತ್ತು ಶಾಸಕ ರಾಮಿಂದರ್ ಸಿಂಗ್ ಆವ್ಲಾ ಅವರನ್ನು ಕರ್ನಾಟಕ ಉಸ್ತುವಾರಿ ಕಾರ್ಯದರ್ಶಿಗಳನ್ನಾಗಿ ಕಾಂಗ್ರೆಸ್ ಪಕ್ಷವು ಸೋಮವಾರ ನೇಮಕ ಮಾಡಿದೆ.

ಶರ್ಮಾ ಅವರು ಅಂಡಮಾನ್ ನಿಕೋಬಾರ್ ಲೋಕಸಭೆ ಕ್ಷೇತ್ರ ಪ್ರತಿನಿಧಿಸುತ್ತಿದ್ದು, ಆವ್ಲಾ ಅವರು ಪಂಜಾಬ್‌ನ ಜಲಾಲಾಬಾದ್ ವಿಧಾನಸಭೆ ಕ್ಷೇತ್ರದ ಶಾಸಕ. ಈ ಇಬ್ಬರನ್ನೂ ಪಕ್ಷದ ರಾಜ್ಯ ಉಸ್ತುವಾರಿಯಾಗಿರುವ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರೊಂದಿಗೆ ಕಾರ್ಯ ನಿರ್ವಹಿಸಲು ಸೂಚಿಸಿ ನೇಮಕ ಮಾಡಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

‘ಏಳನೇ ವೇತನ ಆಯೋಗಕ್ಕೆ ಆಗ್ರಹಿಸಿ ಹೋರಾಟ’

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಏಳನೇ ವೇತನ ಆಯೋಗವನ್ನು ತ್ವರಿತವಾಗಿ ರಚಿಸುವಂತೆ ಆಗ್ರಹಿಸಿ ಹೋರಾಟ ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ನಿರ್ಧರಿಸಿದೆ.

ಭಾನುವಾರ ನಡೆದ ಸಂಘದ ರಾಜ್ಯ ಪರಿಷತ್ ಮಹಾಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಹಳೆಯ ಪಿಂಚಣಿ ಯೋಜನೆಯ ಮರು ಜಾರಿ, ಖಾಲಿ ಇರುವ 2.63 ಲಕ್ಷ ಹುದ್ದೆಗಳ ಭರ್ತಿ, ಶಿಕ್ಷಕರ ವರ್ಗಾವಣೆಗೆ ಕಾಯ್ದೆ ಜಾರಿ, ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿ ಸೇರಿದಂತೆ ಸರ್ಕಾರಿ ನೌಕರರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೂರು ಹಂತದ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನವೆಂಬರ್‌ನಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗುವುದು. ಡಿಸೆಂಬರ್‌ನಲ್ಲಿ ಮನವಿ ತಹಶೀಲ್ದಾರ್‌ಗಳ ಮೂಲಕ ಮನವಿ ಸಲ್ಲಿಸಲಾಗುವುದು.

2022ರ ಜನವರಿಯಲ್ಲಿ ಮೂರು ದಿನಗಳ ಕಾಲ ಕಪ್ಪುಪಟ್ಟಿ ಧರಿಸಿ ಸಾಂಕೇತಿಕ ಪ್ರತಿಭಟನೆ, ನಂತರವೂ ಬೇಡಿಕೆ ಈಡೇರದಿದ್ದರೆ ತೀವ್ರ ಹೋರಾಟ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.



ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಋತುರಾಜ್ ಅವಸ್ಥಿ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಸೋಮವಾರ ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಮಾಣವಚನ ಬೋಧಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು. –ಪ್ರಜಾವಾಣಿ ಚಿತ್ರ

‘ರಾಷ್ಟ್ರ ರಾಜಕಾರಣದ ಚರ್ಚೆಯೇ ಆಗಿಲ್ಲ’

ಬೆಂಗಳೂರು : ‘ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಇತ್ತೀಚೆಗೆ ಭೇಟಿಮಾಡಿದ್ದ ಸಂದರ್ಭದಲ್ಲಿ ರಾಷ್ಟ್ರ ರಾಜಕಾರಣಕ್ಕೆ ತೆರಳುವ ವಿಷಯ ಚರ್ಚೆಗೇ ಬಂದಿಲ್ಲ. ರಾಷ್ಟ್ರ ರಾಜಕೀಯಕ್ಕೆ ಬರಬೇಕೆಂಬ ಆಹ್ವಾನ ತಿರಸ್ಕರಿಸಿದ್ದೇನೆ ಎಂಬ ವರದಿಗಳಲ್ಲಿ ಸತ್ಯಾಂಶವಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಸೋನಿಯಾ ಗಾಂಧಿ ಅವರು ರಾಷ್ಟ್ರ ರಾಜಕಾರಣಕ್ಕೆ ಬರುವಂತೆ ನನಗೆ ಆಹ್ವಾನವನ್ನು ನೀಡಿಯೇ ಇಲ್ಲ. ಆ ಕುರಿತು ಪ್ರಸ್ತಾಪವೂ ಆಗಿಲ್ಲ. ಆದರೂ, ಆಹ್ವಾನವನ್ನು ತಿರಸ್ಕರಿಸಿರುವುದರಿಂದ ಸೋನಿಯಾ ಅವರಿಗೆ ಬೇಸರವಾಗಿದೆ ಎಂದರೆ ಏನು ಉತ್ತರ ಹೇಳುವುದು’ ಎಂದು ಕೇಳಿದರು.

ಚರ್ಚೆಯಾಗಿದ್ದರೆ ತಾನೇ ಮನಸ್ತಾಪ ಆಗುವುದು? ಸ್ಪಷ್ಟವಾಗಿ ಹೇಳಿದ ಬಳಿಕವೂ ಕಲ್ಪಿತ ವರದಿಗಳು ಬರುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ರಾಹುಲ್ ಗಾಂಧಿಯವರೇ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸಬೇಕು ಎಂಬುದನ್ನು ದೀರ್ಘ ಕಾಲದಿಂದ ಹೇಳುತ್ತಾ ಬಂದಿದ್ದೇನೆ. ಈಗಲೂ ಆದಷ್ಟು ಬೇಗ ಅವರೇ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಬೇಕು ಎಂದು ಸೋನಿಯಾ ಅವರ ಬಳಿ ಹೇಳಿದ್ದೇನೆ’ ಎಂದರು.

‘ಸಿದ್ದರಾಮಯ್ಯ ರಾಜಕೀಯ ಪುಕ್ಕಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ರಾಜಕೀಯ ಪುಕ್ಕಲ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸೋಮವಾರ ಇಲ್ಲಿ ಲೇವಡಿ ಮಾಡಿದರು.

‘ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ ನವದೆಹಲಿಗೆ ಕರೆಸಿಕೊಂಡ ಸಂದರ್ಭದಲ್ಲಿ, ರಾಷ್ಟ್ರ ರಾಜಕಾರಣಕ್ಕೆ ಬಂದರೆ, ತಮ್ಮನ್ನೇ ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಬೇಕು ಎಂದು ಹೇಳುವ ಧೈರ್ಯವನ್ನು ಸಿದ್ದರಾಮಯ್ಯ ತೋರಿಸಬೇಕಿತ್ತು’ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರನ್ನು ಭ್ರಷ್ಟ ಎಂದು ದಿನವೂ ಸಿದ್ದರಾಮಯ್ಯ ಮತ್ತು ಎಚ್.ಡಿ.ಕುಮಾರಸ್ವಾಮಿ ನಿಂದಿಸುತ್ತಿದ್ದರು. ಈಗ ಆದಾಯ ತೆರಿಗೆ ಇಲಾಖೆಯ ದಾಳಿಯಾಗುತ್ತಿದ್ದಂತೆ, ಅದರಲ್ಲೇನೋ ರಾಜಕೀಯ ವಾಸನೆ ಇದೆ. ವಿಜಯೇಂದ್ರ, ಯಡಿಯೂರಪ್ಪ ಅವರನ್ನು ಹಣಿಯುವ ತಂತ್ರಗಾರಿಕೆ ನಡೆದಿದೆ ಎಂದಿರುವುದು ಬೂಟಾಟಿಕೆಯ ಹೇಳಿಕೆ. ತಾವು ಭ್ರಷ್ಟಾಚಾರದ ಪರವೋ? ವಿರುದ್ಧವೋ? ಎಂಬುದನ್ನು ಮೊದಲು ಇಬ್ಬರೂ ಸ್ಪಷ್ಟಪಡಿಸಬೇಕು’ ಎಂದು ವಿಶ್ವನಾಥ್ ವಾಗ್ದಾಳಿ ನಡೆಸಿದರು.

‘ವೀರಶೈವ ಲಿಂಗಾಯತರ ಅನುಕಂಪ ಗಿಟ್ಟಿಸಲಿಕ್ಕಾಗಿ ಇಬ್ಬರೂ ನೀಡುತ್ತಿರುವ ಹೇಳಿಕೆಯಿಂದ ಕಾಂಗ್ರೆಸ್, ಜೆಡಿಎಸ್‌ಗೆ ಕಿಂಚಿತ್ತೂ ಲಾಭವಾಗದು. ಬಿಜೆಪಿಗೆ ನಷ್ಟವೂ ಆಗದು. ಏಕೆಂದರೆ ವೀರಶೈವ ಲಿಂಗಾಯತರು ಬುದ್ಧಿವಂತರು’ ಎಂದರು.

‘ಸಿದ್ದರಾಮಯ್ಯ ಅಧಿಕಾರದಲ್ಲಿದ್ದಾಗ ನಿಷ್ಕ್ರಿಯಗೊಳಿಸಿದ ಲೋಕಾಯುಕ್ತ ಸಂಸ್ಥೆ ಹಾಗೂ ಯಶಸ್ವಿನಿ ರೈತ ಆರೋಗ್ಯ ವಿಮೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತೆ ಸದೃಢಗೊಳಿಸಬೇಕು. ಅವರ ತಂದೆ ಅಧಿಕಾರದಲ್ಲಿದ್ದಾಗ ರೂಪುಗೊಂಡ ಸಂಸ್ಥೆಗೆ ಹಿಂದಿನ ಅಧಿಕಾರವನ್ನೇ ನೀಡಬೇಕು. ಭ್ರಷ್ಟರಿಗೆ ಕೊಂಚವಾದರೂ ಭಯವಿರಬೇಕು’ ಎಂದು ವಿಶ್ವನಾಥ್ ಹೇಳಿದರು.

‘ರಮೇಶ್ ಕುಮಾರ್ ದೊಡ್ಡ ಭ್ರಷ್ಟ’

‘ತಮ್ಮಷ್ಟು ಪ್ರಾಮಾಣಿಕ ಮತ್ತೊಬ್ಬನಿಲ್ಲ ಎಂಬುದಾಗಿ ಕಾಂಗ್ರೆಸ್ ಶಾಸಕ ರಮೇಶ್ ಕುಮಾರ್ ಎಲ್ಲೆಡೆಯೂ ಹೇಳಿಕೊಳ್ಳುತ್ತಾರೆ. ಆದರೆ, ಅವರಷ್ಟು ಭ್ರಷ್ಟ ಮತ್ತೊಬ್ಬರಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸೋಮವಾರ ಇಲ್ಲಿ ಕಿಡಿಕಾರಿದರು.

‘ಅರಣ್ಯ ಭೂಮಿಯನ್ನೇ ನುಂಗಿದ ಭ್ರಷ್ಟ ರಮೇಶ್ ಕುಮಾರ್. ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಆರೋಗ್ಯ ಸಚಿವನಾಗಿದ್ದಾಗ; ಯಶಸ್ವಿನಿ ರೈತ ಆರೋಗ್ಯ ವಿಮಾ ಯೋಜನೆಯನ್ನೇ ಮುಚ್ಚಿ ರೈತರಿಗೆ ಅನ್ಯಾಯ ಮಾಡಿದಾತ’ ಎಂದು ಗುಡುಗಿದರು.

ಅನುಪಮಾ ಹೊಸಕೆರೆಯಿಂದ 10 ಸಾವಿರ ಗೊಂಬೆಗಳ ಪ್ರದರ್ಶನ

ಬೊಂಬೆಯಾಟಕ್ಕೆ ಆಧುನಿಕತೆಯ ಮೆರಗು

• ಪಲ್ಲವಿ ಕೆ.

ಬೆಂಗಳೂರು: ಸೂತ್ರದ ಬೊಂಬೆಯಾಟಕ್ಕೆ ಆಧುನಿಕ ಸ್ಪರ್ಶ ನೀಡಿ, ಜಾನಪದ ಕಂಪನ್ನು ವಿದೇಶಗಳಲ್ಲಿ ಪಸರಿಸಿದವರು ನಗರದ ಧಾತು ಸಂಸ್ಥೆಯ ಅನುಪಮಾ ಹೊಸಕೆರೆ. ಬೊಂಬೆಗಳ ಕುಣಿತಕ್ಕೆ ಹೊಸ ಸೊಬಗು ನೀಡಿರುವ ಅನುಪಮಾ ದಸರಾ ವೇಳೆ ಬೊಂಬೆ ಪ್ರದರ್ಶನ ನಡೆಸುತ್ತ ಕಲಾಸಕ್ತರ ಮನಗೆದ್ದಿದ್ದಾರೆ.

30 ವರ್ಷಗಳಿಂದ ಸೂತ್ರದ ಬೊಂಬೆಯಾಟದಲ್ಲಿ ಅನೇಕ ಹೊಸ ಪ್ರಯೋಗಗಳನ್ನ ಮಾಡುತ್ತಾ ಬಂದಿರುವ ಅವರು, ಈ ವರ್ಷ ಹತ್ತು ಸಾವಿರಕ್ಕೂ ಹೆಚ್ಚು ಬೊಂಬೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ. ಕೃಷ್ಣನ ಅವತಾರ, ರಾಮಸೀತಾ ಕಲ್ಯಾಣದ ಪ್ರಸಂಗದ ಗೊಂಬೆಗಳು ಈ ಬಾರಿಯ ವಿಶೇಷ.

‘ಅಪರೂಪದ ಕಲೆಯನ್ನು ಮುಂದಿನ ಪೀಳಿಗೆಗೂ ಕೊಂಡೊಯ್ಯಬೇಕು ಎನ್ನುವ ಉದ್ದೇಶದಿಂದ ಆರು ವರ್ಷಗಳ ಹಿಂದೆ ಧಾತು ಸಂಸ್ಥೆಯನ್ನು ಹುಟ್ಟು ಹಾಕಿದೆ. ಸಂಸ್ಥೆಯ ಮೂಲಕ ಪ್ರತಿ ವರ್ಷ ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವ ಆಯೋಜಿಸುತ್ತಿದ್ದೆವು. ಆದರೆ ಈ ಬಾರಿ ಕೋವಿಡ್ ಇರುವ ಕಾರಣ ಸಾಮಾಜಿಕ ಜಾಲತಾಣದ ಮೂಲಕ ಉತ್ಸವವನ್ನು ವೀಕ್ಷಿಸಲು ಅನುವು ಮಾಡಿಕೊಟ್ಟಿದ್ದೇವೆ. ಪ್ರಾಚೀನ ಕಲೆಗೆ ಆಧುನಿಕ ಸ್ಪರ್ಶ ನೀಡಿದ್ದೇವೆ’ ಎಂದು ಅನುಪಮಾ ಹೇಳಿದರು.



ಪುರಾಣದ ಕಥೆ ಹೇಳುವ ಬೊಂಬೆಗಳು–ಪ್ರಜಾವಾಣಿ ಚಿತ್ರ

ಬೊಂಬೆಯಾಟದ ಜೊತೆಗೆ ಸೂತ್ರದ ಬೊಂಬೆ, ಸಲಾಕಿ ಬೊಂಬೆಗಳ ಬಗ್ಗೆ ಕಮ್ಮಟ, ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ರಾಮಾಯಣ, ಮಹಾಭಾರತದ ಒಂದು ಭಾಗವನ್ನು ಆಯ್ಕೆ ಮಾಡಿ ಬೊಂಬೆಗಳ ಮೂಲಕ ಜನರಿಗೆ ವಿವರಿಸುವ ಪ್ರಯತ್ನವನ್ನು ಅನುಪಮಾ ಮಾಡಿದ್ದಾರೆ. ಈ ಕಲೆಗೆ ಸಲ್ಲಿಸಿರುವ ಕೊಡುಗೆಗೆ ರಾಷ್ಟ್ರ ಪ್ರಶಸ್ತಿಯನ್ನೂ ಅವರು ಪಡೆದಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3FAVEsk

400 ವರ್ಷಗಳ ಇತಿಹಾಸ: ‘ಬೊಂಬೆಯಾಟದ ಮೂಲ ಭಾರತ. ಸುಮಾರು 400 ವರ್ಷಗಳ ಹಿಂದೆ ಇಲ್ಲಿಗೆ ಬಂದಿದ್ದ ವಿದೇಶಿಯರ ಮೂಲಕ, ಪ್ರಪಂಚದ ಇತರೆ ರಾಷ್ಟ್ರಗಳಿಗೂ ಈ ಕಲೆ ಪಸರಿಸಿತು. ಈಗ ಬೇರೆ ಬೇರೆ ದೇಶಗಳಲ್ಲಿ ಬೊಂಬೆಯಾಟದ ವಿಧಾನಗಳು ವಿಭಿನ್ನವಾಗಿವೆ. ಆದರೆ, ವಿದೇಶಿಗರು ಈಗಲೂ ನಮ್ಮ ಸೂತ್ರದ ಬೊಂಬೆಯಾಟವನ್ನು ಆಸಕ್ತಿಯಿಂದ ನೋಡುತ್ತಾರೆ. ಆಧುನಿಕತೆಯ ಭರದಲ್ಲಿ ಈ ಕಲೆ ನಶಿಸದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ’ ಎಂದು ಅವರು ಕಳಕಳಿ ವ್ಯಕ್ತಪಡಿಸುತ್ತಾರೆ.

‘ಬೊಂಬೆಯಾಟ ಎಂದರೆ ಮನರಂಜನೆ ಮಾತ್ರವಲ್ಲ. ಇದು ಜೀವನ ಮೌಲ್ಯಗಳನ್ನೂ ಬಿತ್ತುತ್ತದೆ. ಜೀವನದಲ್ಲಿನ ಏರಿಳಿತಗಳನ್ನು, ಸವಾಲುಗಳನ್ನು ಹೇಗೆ ಸ್ವೀಕರಿಸಬೇಕು ಎಂಬ ಸಂದೇಶಗಳನ್ನು ಗೊಂಬೆಗಳ ಮೂಲಕ ಅರಿಯಬಹುದು ಎಂದು ಅವರು ಹೇಳುತ್ತಾರೆ.

ಅನುಪಮಾ ಅವರ ಗೊಂಬೆಗಳ ಪ್ರದರ್ಶನವನ್ನು ಈ ಬಾರಿ ಜೂಮ್, ಇನ್‌ಸ್ಟಾಗ್ರಾಮ್ ವೀಕ್ಷಿಸಬಹುದು. ಅಲ್ಲದೆ, ಅವರ ವೆಬ್‌ಸೈಟ್ www.dhaatupuppets.org ನಲ್ಲಿಯೂ ವೀಕ್ಷಿಸಬಹುದು.

ವಿಶ್ವನಾಥ್‌ಗೆ ಹುಚ್ಚು: ರಮೇಶ್‌ಕುಮಾರ್ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಕೋಲಾರ: ‘ಅರಣ್ಯ ಭೂಮಿ ಒತ್ತುವರಿ ಸಂಬಂಧ ಹೈಕೋರ್ಟ್ ಮೆಟ್ಟಿಲೇರಿ ಪ್ರಕರಣ ಇತ್ಯರ್ಥಪಡಿಸಿಕೊಂಡಿದ್ದೇನೆ. ಆದರೂ ಆ ವಿಚಾರ ಮಾತನಾಡುವ ಆತನಿಗೆ ಹುಚ್ಚು ಹಿಡಿದಿದೆ. ಆತ ಬೀದಿಯಲ್ಲಿ ನಿಂತು ಏನೇನೋ ಹೇಳುತ್ತಾನೆ. ನಾನೇನು ಮಾಡಲಿ?’ ಎಂದು ಶಾಸಕ ಕೆ.ಆರ್. ರಮೇಶ್‌ಕುಮಾರ್ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ವಿರುದ್ಧ ವಾಗ್ದಾಳಿ ನಡೆಸಿದರು.

ಎಚ್.ವಿಶ್ವನಾಥ್‌ರ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಡಿ.ಕೆ.ರವಿ ಅವರು ಜಿಲ್ಲಾಧಿಕಾರಿ ಆಗಿದ್ದಾಗ ಪ್ರಕರಣ ಸಂಬಂಧ ಸರ್ವೆ ನಡೆಸಿ ಇತ್ಯರ್ಥಪಡಿಸಲಾಗಿದೆ. ಆದರೂ ಆ ಹುಚ್ಚ ಈ ವಿಚಾರವನ್ನು ಹೇಳುತ್ತಾನೆ’ ಎಂದು ಹರಿಹಾಯ್ದರು.

‘ಹೊಟ್ಟೆಗೆ ಏನು ತಿನ್ನುತ್ತೇವೆ ಎಂಬ ಪ್ರಜ್ಞೆ ಮನುಷ್ಯನಿಗೆ ಇರಬೇಕು. ರಾಜ್ಯದ ಮಂತ್ರಿಯಾಗಿದ್ದವನು, ಒಂದು ಪಕ್ಷದ ಅಧ್ಯಕ್ಷನಾಗಿದ್ದವನಿಗೆ ಏನು ಮಾತನಾಡಬೇಕೆಂಬ ಕನಿಷ್ಠ ಪರಿಜ್ಞಾನ ಬೇಡವಾ? ಆತನಿಗೆ ಜ್ಞಾಪಕ ಶಕ್ತಿ ಇಲ್ಲದೆ ಬುದ್ಧಿ ಹಾಳಾಗಿ ಮತ್ಸರದಿಂದ ಸಾಯ್ತಿದ್ದಾನೆ’ ಎಂದು ಏಕವಚನದಲ್ಲೇ ನಿಂದಿಸಿದರು. ‘ನಾನು ಭ್ರಷ್ಟನಾಗಿದ್ದರೆ ಸಂತೋಷ. ಆ ಬಗ್ಗೆ ತನಿಖೆ ಮಾಡಿಸಲಿ. ಏನಾದರೂ ದಾಖಲೆಪತ್ರಗಳಿದ್ದರೆ ತೆಗೆದುಕೊಂಡು ಹೋಗಿ ಎಸಿಬಿಗೆ ದೂರು ಕೊಡಲಿ. ಇಲ್ಲವೇ ಸರ್ಕಾರ ವಿಶ್ವನಾಥ್ ಅವರನ್ನೇ ತನಿಖಾಧಿಕಾರಿಯಾಗಿ ನೇಮಿಸಲಿ. ನಾನು ಭ್ರಷ್ಟನೆಂದು ಸಾಬೀತಾದರೆ ಯಾವ ಜೈಲಿಗೆ ಬೇಕಾದರೂ ಕಳುಹಿಸಲಿ. ನನ್ನ ಆಸ್ತಿಯನ್ನೆಲ್ಲಾ ಬರೆದುಕೊಟ್ಟು ಹೋಗುತ್ತೇನೆ’ ಎಂದು ಸವಾಲು ಹಾಕಿದರು.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿಯಲ್ಲಿ ಉಲ್ಲೇಖ; ಟಿಆರ್‌ಎಸ್ ಮುಂದೆ

ಬಾಂಡ್: ಪ್ರಾದೇಶಿಕ ಪಕ್ಷಗಳಿಗೆ ₹447 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ 14 ಪ್ರಾದೇಶಿಕ ಪಕ್ಷಗಳು ಚುನಾವಣಾ ಬಾಂಡ್‌ಗಳ ಮೂಲಕ ₹447.49 ಕೋಟಿ ಮೊತ್ತವನ್ನು 2019-20ರಲ್ಲಿ ಸಂಗ್ರಹಿಸಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಮಾಡಿದೆ. ಒಟ್ಟು ಆದಾಯದ ಅರ್ಧಕ್ಕಿಂತ ಹೆಚ್ಚಿನ ಮೊತ್ತವನ್ನು ಪ್ರಾದೇಶಿಕ ಪಕ್ಷಗಳು ಚುನಾವಣಾ ಬಾಂಡ್ ಮೂಲಕ ಗಳಿಸಿವೆ ಎಂದು ಎಡಿಆರ್ ವರದಿ ಹೇಳಿದೆ.

ಒಟ್ಟಾರೆ 42 ಪ್ರಾದೇಶಿಕ ಪಕ್ಷಗಳು ಈ ಅವಧಿಯಲ್ಲಿ ₹877.95 ಕೋಟಿ ಆದಾಯ ಗಳಿಸಿವೆ. ಆದರೆ ಟಿಆರ್‌ಎಸ್, ಟಿಡಿಪಿ, ವೈಎಸ್‌ಆರ್ ಕಾಂಗ್ರೆಸ್, ಜೆಡಿಯು, ಜೆಡಿಎಸ್ ಮತ್ತು ಆರ್‌ಜೆಡಿ ಸೇರಿದಂತೆ 14 ಪಕ್ಷಗಳು ಮಾತ್ರ ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆದಿವೆ.

ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆದ ಪ್ರಾದೇಶಿಕ ಪಕ್ಷಗಳ ಪಟ್ಟಿಯಲ್ಲಿ ಟಿಆರ್‌ಎಸ್ ಮುಂದಿದ್ದು, ₹89.15 ಕೋಟಿ ಗಳಿಸಿದೆ.

ಟಿಡಿಪಿ ₹81.60 ಕೋಟಿ ಗಳಿಸಿ ಎರಡನೇ ಸ್ಥಾನದಲ್ಲಿದ್ದರೆ, ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ₹74.35 ಕೋಟಿಗಳೊಂದಿಗೆ ಮೂರನೇ ಸ್ಥಾನದಲ್ಲಿದೆ.

ನವೀನ್ ಪಟ್ನಾಯಕ್ ನೇತೃತ್ವದ ಬಿಜೆಡಿ ಪಕ್ಷವು ₹50.50 ಕೋಟಿ, ತಮಿಳುನಾಡಿನ ಆಡಳಿತಾರೂಢ ಡಿಎಂಕೆ ₹45.50 ಕೋಟಿ, ಶಿವಸೇನಾ ₹40.98 ಕೋಟಿ, ಎಎಪಿ ₹17.77 ಕೋಟಿ ಜೆಡಿಯು ₹13 ಕೋಟಿ ಪಡೆದಿವೆ.

ಆರ್‌ಜೆಡಿ ₹2.5 ಕೋಟಿ, ಸಮಾಜವಾದಿ ಪಕ್ಷವು ₹10.84 ಕೋಟಿ, ಎಐಎಡಿಎಂಕೆ ₹6.05 ಕೋಟಿಗಳನ್ನು ಚುನಾವಣಾ ಬಾಂಡ್‌ಗಳ ಮೂಲಕ ಪಡೆದಿವೆ.

ಎಚ್‌.ಡಿ. ದೇವೇಗೌಡ ನೇತೃತ್ವದ ಜೆಡಿಎಸ್ ₹7.50 ಕೋಟಿ, ಅಕಾಲಿದಳ ₹6.5 ಕೋಟಿ, ಜೆಎಂಎಂ ಪಕ್ಷವು ₹1 ಕೋಟಿ ದೇಣಿಗೆ ಪಡೆದಿವೆ.

ಎಡಿಆರ್‌ನ ಹಿಂದಿನ ವರದಿಯಲ್ಲಿ ನಾಲ್ಕು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಎನ್‌ಸಿಪಿ ಚುನಾವಣಾ ಬಾಂಡ್‌ಗಳ ಮೂಲಕ ₹2,993.82 ಕೋಟಿ (ಶೇ 62.92) ದೇಣಿಗೆ ಸಂಗ್ರಹಿಸಿದ್ದವು ಎಂದು ತೋರಿಸಿತ್ತು.

2019-20ರಲ್ಲಿ ಆಡಳಿತಾರೂಢ ಬಿಜೆಪಿಯ ಆದಾಯದಲ್ಲಿ ಶೇ 50.34ರಷ್ಟು ಏರಿಕೆಯಾಗಿ ₹3,623.28 ಕೋಟಿಗೆ ತಲುಪಿತ್ತು.

ಮೂರು ರಾಷ್ಟ್ರೀಯ ಪಕ್ಷಗಳಾದ ಸಿಪಿಎಂ, ಸಿಪಿಐ ಮತ್ತು ಬಿಎಸ್‌ಪಿ ಚುನಾವಣಾ ಬಾಂಡ್‌ಗಳ ಮೂಲಕ ಯಾವುದೇ ದೇಣಿಗೆಯನ್ನು ಸ್ವೀಕರಿಸಿಲ್ಲ.

ಪ್ರಾದೇಶಿಕ ಪಕ್ಷಗಳ ಒಟ್ಟು ಆದಾಯ (₹ ಕೋಟಿಗಳಲ್ಲಿ)

ಟಿಆರ್‌ಎಸ್	130.46
ಶಿವಸೇನಾ	111.40
ವೈಎಸ್‌ಆರ್ ಕಾಂಗ್ರೆಸ್	92.73
ಟಿಡಿಪಿ	91.53
ಬಿಜೆಡಿ	90.35

ವರದಿಯ ಇತರ ಅಂಶಗಳು

- 42 ಪಕ್ಷಗಳ ಒಟ್ಟು ಆದಾಯದಲ್ಲಿ ಅಗ್ರ ಐದು ಪಕ್ಷಗಳ ಆದಾಯದ ಪಾಲು ಶೇ 58.83ರಷ್ಟಿದೆ
- 11 ಪ್ರಾದೇಶಿಕ ಪಕ್ಷಗಳ ವಿವರಗಳು ಸಾರ್ವಜನಿಕವಾಗಿ ಲಭ್ಯವಿಲ್ಲ
- ತಮ್ಮ ಆದಾಯದ ಒಂದು ಭಾಗವನ್ನು 2019-20ರವರೆಗೆ ಖರ್ಚು ಮಾಡದೇ ಉಳಿಸಲಾಗಿದೆ ಎಂದು 24 ಪ್ರಾದೇಶಿಕ ಪಕ್ಷಗಳು ಘೋಷಿಸಿವೆ
- ಟಿಡಿಪಿ, ಬಿಜೆಡಿ, ಡಿಎಂಕೆ, ಎಸ್‌ಪಿ, ಜೆಡಿಎಸ್, ಎಐಎಡಿಎಂಕೆ, … ಒಳಗೊಂಡ 18 ಪ್ರಾದೇಶಿಕ ಪಕ್ಷಗಳು ತಮ್ಮ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಿರುವುದಾಗಿ ಘೋಷಿಸಿವೆ

ಜಮ್ಮು–ಕಾಶ್ಮೀರ: ಟಿಆರ್‌ಎಫ್ ಉಗ್ರನ ಹತ್ಯೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಈಚೆಗೆ ನಡೆದಿದ್ದ ನಾಗರಿಕರ ಹತ್ಯೆಯಲ್ಲಿ ಭಾಗಿಯಾಗಿದ್ದ ಎನ್ನಲಾದ ಉಗ್ರನೊಬ್ಬನನ್ನು ಬಂಡಿಪೋರಾ ಜಿಲ್ಲೆಯ ಹಾಜಿನ್ ಪ್ರದೇಶದ ಗುಂಡ್‌ಜಹಾಂಗೀರ್ ಹಳ್ಳಿಯಲ್ಲಿ ಸೋಮವಾರ ಭದ್ರತಾ ಪಡೆಗಳು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೀಡಾದ ಉಗ್ರನನ್ನು 'ಇಮ್ತಿಯಾಜ್ ಅಹಮದ್ ದರ್' ಎಂದು ಗುರುತಿಸಲಾಗಿದ್ದು, ಈತ ದಿ ರೆಸಿಸ್ಟನ್ಸ್ ಫ್ರಂಟ್ (ಟಿಆರ್‌ಎಫ್) ಮತ್ತು ಎಲ್‌ಇಟಿಯೊಂದಿಗೆ ಸಂಪರ್ಕ ಹೊಂದಿದ್ದ. ಬಂಡಿಪೋರಾದಲ್ಲಿ ಈಚೆಗೆ ನಡೆದ ನಾಗರಿಕರ ಹತ್ಯೆಯಲ್ಲಿ ಈತ ಭಾಗಿಯಾಗಿದ್ದ ಎಂದು ಪೊಲೀಸರು ಹೇಳಿದ್ದಾರೆ. ಆದರೆ, ಉಗ್ರನ ಕುಟುಂಬವು ಈ ಆರೋಪವನ್ನು ನಿರಾಕರಿಸಿದೆ.

ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪತ್ರಕರ್ತ ಸಾಜದ್ ಗುಲ್ ಅವರು, ತಮ್ಮ ಟ್ವಿಟರ್ ಖಾತೆಯಲ್ಲಿ 'ಇಮ್ತಿಯಾಜ್ ಅಹಮದ್ ದರ್ ಕುಟುಂಬದ ಹಲವು ವಿಡಿಯೊಗಳನ್ನು ಅಪ್‌ಲೋಡ್ ಮಾಡಿದ್ದಾರೆ. ಈ ವಿಡಿಯೊಗಳಲ್ಲಿ 'ಇಮ್ತಿಯಾಜ್‌ನನ್ನು ಸೇನೆಯವರು ಮನೆಯಿಂದ ಹೊರಗೆಳೆದುಕೊಂಡು ಹೋಗಿ, ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ' ಎಂದು ಆರೋಪಿಸಲಾಗಿದೆ.

ವಿಡಿಯೊ ಅಪ್‌ಲೋಡ್ ಮಾಡಿದ ಬೆನ್ನಲ್ಲೇ ಪೊಲೀಸರು ತಮಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಪತ್ರಕರ್ತ ಸಾಜದ್ ಟ್ವೀಟ್‌ನಲ್ಲಿ ಆರೋಪಿಸಿದ್ದಾರೆ. 'ವಿಡಿಯೊಗಳನ್ನು ಅಪ್‌ಲೋಡ್ ಮಾಡಿದ ನಂತರ ಪೊಲೀಸರಿಂದ ಕರೆಗಳನ್ನು ಸ್ವೀಕರಿಸುತ್ತಿದ್ದೇನೆ, ಪೊಲೀಸ್ ಠಾಣೆಯಲ್ಲಿ ವರದಿ ಸಲ್ಲಿಸುವಂತೆ ನನಗೆ ಬೆದರಿಕೆ ಹಾಕಲಾಗಿದೆ' ಎಂದೂ ಅವರು ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ.

'ಇದಕ್ಕೆ ಪ್ರತಿಯಾಗಿ, 'ಗುಂಡ್ ಜಹಾಂಗೀರ್‌ನಲ್ಲಿ ಇಂದಿನ ಕಾರ್ಯಾಚರಣೆಯ ಸತ್ಯಾಂಶದ ಕುರಿತು ಸುಳ್ಳು ಆರೋಪಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗುತ್ತಿದೆ. ಕಾನೂನು ಹಾಗೂ ಸುವ್ಯವಸ್ಥೆಗೆ ಭಂಗ ತರಲು ಈ ಕ್ರಿಯೆಗಳನ್ನು ವಿನ್ಯಾಸಗೊಳಿಸಲಾಗಿದೆ' ಎಂದು ಬಂಡಿಪೋರಾ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಐದು ನಾಗರಿಕರ ಹತ್ಯೆಗೆ ಸಂಬಂಧಿಸಿದಂತೆ ಉಗ್ರರೊಂದಿಗೆ ನಂಟು ಹೊಂದಿರುವ ನಾಲ್ವರು ಆರೋಪಿಗಳನ್ನು ಭಾನುವಾರ ಬಂಡಿಪೋರಾದಲ್ಲಿ ಪೊಲೀಸರು ಬಂಧಿಸಿದ್ದಾರೆ.

'ಅ. 5ರಂದು ಹತ್ಯೆಗೀಡಾದ ನಾಗರಿಕರಲ್ಲಿ ಒಬ್ಬರಾದ ಕ್ಯಾಬ್ ಡ್ರೈವರ್ ಮೊಹಮ್ಮದ್ ಶಫೀ ಲೋನ್ ಅವರ ಹತ್ಯೆಯಲ್ಲಿ ಭಾಗಿಯಾಗಿರುವುದಾಗಿ ನಾಲ್ವರು ಒಪ್ಪಿಕೊಂಡಿದ್ದಾರೆ. ಮೊಹಮ್ಮದ್ ಬಂಡಿಪೋರಾದ ಟ್ಯಾಕ್ಸಿ ನಿಲ್ದಾಣ ಸಂಘದ ಅಧ್ಯಕ್ಷರಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ವೆರಿನಾಗ್ ಪ್ರದೇಶದ ಖಗುಂಡ್ ಗ್ರಾಮದಲ್ಲಿ ನಡೆದ ಮತ್ತೊಂದು ಎನ್‌ಕೌಂಟರ್‌ನಲ್ಲಿ ಮತ್ತೊಬ್ಬ ಉಗ್ರನನ್ನು ಹತ್ಯೆ ಮಾಡಲಾಗಿದ್ದು, ಒಬ್ಬ ಪೊಲೀಸ್ ಗಾಯಗೊಂಡಿದ್ದಾರೆ.

ಶೋಪಿಯಾನ್ ಜಿಲ್ಲೆಯಲ್ಲೂ ಚಕಮಕಿ: ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ದಕ್ಷಿಣ ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಸೋಮವಾರ ಸಂಜೆ ಗುಂಡಿನ ಚಕಮಕಿ ನಡೆದಿದೆ. 'ಇದು, ಕಣಿವೆ ರಾಜ್ಯದಲ್ಲಿ ಇಂದು ನಡೆದ 3ನೇ ಗುಂಡಿನ ಚಕಮಕಿ ಘಟನೆ.

ಮಹಾರಾಷ್ಟ್ರ ಬಂದ್

ಮುಂಬೈ: ಲಖಿಂಪುರ–ಖೇರಿ ಹಿಂಸಾಚಾರ ಖಂಡಿಸಿ ಆಡಳಿತಾರೂಢ ಮಹಾವಿಕಾಸ ಅಘಾಡಿಯು ಸೋಮವಾರ ಮಹಾರಾಷ್ಟ್ರ ಬಂದ್‌ಗೆ ಕರೆ ಕೊಟ್ಟಿತ್ತು. ಪರಿಣಾಮವಾಗಿ, ಮುಂಬೈ ಮತ್ತು ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಸಂಚಾರ ವ್ಯತ್ಯಯವಾಗಿತ್ತು, ಮುಂಬೈನ ಬಹುತೇಕ ಅಂಗಡಿಗಳು ಮುಚ್ಚಿದ್ದವು. ಕೆಲವೆಡೆ ಕಲ್ಲೆಸೆತದ ಘಟನೆಗಳ ಬಳಿಕ ರಾಜ್ಯ ರಸ್ತೆ ಸಾರಿಗೆ ಬಸ್‌ಗಳ ಸಂಚಾರ ಸ್ಥಗಿತಗೊಳಿಸಿದ್ದವು. ಬಂದ್ ಶೇ ನೂರರಷ್ಟು ಯಶಸ್ವಿಯಾಗಿದೆ ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಹೇಳಿದ್ದಾರೆ.

'ಇದು ರಾಜ್ಯ ಸರ್ಕಾರ ಪ್ರಾಯೋಜಕತ್ವದ ಬಂದ್. ಈ ಬಂದ್ ಅನಗತ್ಯವಾಗಿತ್ತು' ಎಂದು ಬಿಜೆಪಿ ಮುಖಂಡರು ಟೀಕಿಸಿದ್ದಾರೆ. ಶಿವಸೇನಾ ಮತ್ತು ಎನ್‌ಸಿಪಿ ಜತೆಯಾಗಿ ಠಾಣೆಯಲ್ಲಿ ಭಾರಿ ರ‍್ಯಾಲಿಯನ್ನು ಆಯೋಜಿಸಿತ್ತು. ಬಂದ್ ನಡುವೆಯೂ ಆಟೋರಿಕ್ಷಾ ಚಾಲನೆ ಮಾಡಿದ ಕೆಲವು ಚಾಲಕರನ್ನು ಈ ಪಕ್ಷಗಳ ಕಾರ್ಯಕರ್ತರು ಥಳಿಸಿದ್ದಾರೆ.

ಭಾರತೀಯರ ಖಾತೆ ವಿವರ ನೀಡಿದ ಸ್ವಿಸ್ ಸರ್ಕಾರ

ನವದೆಹಲಿ/ಬರ್ನೆ (ಪಿಟಿಐ): ಭಾರತೀಯರು ಸ್ವಿಸ್ ಬ್ಯಾಂಕ್‌ಗಳಲ್ಲಿ ಹೊಂದಿರುವ ಖಾತೆಗಳ ವಿವರವನ್ನು ಸ್ವಿಟ್ಜರ್‌ಲ್ಯಾಂಡ್ ಸರ್ಕಾರವು ಭಾರತ ಸರ್ಕಾರಕ್ಕೆ ನೀಡಿದೆ.

ಸ್ವಿಟ್ಜರ್‌ಲ್ಯಾಂಡ್ ಸರ್ಕಾರವು ಈವರೆಗೆ ಮೂರು ಬಾರಿ ಈ ರೀತಿಯ ಮಾಹಿತಿಯನ್ನು ಭಾರತದೊಂದಿಗೆ ಹಂಚಿಕೊಂಡಿದೆ.

ಸ್ವಿಟ್ಜರ್‌ಲ್ಯಾಂಡ್‌ನ ಫೆಡರಲ್ ಟ್ಯಾಕ್ಸ್ ಅಡ್ಮಿನಿಸ್ಟ್ರೇಷನ್ (ಎಫ್‌ಟಿಎ) ಹಲವು ದೇಶಗಳಿಗೆ 2019ರಿಂದ ಈ ಮಾಹಿತಿ ನೀಡುತ್ತಿದೆ.

ಮುಖ್ಯಾಂಶಗಳು

- ಗೋಪ್ಯತೆ ಕಾಪಾಡುವ ಷರತ್ತಿನ ಅಡಿಯಲ್ಲಿ ಮಾಹಿತಿ ಹಂಚಿಕೆ
- ಮೂರನೇ ಬಾರಿ ಸ್ವಿಸ್ ಖಾತೆ ವಿವರ ಹಂಚಿಕೊಂಡ ಸ್ವಿಡ್ಜರ್ಲೆಂಡ್
- ಈವರೆಗೆ 100 ಭಾರತೀಯರ ಸ್ವಿಸ್ ಖಾತೆ ವಿವರ ಹಂಚಿಕೆ

ಈ ಮಾಹಿತಿಯನ್ನು ಬಹಿರಂಗಪಡಿಸಬಾರದು ಎಂಬ ಷರತ್ತಿನ ಮೇಲೆ ಈ ಮಾಹಿತಿ ನೀಡಲಾಗುತ್ತದೆ. ಈ ಬಾರಿ 96 ದೇಶದ ಪ್ರಜೆಗಳು ಸ್ವಿಸ್ ಬ್ಯಾಂಕ್‌ನಲ್ಲಿ ಹೊಂದಿರುವ ಬ್ಯಾಂಕ್ ಖಾತೆಗಳ ವಿವರವನ್ನು ನೀಡಲಾಗಿದೆ. ಒಟ್ಟು 33 ಲಕ್ಷ ಖಾತೆಗಳ ವಿವರವನ್ನು ಈ ದೇಶಗಳಿಗೆ ನೀಡಲಾಗಿದೆ.

ಈ 96 ದೇಶಗಳ ಪಟ್ಟಿಯಲ್ಲಿ ಭಾರತವೂ ಇದೆ. ಮೂರೂ ವರ್ಷಗಳಲ್ಲಿ ಸ್ವಿಟ್ಜರ್‌ಲ್ಯಾಂಡ್ ಈವರೆಗೆ 100 ಭಾರತೀಯ ಸ್ವಿಸ್ ಖಾತೆಗಳ ವಿವರವನ್ನು ಭಾರತದೊಂದಿಗೆ ಹಂಚಿಕೊಂಡಿದೆ. ರಾಜಕಾರಣಿಗಳು, ಉದ್ಯಮಿಗಳು, ಕೆಲವು ಟ್ರಸ್ಟ್‌ಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಖಾತೆಗಳ ವಿವರವನ್ನು ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ಈ ಖಾತೆಗಳಲ್ಲಿನ ಠೇವಣಿ, ಹಣ ವರ್ಗಾವಣೆಯ ವಿವರಗಳನ್ನೂ ಇದು ಒಳಗೊಂಡಿರುತ್ತದೆ. ಈ ಖಾತೆಗಳ ವಿವರವನ್ನು ಬಳಸಿಕೊಂಡು, ಅಘೋಷಿತ ಸ್ವತ್ತುಗಳನ್ನು ಹೊಂದಿರುವವರನ್ನು ಪತ್ತೆ ಮಾಡಲು ಸಾಧ್ಯ ಎಂದು ತಜ್ಞರು ಹೇಳಿದ್ದಾರೆ.

ಈ ಬಾರಿ ಸ್ವಿಟ್ಜರ್‌ಲ್ಯಾಂಡ್ ನೀಡಿರುವ ವಿವರದಲ್ಲಿ ಅಮೆರಿಕ, ಬ್ರಿಟನ್, ದಕ್ಷಿಣ ಅಮೆರಿಕದ ದೇಶಗಳು, ಆಫ್ರಿಕಾದ ರಾಷ್ಟ್ರಗಳು, ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಸ್ವಿಸ್ ಖಾತೆಗಳ ಮಾಹಿತಿ ಇದೆ. ಖಾತೆದಾರರ ಹೆಸರು, ಖಾತೆ ಸಂಖ್ಯೆ, ವಿಳಾಸ, ಭಾರತೀಯ ವಿಳಾಸ, ತೆರಿಗೆ ಮಾಹಿತಿಯನ್ನು ಈ ವಿವರಗಳು ಒಳಗೊಂಡಿವೆ.

ಭಾರತೀಯರು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಹೊಂದಿರುವ ಸ್ಥಿರಾಸ್ತಿಗಳು, ಅವುಗಳಿಂದ ಬರುತ್ತಿರುವ ಆದಾಯ ಮತ್ತು ಅವುಗಳ ತೆರಿಗೆ ಮಾಹಿತಿಯನ್ನೂ ಈ ವಿವರ ಒಳಗೊಂಡಿದೆ.

ಚುನಾವಣೆಯಲ್ಲಿ ನಟ ಮಂಚು ವಿಷ್ಣು ವಿರುದ್ಧ ಸೋಲು

ತೆಲುಗು ಸಿನಿಮಾ ಕಲಾವಿದರ ಸಂಘ ತೊರೆದ ಪ್ರಕಾಶ್ ರೈ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ನಟ ಪ್ರಕಾಶ್ ರೈ ಅವರು ತೆಲುಗು ಸಿನಿಮಾ ಕಲಾವಿದರ ಸಂಘದಿಂದ (ಮಾ-ಮೂವಿ ಆರ್ಟಿಸ್ಟ್ಸ್ ಅಸೋಸಿಯೇಷನ್) ಹೊರನಡೆದಿದ್ದಾರೆ. ಸಂಘದ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ನಟ ಮಂಚು ವಿಷ್ಣು ವಿರುದ್ಧ ರೈ ಸೋತಿದ್ದಾರೆ.

'ಸದಸ್ಯರು ಪ್ರಾದೇಶಿಕ ಭಾವನೆಯಿಂದ ಮತ ಹಾಕಿದ್ದೇ ಸೋಲಿಗೆ ಕಾರಣ. ನಾನು ತೆಲುಗಿನ ವ್ಯಕ್ತಿ ಅಲ್ಲ, ಹೊರಗಿನವನು ಎಂದು ವರ್ಗೀಕರಿಸಿದ್ದಾರೆ' ಎಂದು ರೈ ಹೇಳಿದ್ದಾರೆ. ಎರಡು ದಶಕಕ್ಕೂ ಹೆಚ್ಚಿನ ಅವಧಿಯಿಂದ ರೈ ಅವರು ತೆಲುಗು ಚಿತ್ರರಂಗದಲ್ಲಿದ್ದಾರೆ.

'ಮಾ'ದಲ್ಲಿ 900ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಎರಡು ವರ್ಷಕ್ಕೊಮ್ಮೆ ಆಡಳಿತ ಮಂಡಳಿಗೆ ಚುನಾವಣೆ ನಡೆಯುತ್ತದೆ. ಈ ಬಾರಿಯ ಚುನಾವಣೆಯಲ್ಲಿ ಅಬ್ಬರದ ಪ್ರಚಾರ ನಡೆದಿತ್ತು. ಪ್ರಚಾರದಲ್ಲಿ ಅಹಿತಕರವಾದ ಆರೋಪ-ಪ್ರತ್ಯಾರೋಪಗಳೂ ಕೇಳಿ ಬಂದಿದ್ದವು.



ಒಟ್ಟು 657 ಸದಸ್ಯರು ಮತ ಚಲಾಯಿಸಿದ್ದರು. ರೈ ಅವರು 109 ಮತಗಳ ಅಂತರದಿಂದ ಸೋತಿದ್ದಾರೆ.

'ನಾನು ಹೈದರಾಬಾದ್‌ನಲ್ಲಿ ಅತಿಥಿಯ ಹಾಗೆ ಇರಬೇಕು ಎಂದು ಮೋಹನಬಾಬು, ಕೋಟ ಶ್ರೀನಿವಾಸ ರಾವ್ ಅವರಂತಹ ನಟರು ಹೇಳಿದ್ದಾರೆ. ಹಾಗಾಗಿ, ಇಲ್ಲಿ ನಾನು ಆಹ್ವಾನಿತನ ರೀತಿಯಲ್ಲಿಯೇ ಇರುತ್ತೇನೆ. 'ಮಾ' ಸದಸ್ಯತ್ವ ಬೇಡ. ನಾನು ಲೋಕಸಭಾ ಚುನಾವಣೆಯಲ್ಲಿಯೂ (ಕಳೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರಿನಿಂದ ಅವರು ಸ್ಪರ್ಧಿಸಿದ್ದರು) ಸೋತಿದ್ದೇನೆ. ಆದರೆ ರಾಜಕೀಯ ಬಿಟ್ಟಿಲ್ಲ. ಇನ್ನು ಮುಂದೆ 'ಮಾ'ದಲ್ಲಿ ಇರುವುದಿಲ್ಲ. ಆದರೆ, ತೆಲುಗು ಚಿತ್ರರಂಗದಲ್ಲಿ ಇರುತ್ತೇನೆ' ಎಂದು ರೈ ಹೇಳಿದ್ದಾರೆ.

ಮಂಚು ವಿಷ್ಣು ಅವರು ನಟ ಮೋಹನ್ ಬಾಬು ಅವರ ಮಗ. ಮತದಾರರ ತೀರ್ಪನ್ನು ಗೌರವಿಸುತ್ತೇನೆ. ಈ ಚುನಾವಣೆಯಲ್ಲಿ ರಾಷ್ಟ್ರೀಯತೆ ಕೂಡ ಮುಖ್ಯ ವಿಷಯವಾಗಿತ್ತು ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ವಿರೋಧಿ ಎಂದು ತಮ್ಮನ್ನು ಬಿಂಬಿಸಿಕೊಂಡಿರುವ ರೈ ಅವರು ಕಣದಲ್ಲಿದ್ದ ಕಾರಣ ರಾಜಕೀಯ ಪಕ್ಷಗಳೂ ಈ ಚುನಾವಣೆಯ ಮೇಲೆ ಕಣ್ಣಿಟ್ಟಿದ್ದವು.

'ದೇಶವಿರೋಧಿ ಶಕ್ತಿಗಳಿಗೆ ಸರಿಯಾದ ಪಾಠ ಆಗಿದೆ' ಎಂದು ತೆಲಂಗಾಣ ಬಿಜೆಪಿ ಅಧ್ಯಕ್ಷ ಬಂಡಿ ಸಂಜಯ್ ಹೇಳಿದ್ದಾರೆ.

ಅಮೆರಿಕದ ಮೂವರು ತಜ್ಞರಿಗೆ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ

ಸ್ಟಾಕ್‌ಹೋಮ್ (ಎಎಫ್‌ಪಿ): ಅಮೆರಿಕ ಮೂಲದ ಆರ್ಥಿಕ ತಜ್ಞರಾದ ಡೇವಿಡ್ ಕಾರ್ಡ್, ಜೋಶುವಾ ಡಿ. ಆಂಗ್ರಿಸ್ಟ್ ಹಾಗೂ ಗೈಡೊ ಡಬ್ಲ್ಯು. ಇಂಬೆನ್ಸ್ ಅವರಿಗೆ ಅರ್ಥಶಾಸ್ತ್ರ ವಿಭಾಗದಲ್ಲಿ 2021ನೇ ಸಾಲಿನ ನೊಬೆಲ್ ಪ್ರಶಸ್ತಿ ಲಭಿಸಿದೆ.

ಕಾರ್ಮಿಕರ ಆರ್ಥಿಕತೆಗೆ ಸಂಬಂಧಿಸಿದ ಪ್ರಯೋಗಗಳಿಗೆ ಕೆನಡಾದ ಡೇವಿಡ್ ಕಾರ್ಡ್ ಅವರಿಗೆ ನೊಬೆಲ್ ಸಂದಿದೆ. ಪ್ರಶಸ್ತಿಯ ಮೊತ್ತ ₹8.52 ಕೋಟಿಯಲ್ಲಿ (10 ಮಿಲಿಯನ್ ಸ್ವೀಡಿಷ್ ಕ್ರೋನರ್) ಅರ್ಧ ಭಾಗ ಡೇವಿಡ್ ಅವರಿಗೆ ಹಾಗೂ ಉಳಿದ ಅರ್ಧ ಮೊತ್ತವು ಇಸ್ರೇಲಿ-ಅಮೆರಿಕನ್ ಆದ ಜೋಶುವಾ ಆಂಗ್ರಿಸ್ಟ್ ಮತ್ತು ಡಚ್-ಅಮೆರಿಕನ್ ಆದ ಗೈಡೊ ಡಬ್ಲ್ಯು. ಇಂಬೆನ್ಸ್ ಅವರಿಗೆ ಹಂಚಿಕೆಯಾಗಲಿದೆ ಎಂದು ನೊಬೆಲ್ ಆಯ್ಕೆ ಸಮಿತಿಯು ಹೇಳಿದೆ.

1956ರಲ್ಲಿ ಕೆನಡಾದಲ್ಲಿ ಜನಿಸಿದ ಡೇವಿಡ್ ಕಾರ್ಡ್ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು. ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಯಲ್ಲಿ (ಎಂಐಟಿ) ಜೋಶುವಾ ಡಿ. ಆಂಗ್ರಿಸ್ಟ್ ಮತ್ತು ಸ್ಟ್ಯಾನ್‌ಫೋರ್ಡ್ ಯೂನಿವರ್ಸಿಟಿಯಲ್ಲಿ ಗೈಡೊ ಡಬ್ಲ್ಯು. ಇಂಬೆನ್ಸ್ ಪ್ರಾಧ್ಯಾಪಕರಾಗಿದ್ದಾರೆ. ಇವರು ಕಾರ್ಮಿಕರ ಕ್ಷೇತ್ರದಲ್ಲಿ ನಡೆಸಿರುವ ಸಹಜ ಪ್ರಯೋಗಗಳಿಗೆ ಮತ್ತು ಕಾರ್ಮಿಕ ಮಾರುಕಟ್ಟೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ನಿರೂಪಿಸಿರುವುದಕ್ಕೆ ಈ ಪ್ರತಿಷ್ಠಿತ ಪ್ರಶಸ್ತಿ ಲಭಿಸಿದೆ.



ಡೇವಿಡ್ ಕಾರ್ಡ್



ಜೋಶುವಾ ಆಂಗ್ರಿಸ್ಟ್



ಗೈಡೊ ಡಬ್ಲ್ಯು. ಇಂಬೆನ್ಸ್

ಈ ಮೂವರು ಪ್ರಶಸ್ತಿ ವಿಜೇತರು 'ಅರ್ಥಶಾಸ್ತ್ರದಲ್ಲಿ ಸಹಜ ಪ್ರಯೋಗಗಳಿಂದ ಕ್ರಾಂತಿಯನ್ನೇ ಮಾಡಿದ್ದಾರೆ. ಯಾದೃಚ್ಛಿಕ ಪ್ರಯೋಗವನ್ನು ನಡೆಸಲು ಸಾಧ್ಯವಾಗದಿದ್ದರೂ, ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸಲು ಸಹಜ ಪ್ರಯೋಗಗಳಿಂದ ಸಾಧ್ಯವಿದೆ ಎಂಬುದನ್ನು ಇವರು ತೋರಿಸಿದ್ದಾರೆ' ಎಂದು ನೊಬೆಲ್ ಆಯ್ಕೆ ಸಮಿತಿಯ ಸದಸ್ಯರಾದ ಇವಾ ಮೋರ್ಕ್ ಹೇಳಿದ್ದಾರೆ.

2019ರಲ್ಲಿ ಭಾರತ ಮೂಲದ ಅಭಿಜಿತ್ ಬ್ಯಾನರ್ಜಿ (58), ಅವರ ಹೆಂಡತಿ ಎಸ್ತರ್ ಡಫ್ಲೊ (46) ಮತ್ತು ಹಾರ್ವರ್ಡ್‌ನ ಪ್ರಾಧ್ಯಾಪಕ ಮೈಕೆಲ್ ಕ್ರೆಮರ್ ಅವರು ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಹಂಚಿಕೊಂಡಿದ್ದರು.



ಪ್ರತಿಭಟನೆ... ಮುಂಬೈನಲ್ಲಿ ಸೋಮವಾರ ಶಿವಸೇನಾ ಕಾರ್ಯಕರ್ತರು ಲಖಿಂಪುರ-ಖೇರಿ ಹಿಂಸಾಚಾರ ಖಂಡಿಸಿ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ದೇಶ್‌ಮುಖ್ ಮನೆ ಮೇಲೆ ಸಿಬಿಐ ದಾಳಿ

ನವದೆಹಲಿ (ಪಿಟಿಐ): ತಮ್ಮ ವಿರುದ್ಧದ ಭ್ರಷ್ಟಾಚಾರ ಆರೋಪದ ಪ್ರಕರಣದ ಪ್ರಾಥಮಿಕ ತನಿಖೆಗೆ ಸಂಬಂಧಿಸಿದ ಗೋಪ್ಯ ದಾಖಲೆಗಳ ಸೋರಿಕೆ ಸಂಬಂಧ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರಿಗೆ ಸೇರಿದ ಹಲವು ಸ್ಥಳಗಳಲ್ಲಿ ಸಿಬಿಐ ಸೋಮವಾರ ಶೋಧ ಕಾರ್ಯ ನಡೆಸಿದೆ.

ಸಿಬಿಐ ಅಧಿಕಾರಿಗಳು ಸೋಮವಾರ ಬೆಳಿಗ್ಗೆ ನಾಗ್ಪುರ ಮತ್ತು ಮುಂಬೈನಲ್ಲಿರುವ ದೇಶಮುಖ್ ಅವರ ನಿವಾಸಗಳಿಗೆ ವಾರಂಟ್ ಸಮೇತ ಬಂದು ಶೋಧ ಕಾರ್ಯಾಚರಣೆ ನಡೆಸಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಅನಿಲ್ ದೇಶಮುಖ್

ದೇಶಮುಖ್ ವಿರುದ್ಧದ ಪ್ರಕರಣದ ಪ್ರಾಥಮಿಕ ವಿಚಾರಣೆಗೆ ಸಂಬಂಧಿಸಿದ ರಹಸ್ಯ ದಾಖಲೆಗಳನ್ನು ಸೋರಿಕೆ ಮಾಡಿದ ಆರೋಪದ ಮೇಲೆ ಸಿಬಿಐ ಅಧಿಕಾರಿಗಳು ಸೆಪ್ಟೆಂಬರ್ 2ರಂದು ದೇಶಮುಖ್ ಅವರ ವಕೀಲ ಆನಂದ್ ದಾಗಾ ಮತ್ತು ಸಿಬಿಐನ ಸಬ್ ಇನ್‌ಸ್ಪೆಕ್ಟರ್ ಅಭಿಷೇಕ್ ತಿವಾರಿ ಅವರನ್ನು ಬಂಧಿಸಿದ್ದರು.

ದೇಶಮುಖ್ ವಿರುದ್ಧದ ಭ್ರಷ್ಟಾಚಾರದ ಆರೋಪಗಳ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಆಲಿಸುವಾಗ ಬಾಂಬೆ ಹೈಕೋರ್ಟ್ ನೀಡಿದ್ದ ಆದೇಶದ ಮೇರೆಗೆ ಸಿಬಿಐ ಪ್ರಾಥಮಿಕ ತನಿಖೆ ಆರಂಭಿಸಿತ್ತು.

ದೇಶಮುಖ್ ವಿರುದ್ಧದ ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದ ವಿಚಾರಣೆ ಮತ್ತು ತನಿಖೆಯ ವಿವರಗಳನ್ನು ನೀಡುವ ವಕೀಲ ದಾಗಾ ಅವರು ಐಫೋನ್ 12 ಪ್ರೊ ಅನ್ನು ತಿವಾರಿಗೆ ಲಂಚವಾಗಿ ಕೊಡಿಸಿದ್ದರು. ಅಲ್ಲದೇ ತಿವಾರಿ ಅವರೊಂದಿಗೆ ದಾಗಾ ನಿರಂತರ ಸಂಪರ್ಕದಲ್ಲಿದ್ದು, ಈ ಪ್ರಕರಣದ ಮಾಹಿತಿ ಸೋರಿಕೆಗೆ ಲಂಚ ಪಡೆದಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

ನಟ ನೆಡುಮುಡಿ ವೇಣು ಇನ್ನಿಲ್ಲ

ತಿರುವನಂತಪುರ (ಪಿಟಿಐ): ಮಲಯಾಳ ಚಿತ್ರರಂಗದ ಹೆಸರಾಂತ ನಟ ನೆಡುಮುಡಿ ವೇಣು ಅವರು ಸೋಮವಾರ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 73 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಕೋವಿಡ್‌ನಿಂದ ಗುಣಮುಖರಾಗಿದ್ದ ಅವರು ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದರು. ಆಯಾಸಗೊಂಡಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ನಿಧನರಾದರು ಎಂದು ಚಿತ್ರರಂಗದ ಮೂಲಗಳು ಹೇಳಿವೆ.

ಅಂತ್ಯಕ್ರಿಯೆ ಮಂಗಳವಾರ ನಡೆಯಲಿದೆ. ನಟ ನೆಡುಮುಡಿ ವೇಣು ಅವರು ತಮ್ಮ 40 ವರ್ಷಗಳ ಸುದೀರ್ಘ ಸಿನಿ ಪಯಣದಲ್ಲಿ ಅವರು 500ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು.

ವೇಣು ಅವರು ರಂಗಭೂಮಿ ಕಲಾವಿದರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ್ದರು. 1978ರಲ್ಲಿ ಜಿ.ಅರವಿಂದನ್ ಅವರ 'ತಂಬು' ಚಿತ್ರದ ಮೂಲಕ ಮಲಯಾಳ ಚಿತ್ರರಂಗವನ್ನು ಪ್ರವೇಶಿಸಿದ್ದರು. ನಾಯಕ, ಖಳನಾಯಕ, ಹಾಸ್ಯಪ್ರಧಾನ ಪಾತ್ರಗಳು ಸೇರಿದಂತೆ ಹಲವು ವೈವಿಧ್ಯಮಯ ಪಾತ್ರಗಳನ್ನು ನಿಭಾಯಿಸಿದ್ದು, ತಮ್ಮದೇ ಆದ ಛಾಪು ಮೂಡಿಸಿದ್ದರು.



ಭಾರತೀಯ ಚಿತ್ರರಂಗದ ಪ್ರತಿಭಾನ್ವಿತ ನಟರಲ್ಲಿ ಒಬ್ಬರು ಎಂದೇ ಗುರುತಿಸಲ್ಪಡುವ ವೇಣು ಅವರು, ಹೆಸರಾಂತ ರಂಗಕರ್ಮಿ ಕವಳಂ ನಾರಾಯಣಪಣಿಕ್ಕರ್ ಅವರ ಪ್ರಯೋಗಶೀಲ ರಂಗತಂಡದ ಮೂಲಕ ವೃತ್ತಿ ಬದುಕನ್ನು ಆರಂಭಿಸಿದ್ದರು.

ಅವರ ನಟನಾ ಸಾಮರ್ಥ್ಯ, ಪ್ರತಿಭೆಗೆ ಕನ್ನಡಿ ಹಿಡಿದಿದ್ದ ಚಿತ್ರ 1979ರಲ್ಲಿ ತೆರೆಕಂಡಿದ್ದ 'ತಂಕರ'. ಪದ್ಮರಾಜನ್ ರಚನೆ, ಭರತನ್ ನಿರ್ದೇಶನದ ಈ ಚಿತ್ರದಲ್ಲಿ ಅವರು ಮರಗೆಲಸದವನ ಪಾತ್ರ ನಿಭಾಯಿಸಿದ್ದರು. ತದನಂತರದ್ದು ಯಶೋಗಾಥೆ.

ಚಿತ್ರರಂಗದ ಪರಿಣತ ಎನ್. ಬಾಲಗೋಪಾಲ್ ಅವರ ಪ್ರಕಾರ, ವೇಣು ತಮ್ಮ ಸಹಜ ಅಭಿಯನದಿಂದ ಗಮನಸೆಳೆದಿದ್ದರು. ಪಿ.ಪದ್ಮರಾಜನ್ ರಚಿಸಿ, ನಿರ್ದೇಶಿಸಿದ್ದ ಚಿತ್ರಗಳಲ್ಲಿ ಅದ್ವಿತೀಯ ಅಭಿನಯವನ್ನು ನೀಡಿದ್ದರು. ಇವುಗಳಲ್ಲಿ ಮುಖ್ಯವಾಗಿ ಹೆಸರಿಸಬಹುದಾದ ಚಿತ್ರಗಳು: ಕಳ್ಳನ್ ಪವಿತ್ರನ್ ಮತ್ತು ಒರಿಡಾತೋರು ಫಯಲವನ್.

30 ಮತ್ತು 40ನೇ ವಯಸ್ಸಿನಲ್ಲಿಯೇ 70 ವರ್ಷದ ವ್ಯಕ್ತಿಯ ಪಾತ್ರಧಾರಿಯಾಗಿ ಅಭಿನಯಿಸಿಸಿ ಪಾತ್ರಕ್ಕೆ ಜೀವತುಂಬಿದ್ದರು. ಮಲಯಾಳ ಕಾವ್ಯಗಳ ವಾಚನದಲ್ಲಿಯೇ ಸಿದ್ಧಹಸ್ತರಾಗಿದ್ದು, ದಕ್ಷಿಣ ಭಾರತದಲ್ಲಿಯೇ ಹೆಸರಾಗಿದ್ದರು.

1948ರಲ್ಲಿ ಅಲಪ್ಪುಜಾ ಜಿಲ್ಲೆಯಲ್ಲಿ ಜನಿಸಿದ್ದ ನೆಡುಮುಡಿ ವೇಣು ಕಾಲೇಜು ದಿನಗಳಲ್ಲಿಯೇ ನಾಟಕಗಳಲ್ಲಿ ಅಭಿನಯಿಸಿದ್ದರು. ಆಗ ಅವರೊಂದಿಗೆ ನಟಿಸಿದ್ದ ಫಾಜಿಲ್ ಬಳಿಕ ಜನಪ್ರಿಯ ಚಿತ್ರನಿರ್ದೇಶಕರಾಗಿ ಹೊರಹೊಮ್ಮಿದ್ದರು.

ಹಲವು ರಾಷ್ಟ್ರೀಯ ಮತ್ತು ರಾಜ್ಯ ಚಲನಚಿತ್ರ ಪ್ರಶಸ್ತಿಗಳ ಪುರಸ್ಕೃತರಾಗಿದ್ದರು. ಮಲಯಾಳದ ಕಿರುತೆರೆ ಧಾರವಾಹಿ ಕೈರಾಳಿವಿಲಾಸಂ ಅನ್ನು ನಿರ್ದೇಶಿಸಿ, ಒಂದು ಪಾತ್ರವನ್ನೂ ನಿಭಾಯಿಸಿದ್ದರು. ದೂರದರ್ಶನ ಇದನ್ನು ನಿರ್ಮಾಣ ಮಾಡಿತ್ತು.

ಸುಬ್ರಹ್ಮಣ್ಯಂ ಅವರು ನಿರ್ದೇಶಿಸಿದ್ದ 'ಎಂಟೆ ಮಳಾ' ಅವರು ನಟಿಸಿದ್ದ ಕಡೆಯ ಚಿತ್ರ. ವೇಣು ಅಗಲಿಕೆಗೆ ಚಿತ್ರರಂಗ, ರಾಜಕೀಯ ರಂಗದ ಹಲವರು ಕಂಬನಿ ಮಿಡಿದಿದ್ದು, ಅವರ ನಟನಾ ಕೌಶಲವನ್ನು ಸ್ಮರಿಸಿದ್ದಾರೆ.

ಉತ್ತರ ಪ್ರದೇಶ: ದಲಿತ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ

ನೊಯ್ಡಾ: ಉತ್ತರ ಪ್ರದೇಶದ ನೋಯ್ಡಾ ಬಳಿಯ ಜೇವರ್ ಪ್ರದೇಶದಲ್ಲಿ ಮಧ್ಯ ವಯಸ್ಸಿನ ಪರಿಶಿಷ್ಟ ಜಾತಿಯ ಮಹಿಳೆ ಮೇಲೆ ಪರಿಚಿತ ವ್ಯಕ್ತಿಗಳೇ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಬಿಎಸ್ಪಿ, ಕಾಂಗ್ರೆಸ್, ಸಮಾಜವಾದಿ ಪಕ್ಷಗಳು ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿವೆ.

ಸಂತ್ರಸ್ತ ಮಹಿಳೆ ಭಾನುವಾರ ಬೆಳಿಗ್ಗೆ ಜಾನುವಾರುಗಳಿಗೆ ಹುಲ್ಲು ತರುವುದಕ್ಕಾಗಿ ಗ್ರಾಮದಿಂದ ಹೊರಗೆ ಹೋಗಿದ್ದಾಗ, ಪ್ರಕರಣದ ಪ್ರಮುಖ ಆರೋಪಿಯು ಜಾನುವಾರುಗಳನ್ನು ಮೇಯಿಸಲು ಅದೇ ಸಮಯಕ್ಕೆ ಅಲ್ಲಿಗೆ ಬಂದಿದ್ದಾನೆ. ಆಗ ಈ ದುಷ್ಕೃತ್ಯ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಫ್‌ಐಆರ್ ದಾಖಲಾಗಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ.

ಡಿಸಿಪಿ (ಮಹಿಳಾ ಮತ್ತು ಮಕ್ಕಳ ಸುರಕ್ಷತೆ ವಿಭಾಗ) ವೃಂದಾ ಶುಕ್ಲಾ, 'ಭಾನುವಾರ ಬೆಳಿಗ್ಗೆ 9.30ರಿಂದ 10.30ರ ಒಳಗೆ ಗ್ರಾಮದ ಸಮೀಪದ ಬಯಲು ಪ್ರದೇಶದಲ್ಲಿ ಈ ದುಷ್ಕೃತ್ಯ ನಡೆದಿದೆ. ಸಂತ್ರಸ್ತೆ ಮತ್ತು ಆರೋಪಿ ಇಬ್ಬರೂ ಒಂದೇ ಗ್ರಾಮದವರು, ಪರಸ್ಪರ ಪರಿಚಿತರು. ಜಾನುವಾರುಗಳಿಗೆ ಮೇವು ತರಲು ಮತ್ತು ಅವುಗಳನ್ನು ಮೇಯಿಸಲು ಇಬ್ಬರೂ ನಿತ್ಯ ಈ ಜಾಗಕ್ಕೆ ಬರುತ್ತಿದ್ದರು' ಎಂದು ಹೇಳಿದ್ದಾರೆ.

ಪ್ರಮುಖ ಆರೋಪಿ ಮಾದಕ ವ್ಯಸನಿ. ಮಹಿಳೆಯನ್ನು ಹೊಲಕ್ಕೆ ಎಳೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದಾನೆ ಎಂದು ಅವರು ತಿಳಿಸಿದ್ದಾರೆ.

ರೈಲಿನಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ: 8 ಆರೋಪಿಗಳ ಬಂಧನ

ಮುಂಬೈ(ಪಿಟಿಐ): ಮಹಾರಾಷ್ಟ್ರದ ಇಗತ್‌ಪುರಿ ಮತ್ತು ಕಾಸರ ರೈಲು ನಿಲ್ದಾಣಗಳ ನಡುವೆ ಲಖನೌ -ಮುಂಬೈ ಪುಷ್ಪಕ್ ಎಕ್ಸ್‌ಪ್ರೆಸ್ ರೈಲಿನಲ್ಲಿ 20 ವರ್ಷದ ನವ ವಿವಾಹಿತೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಪ್ರಯಾಣಿಕರನ್ನು ದರೋಡೆ ಮಾಡಿದ್ದ ಎಲ್ಲ ಎಂಟು ಆರೋಪಿಗಳನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಶುಕ್ರವಾರ ರಾತ್ರಿ ಈ ಘಟನೆ ನಡೆದಿತ್ತು. ಆರೋಪಿಗಳು ಇಗತ್‌ಪುರಿಯಲ್ಲಿ ಮುಂಬೈಗೆ ಹೋಗುವ ರೈಲು ಹತ್ತಿದ್ದರು. ರೈಲು ಘಾಟ್ ಸೆಕ್ಷನ್ ಮೂಲಕ ಹಾದು ಹೋಗುತ್ತಿದ್ದಾಗ ನವ ವಿವಾಹಿತೆ ಮೇಲೆ ಅತ್ಯಾಚಾರ ಎಸಗಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಮುಂಬೈನಲ್ಲಿ ನೆಲೆಸಲು ಪತಿ ಜತೆಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ 20 ವರ್ಷದ ನವ ವಿವಾಹಿತೆ ಮೇಲೆ ಆರೋಪಿಗಳು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ. ಮಹಿಳೆಯ ಪತಿ ಆಕೆಯನ್ನು ರಕ್ಷಿಸಲು ಯತ್ನಿಸಿದಾಗ, ಆರೋಪಿಗಳು ಆತನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬುಡಕಟ್ಟು ಯುವತಿ ಮೇಲೆ ಅತ್ಯಾಚಾರ

ಕೋಟ (ರಾಜಸ್ಥಾನ): ಬುಡಕಟ್ಟು ಸಮುದಾಯಕ್ಕೆ ಸೇರಿದ ಯುವತಿಯ ಮೇಲೆ ಆಕೆಯ ನೆರೆಹೊರೆಯವರು ಒಂದು ವರ್ಷದಿಂದ ಪದೇಪದೇ ಅತ್ಯಾಚಾರ ಎಸಗಿದ್ದು, ನಂತರ ಗರ್ಭಪಾತದ ಮಾತ್ರೆಗಳನ್ನು ನೀಡಿರುವ ಪ್ರಕರಣ ರಾಜಸ್ಥಾನದ ಜಲವಾರ್ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ.

'ಯುವತಿಗೆ 18ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿದೆ ಎಂದು ಪೋಷಕರು ಹೇಳಿದ್ದರೂ ಸಹ ಪೊಲೀಸರು ಆಕೆಯ ನಿಖರವಾದ ವಯಸ್ಸನ್ನು ಪತ್ತೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಬಹುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮಂಡಾವರ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಯುವತಿಗೆ ಹೊಟ್ಟೆನೋವು ಕಾಣಿಸಿದ್ದು, ಸ್ಥಳೀಯ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಪರೀಕ್ಷೆಯಲ್ಲಿ ಆರು ತಿಂಗಳ ಗರ್ಭಿಣಿ ಎಂದು ವೈದ್ಯರು ದೃಢಪಡಿಸಿದ್ದಾರೆ. ಆರೋಪಿಗಳು ನೀಡಿದ ಗರ್ಭಪಾತ ಮಾತ್ರೆಗಳಿಂದ ಭ್ರೂಣವು ಮೃತಪಟ್ಟಿದೆ' ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ರಾಜೀವ್ ಪರಿಹಾರ್ ತಿಳಿಸಿದ್ದಾರೆ.

ಸಚಿವ ಆರ್ಯ, ಶಾಸಕ ಸಂಜೀವ್ ಕಾಂಗ್ರೆಸ್‌ಗೆ

ನವದೆಹಲಿ (ಪಿಟಿಐ): ಉತ್ತರಾಖಂಡದ ಸಾರಿಗೆ ಸಚಿವ ಯಶ್‌ಪಾಲ್ ಆರ್ಯ ಮತ್ತು ಶಾಸಕರೂ ಆದ ಅವರ ಮಗ ಸಂಜೀವ್ ಬಿಜೆಪಿಗೆ ರಾಜೀನಾಮೆ ನೀಡಿದ್ದು, ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಮುಂದಿನ ವರ್ಷ ಉತ್ತರಾಖಂಡ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಈ ಬೆಳವಣಿಗೆಯು ರಾಜ್ಯದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಯಶಪಾಲ್ ಆರ್ಯ 2007 ರಿಂದ 2014ರ ಅವಧಿಯಲ್ಲಿ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. 2017ರ ವಿಧಾನಸಭೆ ಚುನಾವಣೆಗೂ ಮುನ್ನ ಬಿಜೆಪಿಗೆ ಸೇರ್ಪಡೆಯಾಗಿದ್ದರು.

ಆರ್ಯ ಮತ್ತು ಅವರ ಮಗ, ಬೆಂಬಲಿಗರ ಜೊತೆಗೆ ಹಿರಿಯ ಮುಖಂಡರಾದ ಹರೀಶ್ ರಾವತ್, ಕೆ.ಸಿ.ವೇಣುಗೋಪಾಲ್, ರಣದೀಪ್ ಸುರ್ಜೇವಾಲಾ ಅವರ ಉಪಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಇದಕ್ಕೂ ಮುನ್ನ ಅವರು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ, ಚರ್ಚಿಸಿದ್ದರು.

'ನಾನು ನನ್ನ ಕುಟುಂಬಕ್ಕೆ ಮರಳಿದ್ದು, ಇದೊಂದು ಮುಖ್ಯವಾದ ದಿನ. ನನ್ನ ಪಾಲಿಗೆ ಇದು ಘರ್ ವಾಪಸಿ. ಇದಕ್ಕಿಂತ ಖುಷಿಯಾದ ಸಂಗತಿ ಮತ್ತೊಂದಿಲ್ಲ. ಈಗ ನಿರುಮ್ಮಳನಾಗಿದ್ದೇನೆ' ಎಂದು ಆರ್ಯ ಪ್ರತಿಕ್ರಿಯಿಸಿದರು.

ಆರ್ಯ ಅವರು ಉತ್ತರಾಖಂಡದಲ್ಲಿ ಬಜ್‌ಪುರ್ (ಮೀಸಲು) ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಮಾಜಿ ಸ್ಪೀಕರ್ ಆಗಿದ್ದು, ಹರೀಶ್ ರಾವತ್ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರೂ ಆಗಿದ್ದರು.

ಪಿಎಂಎಲ್‌ಎ ಅನ್ವಯ ಪಿತ್ರಾರ್ಜಿತ ಆಸ್ತಿ ಜಪ್ತಿ

ಕಾನೂನು ಪರಿಶೀಲನೆಗೆ 'ಸುಪ್ರೀಂ' ಸಮ್ಮತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆ (ಪಿಎಂಎಲ್‌ಎ) ಅನ್ವಯ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಆರೋಪಿಯ ಪಿತ್ರಾರ್ಜಿತ ಆಸ್ತಿ ಜಪ್ತಿ ಮಾಡಬಹುದೇ ಎಂಬ ಕಾನೂನಾತ್ಮಕ ಅಂಶ ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿತು.

ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ಹಣ ವರ್ಗಾವಣೆ ನಿಯಂತ್ರಣ ಕಾಯ್ದೆ 2002ರ ಅನ್ವಯ ಕ್ರಮ ಜರುಗಿಸಲಾಗದು ಎಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಇ.ಡಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಅಲ್ಲದೆ, ಪ್ರಕರಣದ ಇಬ್ಬರು ಆರೋಪಿಗಳ ವಿರುದ್ಧದ ತನಿಖೆಯನ್ನು ಹೈಕೋರ್ಟ್ ರದ್ದುಪಡಿಸಿತ್ತು.

ನ್ಯಾಯಮೂರ್ತಿಗಳಾದ ಎ.ಎಂ.ಖಾನ್‌ವಿಲ್ಕರ್ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ನ್ಯಾಯಪೀಠವು ಇ.ಡಿ ಮನವಿಯನ್ನು ಆಧರಿಸಿ, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯಿಸಲು ಸೂಚಿಸಿ ಆರೋಪಿಗಳಿಗೆ ನೋಟಿಸ್ ಜಾರಿಗೆ ಅ.8ರಂದು ಆದೇಶಿಸಿತು.



ಇ.ಡಿ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು 'ಪಿಎಂಎಲ್‌ಎ ಕಾಯ್ದೆಯಡಿ ಪಿತ್ರಾರ್ಜಿತ ಆಸ್ತಿ ಜಪ್ತಿ ಮಾಡಲಾಗದು ಎಂದು ಹೇಳುವ ಮೂಲಕ ಹೈಕೋರ್ಟ್ ಸ್ಪಷ್ಟವಾಗಿ ಲೋಪ ಎಸಗಿದೆ' ಎಂದು ವಾದಿಸಿದರು.

ಹೈಕೋರ್ಟ್‌ನ ಈ ಅಭಿಪ್ರಾಯವು ಪಿಎಂಎಲ್‌ಎ ಕಾಯ್ದೆ 2002ರ ಸೆಕ್ಷನ್ 2 (1)(ಯು) ನಲ್ಲಿ ಉಲ್ಲೇಖವಾಗಿರುವ 'ಅಪರಾಧದ ಆದಾಯ' (ಪ್ರೊಸೀಡ್ಸ್ ಆಫ್ ಕ್ರೈಮ್) ವ್ಯಾಖ್ಯಾನಕ್ಕೆ ವಿರುದ್ಧವಾದುದು ಎಂದೂ ರಾಜು ಅವರು ವಾದಿಸಿದರು.

'ಅಪರಾಧದ ಆದಾಯ'ದ ವ್ಯಾಖ್ಯಾನವೆಂದರೆ ಉಲ್ಲೇಖಿತ ಅಪರಾಧಕ್ಕೆ ಸಂಬಂಧಿಸಿದ ಕ್ರಿಮಿನಲ್ ಚಟುವಟಿಕೆಗಳಿಂದ ಯಾವುದೇ ವ್ಯಕ್ತಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಹೊಂದಿರುವ ಅಥವಾ ಪಡೆದಿರುವ ಯಾವುದೇ ಆಸ್ತಿ ಅಥವಾ ಇಂಥ ಆಸ್ತಿಯ ಮೌಲ್ಯ ಅಥವಾ ಆಸ್ತಿಯನ್ನು ದೇಶದ ಹೊರಗಡೆ ಹೊಂದಿದ್ದರೆ, ದೇಶದಲ್ಲಿ ಅದಕ್ಕೆ ಸರಿ ಸಮಾನ ಮೌಲ್ಯ ಎಂದಾಗಿದೆ' ಎಂದರು.

ಹೈಕೋರ್ಟ್ ತನ್ನ ಆದೇಶದಲ್ಲಿ ಮೊದಲ ಆರೋಪಿ ವಿರುದ್ಧ ಅವರು ಈಗಾಗಲೇ ಮೃತಪಟ್ಟಿದ್ದಾರೆ ಎಂಬ ಕಾರಣಕ್ಕೆ ತನಿಖೆ ವಜಾ ಮಾಡಿತ್ತು. ಎರಡನೇ ಆರೋಪಿಯ ವಿರುದ್ಧ ಬೆಂಗಳೂರಿನ ಪ್ರಧಾನ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶರ ಎದುರು ಹೂಡಿದ್ದ ಪ್ರಕರಣದ ತನಿಖೆಯನ್ನು ರದ್ದುಪಡಿಸಿತ್ತು.

ಸಂಕ್ಷಿಪ್ತ ಸುದ್ದಿ

ಪಾನ್: ಜಾಹೀರಾತು ಕೈಬಿಟ್ಟ ಅಮಿತಾಭ್



ಮುಂಬೈ (ಪಿಟಿಐ): ಪ್ರಸಿದ್ಧ ನಟ ಅಮಿತಾಭ್ ಬಚ್ಚನ್ ಅವರು ಪಾನ್ ಮಸಾಲಾ ಬ್ರ್ಯಾಂಡ್ ಜಾಹೀರಾತು ಪ್ರಚಾರದಿಂದ ಹಿಂದೆ ಸರಿದಿದ್ದಾರೆ.

ಪಾನ್ ಮಸಾಲಾ ಬ್ರ್ಯಾಂಡ್‌ನ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದಕ್ಕೆ ನಟ ಅಮಿತಾಭ್ (79) ಅವರ ಹಲವು ಅಭಿಮಾನಿಗಳು ಅಸಮಾಧಾನ ವ್ಯಕ್ತಪಡಿಸಿದ್ದರು.

'ಅಮಿತಾಭ್ ಅವರು ಇನ್ನು ಮುಂದೆ ಪಾನ್‌ಮಸಾಲಾ ಪ್ರಚಾರದಲ್ಲಿ ಭಾಗಿಯಾಗುವುದಿಲ್ಲ' ಎಂದು ಅವರ ಕಚೇರಿಯ ಬ್ಲಾಗ್ ಪೋಸ್ಟ್‌ವೊಂದು ಭಾನುವಾರ ರಾತ್ರಿ ತಿಳಿಸಿದೆ.


ಪಾನ್ ಮಸಾಲಾ ಬ್ರ್ಯಾಂಡ್‌ಗಳನ್ನು ಉತ್ತೇಜಿಸುವ ಜಾಹೀರಾತುಗಳಲ್ಲಿ ಅಮಿತಾಭ್ ಬಚ್ಚನ್ ಅವರು ಭಾಗಿಯಾಗಬಾರದು ಎಂದು ರಾಷ್ಟ್ರೀಯ ತಂಬಾಕು ನಿರ್ಮೂಲನೆ ಸಂಸ್ಥೆ (ಎನ್‌ಒಟಿಇ) ಅಧ್ಯಕ್ಷ ಡಾ.ಶೇಖರ್ ಸಲ್ಕರ್ ಅವರು ಕಳೆದ ತಿಂಗಳು ಪತ್ರವೊಂದರಲ್ಲಿ ಮನವಿ ಮಾಡಿದ್ದರು.

ಕಾಬೂಲ್ ತೊರೆಯಲು ಪ್ರಜೆಗಳಿಗೆ ಸೂಚನೆ

ಕಾಬೂಲ್ (ಎಎಫ್‌ಪಿ): ಇಲ್ಲಿನ ಜನಪ್ರಿಯ ಹೋಟೆಲ್ ಸೆರೆನಾ ಸೇರಿದಂತೆ, ಅದರ ಸುತ್ತಮುತ್ತಲಿರುವ ಯಾವುದೇ ಐಷಾರಾಮಿ ಹೋಟೆಲ್‌ಗಳಲ್ಲಿ ವಾಸ್ತವ್ಯ ಮಾಡದಂತೆ ಅಮೆರಿಕ ಮತ್ತು ಬ್ರಿಟನ್ ಸೋಮವಾರ ತಮ್ಮ ದೇಶದ ನಾಗರಿಕರನ್ನು ಎಚ್ಚರಿಸಿದೆ. ಭದ್ರತಾ ಬೆದರಿಕೆಗಳಿರುವ ಹಿನ್ನೆಲೆಯಲ್ಲಿ, ಸೆರೆನಾ ಅಥವಾ ಅದರ ಸಮೀಪವಿರುವ ಹೋಟೆಲ್‌ಗಳಲ್ಲಿ ನೆಲೆಸಿರುವವರು ತಕ್ಷಣವೇ ಅಲ್ಲಿಂದ ನಿರ್ಗಮಿಸುವಂತೆ ಅಮೆರಿಕ ಸರ್ಕಾರ ತಿಳಿಸಿದೆ.

ಬ್ರಿಟನ್ ವಿದೇಶಾಂಗ ಸಚಿವಾಲಯ ಅಫ್ಗಾನಿಸ್ತಾನಕ್ಕೆ ಹೋಗದಂತೆ ತನ್ನ ಪ್ರಜೆಗಳಿಗೆ ಸಲಹೆ ನೀಡಿದೆ.

ಷೇರುಪೇಟೆ ವಹಿವಾಟು 76



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,895
ಇಂದಿನ ಅಂತ್ಯ	17,945
▲	50
ದಿನದ ಗರಿಷ್ಠ	18,041

ವಿನಿಮಯ ದರ

$ ಡಾಲರ್	75.36
£ ಪೌಂಡ್	102.63
€ ಯುರೊ	87.08
¥ ಯೆನ್ (100ಕ್ಕೆ)	67

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ವಾಹನ, ಇಂಧನ, ಬ್ಯಾಂಕಿಂಗ್ ಕಂಪನಿಗಳ ಗಳಿಕೆ

ಹೊಸ ಎತ್ತರಕ್ಕೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರು ಪೇಟೆಗಳು ಸೋಮವಾರದ ವಹಿವಾಟಿನಲ್ಲಿ ಹೊಸ ಎತ್ತರಕ್ಕೆ ಏರಿಕೆ ಕಂಡವು. ವಾಹನ, ಇಂಧನ ಮತ್ತು ಬ್ಯಾಂಕಿಂಗ್ ವಲಯದ ಷೇರುಗಳ ಉತ್ತಮ ಗಳಿಕೆಯಿಂದಾಗಿ ಷೇರುಪೇಟೆಗಳು ಈ ಮಟ್ಟವನ್ನು ತಲುಪಿವೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 76 ಅಂಶ ಹೆಚ್ಚಳ ಕಂಡು ಹೊಸ ಎತ್ತರವಾದ 60,135 ಅಂಶಗಳಿಗೆ ತಲುಪಿತು. ಮಧ್ಯಂತರ ವಹಿವಾಟಿನಲ್ಲಿ 60,476 ಅಂಶಗಳಿಗೆ ಏರಿಕೆ ಕಂಡಿತ್ತು.

ಮೂರು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 5.03 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ. ಇದರಿಂದ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 267.24 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 50 ಅಂಶ ಹೆಚ್ಚಾಗಿ 17,945 ಅಂಶಗಳಿಗೆ ಏರಿಕೆ ಕಂಡಿತು. ಮಧ್ಯಂತರ ವಹಿವಾಟಿನಲ್ಲಿ ಗರಿಷ್ಠ ಮಟ್ಟವಾದ 18,041 ಅಂಶಗಳಿಗೆ ತಲುಪಿತ್ತು.

ಏಷ್ಯಾದ ಮಾರುಕಟ್ಟೆಗಳಲ್ಲಿನ ಸಕಾರಾತ್ಮಕ ವಹಿವಾಟು ದೇಶಿ ಷೇರು ಪೇಟೆಗಳ ಮೇಲೆ ಪ್ರಭಾವ ಬೀರಿತು. ರಫ್ತು ವಹಿವಾಟು ಆರೋಗ್ಯಕರ ಬೆಳವಣಿಗೆ ಕಾಣುತ್ತಿರುವ ವರದಿ ಸಹ ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ಆನಂದ್ ರಾಠಿ ಕಂಪನಿಯ ಸಂಶೋಧನಾ ಮುಖ್ಯಸ್ಥ ನರೇಂದ್ರ ಸೋಲಂಕಿ ತಿಳಿಸಿದ್ದಾರೆ.

ರೂಪಾಯಿ 37 ಪೈಸೆ ಕುಸಿತ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 37 ಪೈಸೆಗಳಷ್ಟು ಕುಸಿತ ಕಂಡಿದ್ದು, ಒಂದು ಡಾಲರ್‌ಗೆ ₹ 75.36ರಂತೆ ವಿನಿಮಯಗೊಂಡಿತು. ಇದು 15 ತಿಂಗಳ ಕನಿಷ್ಠ ಮಟ್ಟವಾಗಿದೆ.

ಕಚ್ಚಾ ತೈಲ ದರ ಏರಿಕೆಯಿಂದ ಆಮದು ವೆಚ್ಚ ಹೆಚ್ಚಾಗುವ ಆತಂಕ ಹಾಗೂ ವಿದೇಶಿ ಬಂಡವಾಳ ಹೊರಹರಿವಿನಿಂದಾಗಿ ಭಾರತದ ಕರೆನ್ಸಿಯು ಇದೇ ಮೊದಲ ಬಾರಿಗೆ 75 ಕ್ಕಿಂತ ಕೆಳ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿದೆ ಎಂದು ತಜ್ಞರು ಹೇಳಿದ್ದಾರೆ.

ಟಿಸಿಎಸ್‌ಗೆ ₹ 92,032 ಕೋಟಿ ನಷ್ಟ

ಟಿಸಿಎಸ್ ಕಂಪನಿಯ ಸೆಪ್ಟೆಂಬರ್ ತ್ರೈಮಾಸಿಕದ ಫಲಿತಾಂಶವು ಮಾರುಕಟ್ಟೆಯ ನಿರೀಕ್ಷೆಯನ್ನು ತಲುಪಲು ಸಾಧ್ಯವಾಗಿಲ್ಲ. ಹೀಗಾಗಿ ಕಂಪನಿಯ ಷೇರುಗಳ ಮೌಲ್ಯವು ಸೋಮವಾರ ಶೇ 6ಕ್ಕೂ ಹೆಚ್ಚಿನ ಇಳಿಕೆ ಕಂಡಿದೆ.

ಬಿಎಸ್‌ಇನಲ್ಲಿ ಷೇರು ಮೌಲ್ಯ ಶೇ 6.32ರಷ್ಟು ಇಳಿಕೆ ಆದರೆ, ಎನ್‌ಎಸ್‌ಇ-ನಲ್ಲಿ ಶೇ 6.29ರಷ್ಟು ಇಳಿಕೆ ಆಗಿದೆ. ಬಿಎಸ್‌ಇನಲ್ಲಿ ಕಂಪನಿಯ ಬಂಡವಾಳ ಮೌಲ್ಯದಲ್ಲಿ ₹ 92,032 ಕೋಟಿ ಕರಗಿದ್ದು, ಒಟ್ಟಾರೆ ಬಂಡವಾಳ ಮೌಲ್ಯವು ₹ 13.63 ಲಕ್ಷ ಕೋಟಿಗೆ ಇಳಿಕೆ ಆಗಿದೆ.

‘ವಾಕರೂ’ದಿಂದ ಹೊಸ ಪ್ರಚಾರ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದರಕ್ಷೆಗಳ ಪ್ರಮುಖ ಬ್ರ್ಯಾಂಡ್ ಆಗಿರುವ ವಾಕರೂ, ಈ ಬಾರಿಯ ಹಬ್ಬದ ಋತುವಿನಲ್ಲಿ ‘ವಾಕ್ ಮೋರ್, ರೆಸ್ಟ್‌ಲೆಸ್’ ಎನ್ನುವ ಹೊಸ ಮಾರುಕಟ್ಟೆ ಪ್ರಚಾರ ಅಭಿಯಾನ ಆರಂಭಿಸಿದೆ. ಇದರ ಭಾಗವಾಗಿ ಬಾಲಿವುಡ್ ನಟ ಅಮೀರ್ ಖಾನ್ ಅವರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಆರು ಟಿವಿ ಜಾಹೀರಾತುಗಳನ್ನು ಮಂಗಳವಾರದಿಂದ ಬಿಡುಗಡೆ ಮಾಡಲಿದೆ.

ಬ್ರ್ಯಾಂಡ್ ರಾಯಭಾರಿ ಅಮೀರ್ ಖಾನ್ ಅವರು ಪ್ರಚಾರ ಸರಣಿಯ ಪ್ರತಿ ಆವೃತ್ತಿಯಲ್ಲಿ ಖಾಸಗಿ ಪತ್ತೇದಾರ, ವೃತ್ತಿ ಸಲಹೆಗಾರ, ಪ್ರಾಂಶುಪಾಲ, ಸಿಬಿಐ ಅಧಿಕಾರಿ, ವೈದ್ಯ ಮತ್ತು ಅಜ್ಜನ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ಕಂಪನಿ ತಿಳಿಸಿದೆ.

ಗ್ರಾಹಕರಲ್ಲಿ ಬ್ರ್ಯಾಂಡ್ ಬಗ್ಗೆ ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ. ಹವಾಸ್ ಕ್ರಿಯೇಟಿವ್ ಗ್ರೂಪ್ ಇಂಡಿಯಾ ಸಂಸ್ಥೆಯು ಈ ಸರಣಿಯ ಪರಿಕಲ್ಪನೆಯನ್ನು ರೂಪಿಸಿ ಕಾರ್ಯಗತಗೊಳಿಸಿದೆ ಎಂದು ಹೇಳಿದೆ.

ಅಮೀರ್ ಖಾನ್ ಅವರೊಂದಿಗೆ ಈ ಹೊಸ ಪ್ರಚಾರ ಅಭಿಯಾನವನ್ನು ಆರಂಭಿಸಲು ನಾವು ಉತ್ಸುಕರಾಗಿದ್ದೇವೆ ಎಂದು ವಾಕರೂ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ವಿಕೆಸಿ ನೌಶದ್ ತಿಳಿಸಿದರು.

‘ಆಕಾಶ ಏರ್’ಗೆ ಎನ್‌ಒಸಿ

ನವದೆಹಲಿ (ಪಿಟಿಐ): ಭಾರತದ ಕೋಟ್ಯಧಿಪತಿ ರಾಕೇಶ್ ಜುಂಝುನ್‌ವಾಲಾ ಅವರು ಆರಂಭಿಸಲಿರುವ ವಿಮಾನಯಾನ ಕಂಪನಿ ‘ಆಕಾಶ ಏರ್’ ಕಾರ್ಯಾಚರಣೆಗೆ ನಾಗರಿಕ ವಿಮಾನಯಾನ ಸಚಿವಾಲಯವು ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ನೀಡಿದೆ ಎಂದು ಕಂಪನಿಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಸಚಿವಾಲಯದ ಬೆಂಬಲ ಮತ್ತು ಎನ್‌ಒಸಿ ನೀಡಿರುವುದಕ್ಕೆ ನಾವು ಕೃತಜ್ಞರಾಗಿರುತ್ತೇವೆ ಎಂದು ಆಕಾಶ್ ಏರ್‌ನ ಸಿಇಒ ವಿನಯ್ ದುಬೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 2022ರ ಬೇಸಿಗೆಯ ವೇಳೆಗೆ ಕಾರ್ಯಾರಂಭ ಮಾಡುವ ಗುರಿ ಹೊಂದಿರುವುದಾಗಿ ಹೇಳಿದೆ.

ನಮಸ್ತೇ ಶಾರದಾದೇವಿ ಕಾಶ್ಮೀರ ಪುರವಾಸಿನಿ!

• ನವೀನ ಗಂಗೋತ್ರಿ



> ತಿಳಿವು, ಅರಿವು, ಶುಭ್ರತೆ, ಶುಚಿತೆ – ಇವು ಶಾರದೆಯ ವಿಶೇಷಣಗಳು. ಶಾರದೆಯ ವಾಹನವಾದರೋ ಶುಚಿತೆಯನ್ನೇ ಧರ್ಮವನ್ನಾಗಿಸಿಕೊಂಡಿರುವ ಹಂಸಪಕ್ಷಿ.

ಮೂಲತಃ ಜಗತ್ತು ಎನ್ನುವ ಪದದ ಅರ್ಥವೇ ‘ಸಂಚಲಿಸುತ್ತಿರುವಂಥದು’ ಎನ್ನುವುದು. ಜಗತ್ತನ್ನೆಲ್ಲ ವ್ಯಾಪಿಸಿರುವ ಎಲ್ಲ ವಿಧದ ಸಂಚಲನದ ಹಿನ್ನೆಲೆಯಲ್ಲಿರುವುದು ಒಂದೇ ಸಂಗತಿ – ಅದು ಶಕ್ತಿ. ನಿಜವೆಂದರೆ ಜಗತ್ತಿನ ಸಂಚಲನಗಳೆಲ್ಲವೂ ಶಕ್ತಿಯದ್ದೇ ಬೇರೆ ಬೇರೆ ಬಗೆಯ ತೋರಿಕೆಗಳೇ ಆಗಿವೆ. ಜಗತ್ತೂ ಸೇರಿದಂತೆ ಎಲ್ಲ ಸಂಭವಗಳಿಗೂ ಮೂಲವಾದ್ದು ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎನ್ನುವ ಮೂರು ಬಗೆಯ ಶಕ್ತಿಗಳು. ಎಲ್ಲಕ್ಕೂ ಕಾರಣವಾಗಿರುವ ಈ ಮೂರು ಸ್ವರೂಪದ ಶಕ್ತಿಯನ್ನು ಆರಾಧಿಸುವುದು ನಮ್ಮಲ್ಲಿ ಪರಂಪರೆಯಾಗಿ ಬೆಳೆದುಬಂದಿದೆ. ನವರಾತ್ರಿಯ ಒಂಬತ್ತು ದಿನಗಳು ಶಕ್ತಿಯ ಆರಾಧನೆಗೆ ಮೀಸಲು.

ಶರದೃತು ಶುರುವಾಗುತ್ತಿದ್ದಂತೆ ಒದಗುವ ಈ ಮಹಾಪರ್ವದಲ್ಲಿ ಶಕ್ತಿರೂಪಿಣಿಯಾದ ಕಾಳಿ, ಲಕ್ಷ್ಮೀ ಮತ್ತು ಸರಸ್ವತಿಯರನ್ನು ವಿಧಿವತ್ತಾಗಿ ಪೂಜಿಸಲಾಗುತ್ತದೆ. ಅದರಲ್ಲಿಯೂ ತಿಳಿವನ್ನೇ ಕೇಂದ್ರವಾಗಿ ಉಳ್ಳ ಭಾರತೀಯ ಸಂಪ್ರದಾಯದಲ್ಲಿ ಶಾರದೆಯೆಂಬ ತಿಳಿವಿನ ದೇವತೆಯ ಆರಾಧನೆಗೆ ಹೆಚ್ಚಿನ ಮಹತ್ತು. ಬಲ, ದ್ರವ್ಯ ಮತ್ತು ಅರಿವು – ಮಾನವಜೀವನದ ಈ ಮೂರು ಬಹುಮುಖ್ಯ ಸಂಗತಿಗಳಿಗೆ ದುರ್ಗಾ, ಲಕ್ಷ್ಮೀ ಮತ್ತು ಸರಸ್ವತಿಯರು ಸಂವಾದಿನಿಯರಾಗಿ ನಿಲ್ಲುತ್ತಾರೆ. ಒಂಬತ್ತು ದಿನಗಳ ಆರಾಧನಾ ಪದ್ಧತಿಯಲ್ಲಿ ಮೊದಲ ಮೂರು ದಿನಗಳನ್ನು ಆ ಶಕ್ತಿಯನ್ನು ದುರ್ಗೆಯನ್ನಾಗಿಯೂ, ಬಳಿಕದ ಮೂರು ದಿನಗಳನ್ನು ಲಕ್ಷ್ಮೀರೂಪದಲ್ಲಿಯೂ, ಮೂಲನಕ್ಷತ್ರದಿಂದ ಆರಂಭವಾಗುವ ಕೊನೆಯ ಮೂರು ದಿನಗಳನ್ನು ಶಾರದೆಯ ರೂಪದಲ್ಲಿಯೂ ಆರಾಧಿಸಲಾಗುತ್ತದೆ. ಶಕ್ತಿಯ ಈ ಮೂರು ಅಭಿವ್ಯಕ್ತಿಗಳಿಗೆ ತಂತ್ರಮಾರ್ಗದಲ್ಲಿ ಅದರದ್ದೇ ಆದ ಬೀಜಾಕ್ಷರಗಳೂ ಪೂಜಾವಿಧಾನಗಳೂ ಇವೆ.

ಶರತ್ಕಾಲದ ಚಂದ್ರನಿಗೂ ವೈಶಿಷ್ಟ್ಯವಿದೆ. ಬಿಳುಪಿಗೆ ಅನುಪಮವಾದ ಉದಾಹರಣೆ ಚಂದ್ರಮ. ಅದರಲ್ಲಿಯೂ ಶರತ್ಕಾಲದ ಚಂದ್ರನು ದೇವಿಯ ಮುಖಕ್ಕೆ ಉಪಮಾನವೂ ಹೌದು (ಶರಚ್ಚಂದ್ರನಿಭಾನನಾ). ಈ ಶರತ್ಕಾಲದ ಅಶ್ವಯುಜ ಮಾಸದ ಚಂದ್ರನು ಮೂಲನಕ್ಷತ್ರದಲ್ಲಿ ತೋರುವ ದಿನದಂದೇ ಶಾರದಾ ಸ್ಥಾಪನವನ್ನು (ಪೂಜಿಸುವುದಕ್ಕಾಗಿ ಪುಸ್ತಕಗಳನ್ನು ಪ್ರತಿಷ್ಠಾಪಿಸುವುದು) ಮಾಡಿ ಮೂರು ದಿನಗಳ ಕಾಲ ಪೂಜಿಸುವರು. ಬಿಳುಪು ಶಾರದೆಯ ವರ್ಣ. ಆಕೆಗೆ ಸಂಬಂಧಿಸಿದ್ದೆಲ್ಲವೂ ಶುಭ್ರ ಶುಭ್ರ. ಅದಕ್ಕಾಗಿಯೇ ಸಂಸ್ಕೃತದ ಮಹಾಕವಿ ದಂಡಿಯ ಮಾತಿನಲ್ಲಿ ಆಕೆ ‘ಸರ್ವಶುಕ್ಲಾ ಸರಸ್ವತೀ’ (ಎಲ್ಲ ಬೆಳ್ಮೆಯವಳೀಕೆ ಸರಸ್ವತಿ) ಎನ್ನಿಸಿಕೊಳ್ಳುತ್ತಾಳೆ. ಈಕೆ ನುಡಿಯ ಅಧಿದೇವತೆಯಾಗಿರುವುದರಿಂದ ಕನ್ನಡದ ರಸಋಷಿ ಕುವೆಂಪು ಈಕೆಯನ್ನು ‘ನುಡಿವೆಣ್’ ಎಂದು ಬಣ್ಣಿಸುತ್ತಾರೆ. ವೈದಿಕ ವಾಙ್ಮಯದಲ್ಲಿ ಸರ್ವದಾ ಸರಸ್ವತೀ ಎಂದು ಗುರುತಿಸಲ್ಪಡುವ ಬುದ್ಧಿಯ ಅಧಿದೇವತೆ ಶುಭ್ರವಾಗಿ ಹರಿಯುವ ಸರಸ್ವತಿಯೆಂಬ ನದಿಯೂ ಹೌದು. ಇದೀಗ ಗುಪ್ತಗಾಮಿನಿಯಾಗಿರುವ ಸರಸ್ವತೀನದಿಯ ನೀರು ತ್ರಿವೇಣೀ ಸಂಗಮದದಲ್ಲಿ ತೋರುವಂತೆ ಕೊಂಚ ಬಿಳುಪಿನ ಬಣ್ಣದ್ದು! ತಿಳಿವಿನ ದೇವತೆ ಎನ್ನುವ ಕನ್ನಡದ ಅವತರಣಿಕೆಯಾದರೂ ತಿಳಿತನ (ಶುಭ್ರತೆ) ಎಂಬ ಗುಣದ ಮೂಲಕ ಶಾರದೆಯ ಶ್ವೇತವರ್ಣವನ್ನೇ ಹೇಳುತ್ತಿದೆಯಷ್ಟೆ. ತಿಳಿವು, ಅರಿವು, ಶುಭ್ರತೆ, ಶುಚಿತೆ – ಇವು ಶಾರದೆಯ ವಿಶೇಷಣಗಳು. ಶಾರದೆಯ ವಾಹನವಾದರೋ ಶುಚಿತೆಯನ್ನೇ ಧರ್ಮವನ್ನಾಗಿಸಿಕೊಂಡಿರುವ ಹಂಸಪಕ್ಷಿ. ಶಾರದೆಯ ಉಪಾಸನೆಯ ಮೂಲಕ ಜ್ಞಾನಾನುಭೂತಿನ ತುತ್ತತುದಿಬಿಂದುವಿಗೆ ಪರಮಹಂಸಪದವೆಂಬ ಹೆಸರು ಸಹ ನಿಂತಿದೆ. ಭಾರತದಾದ್ಯಂತ ಉಪನಿಷತ್ತುಗಳ, ಬ್ರಹ್ಮಸೂತ್ರಗಳ ಮತ್ತು ಗೀತೆಯ ಸಾರವನ್ನು ಅದ್ವೈತ ತತ್ತ್ವದ ಮೂಲಕ ಪಸರಿಸಿದ ಶಂಕರಾಚಾರ್ಯರಾದರೂ ತಮ್ಮ ನಾಲ್ಕು ಪೀಠಗಳ ಪೈಕಿ ಮೊತ್ತಮೊದಲಿಗೆ ಸ್ಥಾಪಿಸಿದ್ದು ದಕ್ಷಿಣದ ಶೃಂಗೇರಿಯಲ್ಲಿ ಶಾರದಾಪೀಠವನ್ನೇ.

ಕಶ್ಮೀರವು ಶಾರದೆಯ ಮೂಲಸ್ಥಾನ ಎಂಬ ಕುರಿತು ವಿಧವಿಧವಾದ ಪುರಾವೆಗಳು ಒದಗುತ್ತವೆ. ಬಹುತೇಕ ನಮಗೆಲ್ಲರಿಗೆ ಪರಿಚಿತವಾಗಿರುವ ‘ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ!’ ಎಂಬ ಶ್ಲೋಕವೂ ಸೇರಿದಂತೆ ಇನ್ನಿತರ ಸಾಹಿತ್ಯಪುರಾವೆಗಳು, ಕಶ್ಮೀರದಲ್ಲಿರುವ ಶಾರದಾಂಬೆಯ ದೇವಾಲಯ, ಕಾಶ್ಮೀರಪ್ರಾಂತದಲ್ಲಿ ವಿಕಸಿತಗೊಂಡ ಶಾರದಾಲಿಪಿ – ಹೀಗೆ ಜನಮಾನಸದ ನೆನಪುಗಳು ಹಾಗೂ ಭೌಗೋಳಿಕ ಪುರಾವೆಗಳು ಶಾರದೆಯು ಕಾಶ್ಮೀರದವಳು ಎನ್ನುತ್ತವೆ. ಇತಿಹಾಸದುದ್ದಕ್ಕೂ ಬೌದ್ಧಿಕ ಕೊಡುಗೆಗಳನ್ನಿತ್ತ ಹಲವಾರು ಮಹನೀಯರು ಕಾಶ್ಮೀರದಿಂದ ಬಂದರು ಎಂಬುದನ್ನು ಸಹ ಇಲ್ಲಿ ನೆನೆಯಬೇಕು. ಶಾರದೋಪಾಸನವೆಂದರೆ ಈ ಪರಮೋದಾರವಾದ ಬೌದ್ಧಿಕಪರಂಪರೆಯ ಉಪಾಸನೆಯೂ ಹೌದು, ಅದನ್ನು ಕಾಯ್ದುಕೊಂಡು ಮುಂದುವರಿಸಿಕೊಂಡುಹೋಗಬೇಕಾದ ಸಂಕಲ್ಪದ ಹೊತ್ತೂ ಹೌದು. ❖

ಸೋಮವಾರ ಪೆಟ್ರೋಲ್ ದರ 30 ಪೈಸೆ, ಡೀಸೆಲ್ ದರ 35 ಪೈಸೆ ಹೆಚ್ಚಳ

ರಾಜ್ಯದಲ್ಲೂ ₹ 100 ದಾಟಿದ ಡೀಸೆಲ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸತತ ಏಳನೇ ದಿನವೂ ಇಂಧನ ದರ ಹೆಚ್ಚಿಸಿವೆ. ಇದರಿಂದಾಗಿ ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿರುವ ರಾಜ್ಯಗಳ ಸಾಲಿಗೆ ಕರ್ನಾಟಕ ಮತ್ತು ಕೇರಳವೂ ಸೇರಿಕೊಂಡಿವೆ.

ಸೋಮವಾರ ಪೆಟ್ರೋಲ್ ದರ ಲೀಟರಿಗೆ 30 ಪೈಸೆ ಮತ್ತು ಡೀಸೆಲ್ ದರ ಲೀಟರಿಗೆ 35 ಪೈಸೆ ಹೆಚ್ಚಳ ಮಾಡಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ಕಂಪನಿಗಳು ದೇಶದಲ್ಲಿ ಇಂಧನ ದರ ಹೆಚ್ಚಿಸುತ್ತಿವೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ದಾವಣಗೆರೆಯಲ್ಲಿ ಡೀಸೆಲ್ ದರ ಲೀಟರಿಗೆ ₹ 100.34ರಷ್ಟಾಗಿದೆ. ಪೆಟ್ರೋಲ್ ದರ ₹ 109.79ರಷ್ಟಿದೆ. ಶಿವಮೊಗ್ಗದಲ್ಲಿ ಡೀಸೆಲ್ ದರ ಲೀಟರಿಗೆ ₹100.12ಕ್ಕೆ ಏರಿಕೆ ಆಗಿದೆ. ಪೆಟ್ರೋಲ್ ದರ ಲೀಟರಿಗೆ ₹ 109.51ರಷ್ಟಿದೆ. ಬೆಂಗಳೂರಿನಲ್ಲಿ ಡೀಸೆಲ್ ದರವು ₹ 98.85 ಮತ್ತು ಪೆಟ್ರೋಲ್ ದರವು ₹ 108.04ಕ್ಕೆ ಏರಿಕೆ ಆಗಿದೆ.

ಒಡಿಶಾ, ಆಂಧ್ರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಬಿಹಾರ ಮತ್ತು ಲೇಹ್‌ನಲ್ಲಿ ಈಗಾಗಲೇ ಡೀಸೆಲ್ ದರ ₹ 100ನ್ನು ದಾಟಿ ಮಾರಾಟ ಆಗುತ್ತಿದೆ.

ಸೆಪ್ಟೆಂಬರ್ 28ರಿಂದ ಇಲ್ಲಿಯವರೆಗೆ ಪೆಟ್ರೋಲ್ ದರವು ಲೀಟರಿಗೆ ₹ 4.35ರಷ್ಟು ಮತ್ತು ಸೆಪ್ಟೆಂಬರ್ 24ರಿಂದ ಇಲ್ಲಿಯವರೆಗೆ ಡೀಸೆಲ್ ದರವು ಲೀಟರಿಗೆ ₹ 3.25ರಷ್ಟು ಹೆಚ್ಚಳ ಆದಂತಾಗಿದೆ.

ಕಚ್ಚಾ ತೈಲ ದರ ಏರಿಕೆ

ಲಂಡನ್ (ಪಿಟಿಐ/ಎಎಫ್‌ಪಿ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಸೋಮವಾರ ಶೇ 2.08ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 84.10 ಡಾಲರ್‌ಗಳಿಗೆ ಏರಿಕೆ ಆಗಿದೆ. ಇದು ಮೂರು ವರ್ಷಗಳ ಗರಿಷ್ಠ ಮಟ್ಟವಾಗಿದೆ.

ನ್ಯೂಯಾರ್ಕ್‌ನ ಡಬ್ಲ್ಯುಟಿಐ ಕಚ್ಚಾ ತೈಲ ದರವು ಬ್ಯಾರಲ್‌ಗೆ 81.72 ಡಾಲರ್‌ಗಳಿಗೆ ತಲುಪಿದೆ. ಇದು ಏಳು ವರ್ಷಗಳ ಗರಿಷ್ಠ ಮಟ್ಟವಾಗಿದೆ.

ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ಪೂರೈಕೆ ಆಗದೇ ಇರುವುದರಿಂದ ಬೆಲೆಯಲ್ಲಿ ಏರಿಕೆಗೆ ಕಾರಣವಾಗಿವೆ.

‘ಒಪೆಕ್ + ’ ಒಕ್ಕೂಟ ಪ್ರತಿ ದಿನಕ್ಕೆ 4 ಲಕ್ಷ ಬ್ಯಾರಲ್‌ಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಉತ್ಪಾದನೆ ಮಾಡದೇ ಇರಲು ನಿರ್ಧರಿಸಿವೆ. ಇದು ಜಾಗತಿಕ ಪೂರೈಕೆಯನ್ನು ಮತ್ತಷ್ಟು ತಗ್ಗಿಸಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕಚ್ಚಾ ತೈಲ ದರ (ಡಾಲರ್‌ಗಳಲ್ಲಿ) ಪ್ರತಿ ಬ್ಯಾರಲ್‌ಗೆ	
ಅ.11	84.10
ಅ.8	82.63
ಅ.7	82.10
ಅ.6	83.47
ಅ.5	82.88

ಮಾಹಿತಿ: ಪಿಟಿಐ, ರಾಯಿಟರ್ಸ್

‘ಕಚ್ಚಾ ತೈಲ ದರ ಏರಿಕೆ ಕಳವಳಕಾರಿ’

ನವದೆಹಲಿ (ರಾಯಿಟರ್ಸ್/ಪಿಟಿಐ): ಕಚ್ಚಾ ತೈಲ, ಖಾದ್ಯ ತೈಲ ಮತ್ತು ಲೋಹ ಉತ್ಪನ್ನಗಳ ಬೆಲೆ ಏರಿಕೆಯು ದೇಶದ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಕಳವಳಕಾರಿ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸೋಮವಾರ ಬಿಡುಗಡೆ ಮಾಡಿರುವ ಸೆಪ್ಟೆಂಬರ್ ತಿಂಗಳ ಆರ್ಥಿಕ ಪರಿಶೀಲನಾ ವರದಿಯಲ್ಲಿ ಹೇಳಲಾಗಿದೆ.

ಕೇಂದ್ರದ ಸುಧಾರಣಾ ಕ್ರಮಗಳು ಹಾಗೂ ತ್ವರಿತವಾಗಿ ಕೋವಿಡ್ ಲಸಿಕೆ ನೀಡುತ್ತಿರುವುದರಿಂದ ದೇಶವು ಬಹಳ ಬೇಗನೆ ಚೇತರಿಕೆಯ ಹಾದಿಗೆ ಮರಳಿದೆ ಎಂದು ವರದಿ ತಿಳಿಸಿದೆ.

ಮಾರುಕಟ್ಟೆಗೆ ಎಂಜಿ ಆಸ್ಟರ್ ಬಿಡುಗಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎಂಜಿ ಮೋಟರ್ ಇಂಡಿಯಾ ಕಂಪನಿಯು ಭಾರತದ ಮಾರುಕಟ್ಟೆಗೆ ತನ್ನ ಹೊಸ ಮಾದರಿ ‘ಆಸ್ಟರ್’ ಬಿಡುಗಡೆ ಮಾಡಿದೆ. ಈ ಮೂಲಕ ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ಮಧ್ಯಮ ಗಾತ್ರದ ಎಸ್‌ಯುವಿ ವಿಭಾಗವನ್ನು ಪ್ರವೇಶಿಸಿದೆ. ಇದರ ಪರಿಚಯಾತ್ಮಕ ಬೆಲೆಯು ₹ 9.78 ಲಕ್ಷದಿಂದ (ಎಕ್ಸ್ ಷೋರೂಂ) ಆರಂಭ ಆಗುತ್ತದೆ ಎಂದು ಕಂಪನಿ ತಿಳಿಸಿದೆ.

ಇದೇ ತಿಂಗಳ 21ರಿಂದ ಕಂಪನಿಯ ಜಾಲತಾಣ ಮತ್ತು ವಿತರಣಾ ಕೇಂದ್ರಗಳಲ್ಲಿ ಬುಕಿಂಗ್ ಆರಂಭ ಆಗಲಿದೆ. ಹೀಗಿದ್ದರೂ ಗ್ರಾಹಕರು ಇಂದಿನಿಂದಲೇ ಮುಂಚಿತವಾಗಿಯೇ ಕಾಯ್ದಿರಿಸಬಹುದು ಎಂದು ಕಂಪನಿಯ ಭಾರತದ ಅಧ್ಯಕ್ಷ ರಾಜೀವ್ ಛಾಬಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

5 ಸೀಟುಗಳ ಈ ಮಾದರಿಯು 220 ಟರ್ಬೊ ಪೆಟ್ರೋಲ್ ಎಂಜಿನ್ ಮತ್ತು ವಿಟಿಐ ಟೆಕ್ ಪೆಟ್ರೋಲ್ ಎಂಜಿನ್ ಆಯ್ಕೆಗಳಲ್ಲಿ ಲಭ್ಯವಿದೆ. ಎಲೆಕ್ಟ್ರಾನಿಕ್ ಸ್ಟೆಬಿಲಿಟಿ ಪ್ರೋಗ್ರಾಂ. ಟ್ರ್ಯಾಕ್ಷನ್ ಕಂಟ್ರೋಲ್ ಸಿಸ್ಟಂ, ಆರು ಏರ್‌ಬ್ಯಾಗ್, ಸೇರಿದಂತೆ ಇನ್ನೂ ಹಲವು ವೈಶಿಷ್ಟ್ಯಗಳನ್ನು ಇದು ಒಳಗೊಂಡಿದೆ ಎಂದು ಕಂಪನಿಯು ತಿಳಿಸಿದೆ.

‘ಎಐ’ ಮಾರಾಟಕ್ಕೆ ಆಸಕ್ತಿ: ಟಾಟಾಗೆ ಕೇಂದ್ರದ ಪತ್ರ

ನವದೆಹಲಿ (ಪಿಟಿಐ): ನಷ್ಟದಲ್ಲಿ ಇರುವ ಏರ್ ಇಂಡಿಯಾ ಕಂಪನಿಯನ್ನು ಮಾರಾಟ ಮಾಡುವ ಆಸಕ್ತಿ ಇದೆ ಎಂಬ ಪತ್ರವನ್ನು ಕೇಂದ್ರ ಸರ್ಕಾರವು ಟಾಟಾ ಸಮೂಹಕ್ಕೆ ನೀಡಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ ಅವರು ಸೋಮವಾರ ತಿಳಿಸಿದ್ದಾರೆ.

ಈ ಪತ್ರವನ್ನು ಟಾಟಾ ಸಮೂಹವು ಒಪ್ಪಿಕೊಂಡ ಬಳಿಕ ಷೇರು ಖರೀದಿ ಒಪ್ಪಂದಕ್ಕೆ ಸಹಿ ಆಗಲಿದೆ. ಸಾಮಾನ್ಯವಾಗಿ ಪತ್ರವನ್ನು ಸ್ವೀಕರಿಸಿದ 14 ದಿನಗಳಲ್ಲಿ, ಷೇರು ಖರೀದಿ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ. ತ್ವರಿತವಾಗಿ ಒಪ್ಪಂದ ಏರ್ಪಡುವಂತೆ ನಿರೀಕ್ಷಿಸುತ್ತೇವೆ ಎಂದು ಪಾಂಡೆ ಅವರು ತಿಳಿಸಿದ್ದಾರೆ.

₹ 2,700 ಕೋಟಿ ನಗದು ಪಾವತಿಸಿ, ₹ 15,300 ಕೋಟಿ ಮೊತ್ತದ ಸಾಲವನ್ನು ವಹಿಸಿಕೊಳ್ಳುವ ಮೂಲಕ ಏರ್ ಇಂಡಿಯಾ ಕಂಪನಿಯನ್ನು ತನ್ನದಾಗಿಸಿಕೊಳ್ಳುವ ಟಾಟಾ ಸಮೂಹದ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರವು ಕಳೆದವಾರ ಒಪ್ಪಿಗೆ ನೀಡಿದೆ.

ಕೆಲವೇ ತಿಂಗಳಲ್ಲಿ ಸ್ವಾಧೀನ ಪೂರ್ಣ: ಏರ್ ಇಂಡಿಯಾವನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಮುಂದಿನ ಕೆಲವೇ ತಿಂಗಳುಗಳಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಕೆಲಸ ಮಾಡಲಾಗುತ್ತಿದೆ ಎಂದು ಟಾಟಾ ಸಮೂಹದ ಅಂಗಸಂಸ್ಥೆ ಟಾಟಾ ಸನ್ಸ್ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	415
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಕುಮಟ	
ಚಿಪ್ಪು	34109-39999
ಕೋಕ	18099-29599
ಫ್ಯಾಕ್ಟರಿ	15069-20849
ಹೊಸಚಾಲಿ	42509-45419
ಹಳೆಚಾಲಿ	42010-46099
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	32399-39089
ಕೋಕ	18099-31699
ಚಾಲಿ	43229-46399
ಕೆಂಪುಗೋಟು	22691-33369
ರಾಶಿ	38099-45399
ತಟ್ಟಿಬೆಟ್ಟೆ	34689-44599
ಶಿರಸಿ	
ಬೆಟ್ಟೆ	33001-43499
ಬಿಳಿಗೋಟು	17399-42099
ಚಾಲಿ	40509-46418
ರಾಶಿ	45299-47019
ಯಲ್ಲಾಪುರ	
ಬಿಳಿಗೋಟು	31612-38511
ಕೋಕ	21614-28400
ಚಾಲಿ	42289-46890
ಕೆಂಪುಗೋಟು	31625-35266
ರಾಶಿ	44169-49235
ತಟ್ಟಿಬೆಟ್ಟೆ	39190-43620
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	44109-47599
ಗೊರಬಲು	16009-38000
ನ್ಯೂ ವೆರೈಟಿ	40609-44289
ರಾಶಿ	40199-45699
ಸರಕು	48250-76550
ಸಾಗರ ಎಪಿಎಂಸಿ	
ಬಿಳಿಗೋಟು	22500-37029
ಚಾಲಿ	35699-45199
ಕೋಕ	21220-36001
ಕೆಂಪುಗೋಟು	29699-36370
ರಾಶಿ	37699-44989
ಸಿಪ್ಪೆಗೋಟು	6290-23409
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	279-481
ದ್ವಿತಳಿ (ಬಿ.ವಿ)	223-539

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13650	13000	13450	197.90 ಸೆಂಟ್ಸ್
ಎಸಿ	6325	4800	5400	
ಆರ್‌ಪಿ	6100	6000	6275	ಲಂಡನ್
ಆರ್‌ಸಿ	3535	3500	3625	2119 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 11-10-2021

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11200-11300
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1337 (1327)
ಪಾಮ್ ವಾರದ ಡೆಲಿವರಿ	1248 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,900 (47,750)
ಬೆಳ್ಳಿ ಕೆ.ಜಿ 61,550 (61,500)

ಆವರಣದಲ್ಲಿ ಶನಿವಾರದ ಧಾರಣೆ



ಸುನೀಲ್ ನಾರಾಯಣ್ ಆಲ್‌ರೌಂಡ್ ಆಟ: ಎರಡನೇ ಕ್ವಾಲಿಫೈಯರ್‌ಗೆ ಕೋಲ್ಕತ್ತ; ಆರ್‌ಸಿಬಿಗೆ ಕಾಡಿದ ಬ್ಯಾಟಿಂಗ್ ವೈಫಲ್ಯ

ಈ ಸಲವೂ ಕಪ್ ಬೆಂಗಳೂರಿಗಿಲ್ಲ

ದುಬೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ಕನಸು ಮತ್ತೊಮ್ಮೆ ಕಮರಿತು.

ಸೋಮವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ನಾಯಕತ್ವದ ಬಳಗವು 4 ವಿಕೆಟ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಸೋತಿತು. ಇದರೊಂದಿಗೆ ತಂಡವು ತನ್ನ ಅಭಿಯಾನ ಮುಗಿಸಿತು. ಈ ಟೂರ್ನಿಯ ನಂತರ ತಂಡದ ನಾಯಕತ್ವ ಬಿಡುವುದಾಗಿ ಕೊಹ್ಲಿ ಈಗಾಗಲೇ ಘೋಷಿಸಿದ್ದಾರೆ. ಅವರ ಮುಂದಾಳತ್ವದಲ್ಲಿ ಈ ಸಲ ಕಪ್ ಜಯಿಸುವ ಛಲ ತಂಡದಲ್ಲಿತ್ತು. ಆದರೆ ಇದಕ್ಕೆ ಎಲಿಮಿನೇಟರ್‌ನಲ್ಲಿ ಕೋಲ್ಕತ್ತ ತಂಡದ ಸುನೀಲ್ ನಾರಾಯಣ್ (21ಕ್ಕೆ4 ಮತ್ತು 26 ರನ್) ಅಡ್ಡಿಯಾದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ ಪಡೆಯು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 138 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡವು 19.4 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 139 ರನ್ ಗಳಿಸಿ ಜಯಿಸಿತು. ಬೆಂಗಳೂರು ತಂಡದ ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್ ಮತ್ತು ಯಜುವೇಂದ್ರ ಚಾಹಲ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಅಲ್ಲದೇ ತಂಡಕ್ಕೆ ಜಯದ ಕಾಣಿಕೆ ನೀಡುವ ಪ್ರಯತ್ನ ಮಾಡಿದರು. ಇದರಿಂದಾಗಿ ಕೊನೆಯ ಓವರ್‌ನವರೆಗೂ ನಡೆದ ಹೋರಾಟ ಕುತೂಹಲ ಕೆರಳಿಸಿತ್ತು. ಆದರೆ ಕೊನೆಯ ಹಂತದಲ್ಲಿ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಮತ್ತು ನಾಯಕ ಮಾರ್ಗನ್ ತಂಡವನ್ನು ಗೆಲುವಿನ ದಡ ಸೇರಿಸುವಲ್ಲಿ ಯಶಸ್ವಿಯಾದರು.



ವಿಕೆಟ್ ಗಳಿಸಿದ ಸುನೀಲ್ ನಾರಾಯಣ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಬ್ಯಾಟಿಂಗ್ ವೈಫಲ್ಯ: ಟೂರ್ನಿಯುದ್ದಕ್ಕೂ ಮಿಂಚಿದ್ದ ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳಿಗೆ ವಿಂಡೀಸ್ ಆಟಗಾರ ಸುನೀಲ್ ಚುರುಕು ಮುಟ್ಟಿಸಿದರು. ಅವರು ನಾಯಕ ವಿರಾಟ್ (39 ರನ್), ಶ್ರೀಕರ್ ಭರತ್ (9 ರನ್), ಗ್ಲೆನ್ ಮ್ಯಾಕ್ಸ್‌ವೆಲ್ (15) ಮತ್ತು ಎಬಿ ಡಿವಿಲಿಯರ್ಸ್ (11 ರನ್) ಅವರ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ಬೆಂಗಳೂರು ತಂಡವು ದೊಡ್ಡ ಮೊತ್ತ ಕಲೆಹಾಕಲು ಸಾಧ್ಯವಾಗಲಿಲ್ಲ. ಇನ್ನೊಂದು ಬದಿಯಿಂದ ಲಾಕಿ ಫರ್ಗ್ಯುಸನ್ (30ಕ್ಕೆ2) ಕೂಡ ಪೆಟ್ಟು ಕೊಟ್ಟರು.

ಇನಿಂಗ್ಸ್‌ಗೆ ಉತ್ತಮ ಆರಂಭ ನೀಡಿದ ದೇವದತ್ತ ಪಡಿಕ್ಕಲ್ (21) ಮತ್ತು ವಿರಾಟ್ ಮೊದಲ ವಿಕೆಟ್‌ಗೆ 49 ರನ್ ಸೇರಿಸಿದರು. ಆರನೇ ಓವರ್‌ನಲ್ಲಿ ಪಡಿಕ್ಕಲ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದ ಲಾಕಿ ಸಂಭ್ರಮಿಸಿದರು. ನಂತರದ ಆಟದಲ್ಲಿ ದೊಡ್ಡ ಮೊತ್ತದ ಜೊತೆಯಾಟಗಳು ನಡೆಯಲಿಲ್ಲ. ಟೂರ್ನಿಯಲ್ಲಿ ಆರು ಅರ್ಧಶತಕಗಳನ್ನು ಗ್ಲೆನ್ ಮ್ಯಾಕ್ಸ್‌ವೆಲ್ ಇಲ್ಲಿ ವಿಫಲರಾದರು. ಎಬಿ ಡಿವಿಲಿಯರ್ಸ್ ಕೂಡ ಲಯಕ್ಕೆ ಮರಳಲಿಲ್ಲ. ಆರ್‌ಸಿಬಿ ಇನಿಂಗ್ಸ್‌ನಲ್ಲಿ ಒಂದೂ ಸಿಕ್ಸರ್ ದಾಖಲಾಗಲಿಲ್ಲ.

ಬುಧವಾರ ನಡೆಯಲಿರುವ ಎರಡನೇ ಕ್ವಾಲಿಫೈಯರ್‌ನಲ್ಲಿ ಕೋಲ್ಕತ್ತ ತಂಡವು ಡೆಲ್ಲಿ ಕ್ಯಾಪಿಟಲ್ಸ್ ಎದುರು ಆಡಲಿದೆ. ಆ ಪಂದ್ಯದಲ್ಲಿ ಜಯಿಸಿದ ತಂಡವು 15ರಂದು ನಡೆಯುವ ಫೈನಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಆಡಲಿದೆ.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 7ಕ್ಕೆ 138 (20 ಓವರ್)

ದೇವದತ್ತ ಬಿ ಫರ್ಗ್ಯುಸನ್ 21 (18ಎ, 4X2), ಕೊಹ್ಲಿ ಬಿ ನಾರಾಯಣ್ 39 (33ಎ, 4X5), ಭರತ್ ಸಿ ವೆಂಕಟೇಶ್ ಬಿ ನಾರಾಯಣ್ 9 (16ಎ), ಮ್ಯಾಕ್ಸ್‌ವೆಲ್ ಸಿ ಫರ್ಗ್ಯುಸನ್ ಬಿ ನಾರಾಯಣ್ 15 (18ಎ, 4X1), ಡಿವಿಲಿಯರ್ಸ್ ಬಿ ನಾರಾಯಣ್ 11 (9ಎ, 4X1), ಶಹಬಾಜ್ ಸಿ ಶಿವಂ ಬಿ ಫರ್ಗ್ಯುಸನ್ 13 (14ಎ, 4X1), ಕ್ರಿಸ್ಟಿಯನ್ ರನೌಟ್ (ಫರ್ಗ್ಯುಸನ್/ಶಿವಂ) 9 (8ಎ, 4X1), ಹರ್ಷಲ್ ಔಟಾಗದೆ 8 (6ಎ, 4X1), ಗಾರ್ಟನ್ ಔಟಾಗದೆ 0 (0 ಎ)

ಇತರೆ : (ಬೈ 2, ಲೆಗ್‌ಬೈ 5, ನೋಬಾಲ್ 2, ವೈಡ್ 4) 13

ವಿಕೆಟ್ ಪತನ: 1-49 (ದೇವದತ್ತ ಪಡಿಕ್ಕಲ್, 5.1), 2-69 (ಶ್ರೀಕರ ಭರತ್, 9.4), 3-88 (ವಿರಾಟ್ ಕೊಹ್ಲಿ, 12.2), 4-102 (ಎಬಿ ಡಿವಿಲಿಯರ್ಸ್, 14.2), 5-112 (ಗ್ಲೆನ್ ಮ್ಯಾಕ್ಸ್‌ವೆಲ್, 16.4), 6-126 (ಶಹಬಾಜ್ ಅಹಮ್ಮದ್, 18.6), 7-134 (ಡ್ಯಾನಿಯಲ್ ಕ್ರಿಸ್ಟಿಯನ್, 19.4)

ಬೌಲಿಂಗ್: ಶಕೀಬ್ ಅಲ್ ಹಸನ್ 4-0-24-0, ಶಿವಂ ಮಾವಿ 4-0-36-0, ವರುಣ್ ಚಕ್ರವರ್ತಿ 4-0-20-0, ಲಾಕಿ ಫರ್ಗ್ಯುಸನ್ 4-0-30-2, ಸುನಿಲ್ ನಾರಾಯಣ್ 4-0-21-4

ಕೋಲ್ಕತ್ತ ನೈಟ್ ರೈಡರ್ಸ್ 6ಕ್ಕೆ 139 (19.4 ಓವರ್)

ಗಿಲ್ ಸಿ ಡಿವಿಲಿಯರ್ಸ್ ಬಿ ಪಟೇಲ್ 29 (18ಎ, 4X4), ವೆಂಕಟೇಶ್ ಸಿ ಭರತ್ ಬಿ ಪಟೇಲ್ 26 (30ಎ, 6X1), ತ್ರಿಪಾಠಿ ಎಲ್‌ಬಿಡಬ್ಲ್ಯು ಬಿ ಚಾಹಲ್ 6 (5ಎ, 4X1), ರಾಣಾ ಸಿ ಡಿವಿಲಿಯರ್ಸ್ ಬಿ ಚಾಹಲ್ 23 (25ಎ, 4X1, 6X1), ನಾರಾಯಣ್ ಬಿ ಸಿರಾಜ್ 26 (15ಎ, 6X3), ಕಾರ್ತಿಕ್ ಸಿ ಭರತ್ ಬಿ ಸಿರಾಜ್ 10 (12ಎ, 4X1), ಮಾರ್ಗನ್ ಔಟಾಗದೆ 5 (7ಎ), ಶಕೀಬ್ ಔಟಾಗದೆ 9 (6ಎ, 4X1))

ಇತರೆ : (ಲೆಗ್‌ಬೈ 2, ವೈಡ್ 3) 5

ವಿಕೆಟ್ ಪತನ: 1-41 (ಶುಭಮನ್ ಗಿಲ್, 5.2), 2-53 (ರಾಹುಲ್ ತ್ರಿಪಾಠಿ, 6.6), 3-79 (ವೆಂಕಟೇಶ್ ಅಯ್ಯರ್, 10.6), 4-110 (ನಿತೀಶ್ ರಾಣಾ, 14.2), 5-125 (ಸುನೀಲ್ ನಾರಾಯಣ್, 17.2), 6-126 (ದಿನೇಶ್ ಕಾರ್ತಿಕ್, 17.4)

ಬೌಲಿಂಗ್: ಮೊಹಮ್ಮದ್ ಸಿರಾಜ್ 4-0-19-2, ಜಾರ್ಜ್ ಗಾರ್ಟನ್ 3-0-29-0, ಹರ್ಷಲ್ ಪಟೇಲ್ 4-0-19-2, ಯಜುವೇಂದ್ರ ಚಾಹಲ್ 4-0-16-2, ಗ್ಲೆನ್ ಮ್ಯಾಕ್ಸ್‌ವೆಲ್ 3-0-25-0, ಡ್ಯಾನ್ ಕ್ರಿಸ್ಟಿಯನ್ 1.4-0-29-0

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 4 ವಿಕೆಟ್‌ಗಳ ಜಯ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್ ಪಟೇಲ್	ಆರ್‌ಸಿಬಿ	32
ಆವೇಶ್ ಖಾನ್	ಡೆಲ್ಲಿ	23
ಬೂಮ್ರಾ	ಮುಂಬೈ	21

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	626
ಋತುರಾಜ್	ಚೆನ್ನೈ	603
ಶಿಖರ್ ಧವನ್	ಡೆಲ್ಲಿ	551

ಟಿ20: ಬ್ರಾವೊ ದಾಖಲೆ



ಡ್ವೇನ್ ಬ್ರಾವೊ – ಪಿಟಿಐ ಚಿತ್ರ

ದುಬೈ: ಟ್ವೆಂಟಿ-20 ಕ್ರಿಕೆಟ್ ಮಾದರಿಯಲ್ಲಿ 550ನೇ ವಿಕೆಟ್ ಕಬಳಿಸಿರುವ ವೆಸ್ಟ್ ಇಂಡೀಸ್‌ನ ಡ್ವೇನ್ ಬ್ರಾವೊ ನೂತನ ವಿಶ್ವ ದಾಖಲೆ ನಿರ್ಮಿಸಿದ್ದಾರೆ.

ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಬ್ರಾವೊ, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದ ಮೊದಲ ಕ್ವಾಲಿಫೈಯರ್ ಹಣಾಹಣಿಯಲ್ಲಿ ಈ ಮೈಲುಗಲ್ಲು ತಲುಪಿದರು. ಇದರೊಂದಿಗೆ ಈ ಸಾಧನೆ ಮಾಡಿದ ವಿಶ್ವದ ಮೊದಲ ಬೌಲರ್ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ಟಿ20 ಕ್ರಿಕೆಟ್‌ನಲ್ಲಿ 500ಕ್ಕೂ ಹೆಚ್ಚು ವಿಕೆಟ್ ಪಡೆದ ವಿಶ್ವದ ಏಕೈಕ ಬೌಲರ್ ಕೂಡ ಆಗಿದ್ದಾರೆ ಬ್ರಾವೊ. 506ನೇ ಪಂದ್ಯದಲ್ಲಿ (479 ಇನಿಂಗ್ಸ್) ಅವರು ಈ ದಾಖಲೆ ಬರೆದಿದ್ದಾರೆ.

ಟ್ವೆಂಟಿ-20 ಕ್ರಿಕೆಟ್‌ನಲ್ಲಿ ಗರಿಷ್ಠ ವಿಕೆಟ್ ಗಳಿಸಿದವರು

ಆಟಗಾರ	ದೇಶ	ವಿಕೆಟ್
ಡ್ವೇನ್ ಬ್ರಾವೊ	ವೆಸ್ಟ್ ಇಂಡೀಸ್	550
ಇಮ್ರಾನ್ ತಾಹೀರ್	ದಕ್ಷಿಣ ಆಫ್ರಿಕಾ	420
ಸುನಿಲ್ ನಾರಾಯಣ್	ವೆಸ್ಟ್ ಇಂಡೀಸ್	419
ರಶೀದ್ ಖಾನ್	ಅಫ್ಗಾನಿಸ್ತಾನ	392
ಲಸಿತ್ ಮಾಲಿಂಗ	ಶ್ರೀಲಂಕಾ	390

ಮ್ಯಾರಥಾನ್: ಕಿಪ್ರುಟೊ, ಡಯಾನಾಗೆ ಕಿರೀಟ

ಬೋಸ್ಟನ್ (ಎಎಫ್‌ಪಿ): ಕೀನ್ಯಾದ ಬೆನ್ಸನ್ ಕಿಪ್ರುಟೊ ಮತ್ತು ಡಯಾನಾ ಕಿಪ್ಯೋಗಿ ಅವರು ಬೋಸ್ಟನ್ ಮ್ಯಾರಥಾನ್‌ನ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು.

ಕಿಪ್ರುಟೊ ಅವರು ನಿಗದಿತ ದೂರವನ್ನು 2 ತಾಸು 9 ನಿಮಿಷ 51 ಸೆಕೆಂಡುಗಳಲ್ಲಿ ತಲುಪಿದರು. ಇಥಿಯೋಪಿಯಾದ ಲೆಮಿ ಬೆರಾನು ಬೆಳ್ಳಿ ಮತ್ತು ಜೆಮಾಲ್ ಯಿಮರ್ ಕಂಚು ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದಲ್ಲಿ ಡಯಾನಾ 2 ತಾಸು, 24 ನಿಮಿಷ, 45 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಕೀನ್ಯಾದವರೇ ಆದ ಎಡ್ನಾ ಕಿಪ್ಲಗಾಟ್ ಮತ್ತು ಮೇರಿ ಎನ್‌ಗೂಗಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.



ಟ್ರೋಫಿಯೊಂದಿಗೆ ಬೆನ್ಸನ್ ಕಿಪ್ರುಟೊ ಮತ್ತು ಡಯಾನಾ ಕಿಪ್ಯೋಗಿ– ಎಎಫ್‌ಪಿ ಚಿತ್ರ

ಮೆಸ್ಸಿ ಮಿಂಚಿನಾಟ

ಮಾಂಟೆವಿಡಿಯೊ (ಎಎಫ್‌ಪಿ): ಲಯೊನೆಲ್ ಮೆಸ್ಸಿ ಆಕರ್ಷಕ ಆಟದಲ್ಲಿ ಅರ್ಜೆಂಟಿನಾ ತಂಡವು ಫಿಫಾ ವಿಶ್ವಕಪ್ ಕ್ವಾಲಿಫೈಯರ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೆಸ್ಸಿ 3-0ಯಿಂದ ಉರುಗ್ವೆ ವಿರುದ್ಧ ಜಯಿಸಿತು. ಅರ್ಜೆಂಟಿನಾದ ರಾಡ್ರಿಗೊ ಡಿ ಪಾಲ್ ಮತ್ತು ಲಾಟ್ರೊ ಮಾರ್ಟಿನೇಜ್ ಕೂಡ ಗೋಲು ಕಾಣಿಕೆ ನೀಡಿದರು.

ಫಲಿತಾಂಶ: ಬೊಲಿವಿಯಾಕ್ಕೆ 1-0ಯಿಂದ ಪೆರುವಿನ ವಿರುದ್ಧ; ವೆನೆಜುವೆಲ್ 2-1ರಿಂದ ಈಕ್ವೆಡಾರ್ ವಿರುದ್ಧ; ಚಿಲಿ 2-0ಯಿಂದ ಪರಗ್ವೆ ವಿರುದ್ಧ ಜಯಿಸಿದವು.



ಗೋಲು ಗಳಿಸಿ ಸಂಭ್ರಮಿಸಿದ ಲಯೊನೆಲ್ ಮೆಸ್ಸಿ ಮತ್ತು ನಿಕೋಲ್ಸ್ ಗೋಂಜ್ಞಾಲಿಸ್ –ಪಿಟಿಐ ಚಿತ್ರ

ಐರ್ಲೆಂಡ್ ಪೋರಿ ಆ್ಯಮಿ ಶತಕದ ದಾಖಲೆ

ಹರಾರೆ (ಎಎಫ್‌ಪಿ): ಜಿಂಬಾಬ್ವೆ ಎದುರಿನ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ ಐರ್ಲೆಂಡ್‌ನ ಹದಿನಾರರ ಪೋರಿ ಆ್ಯಮಿ ಹಂಟರ್ ಏಕದಿನ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಅತಿ ಕಿರಿಯ ಬ್ಯಾಟರ್ ಎನಿಸಿಕೊಂಡರು.

ಸೋಮವಾರ ನಡೆದ ಪಂದ್ಯದಲ್ಲಿ ಅವರು ಎಂಟು ಬೌಂಡರಿಗಳೊಂದಿಗೆ 127 ಎಸೆತಗಳಲ್ಲಿ 121 ರನ್ ಗಳಿಸಿದರು. 16ನೇ ವರ್ಷದ ಜನ್ಮದಿನದಲ್ಲಿ ಅವರಿಂದ ಈ ಇನಿಂಗ್ಸ್ ಮೂಡಿಬಂತು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಅವರು ಲೆಗ್ ಸೈಡ್‌ಗೆ ಚೆಂಡನ್ನು ಫ್ಲಿಕ್ ಮಾಡಿ ಬೌಂಡರಿ ಗಳಿಸುವ ಮೂಲಕ ಮೂರಂಕಿ ಮೊತ್ತ ದಾಟಿದರು.

ಆ್ಯಮಿ ಹಂಟರ್ ಆಟದ ಬಲದಿಂದ ಐರ್ಲೆಂಡ್ ಮೂರು ವಿಕೆಟ್‌ಗಳಿಗೆ 312 ರನ್ ಗಳಿಸಿತು. ಉತ್ತರವಾಗಿ ಜಿಂಬಾಬ್ವೆ ಎಂಟು ವಿಕೆಟ್‌ಗಳಿಗೆ 227 ರನ್ ಗಳಿಸಿ 85 ರನ್‌ಗಳ ಸೋಲೊಪ್ಪಿಕೊಂಡಿತು.

ಪುರುಷರ ಏಕದಿನ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಅತಿ ಕಿರಿಯ ಆಟಗಾರ ಪಾಕಿಸ್ತಾನದ ಶಾಹಿದ್ ಅಫ್ರಿದಿ. 1996ರಲ್ಲಿ ಶ್ರೀಲಂಕಾ ವಿರುದ್ಧ 102 ರನ್ ಗಳಿಸಿದಾಗ ಅವರ ವಯಸ್ಸು 16 ವರ್ಷ 217 ದಿನಗಳಾಗಿದ್ದವು. ಭಾರತದ ಮಿಥಾಲಿ ರಾಜ್ ಮಹಿಳೆಯರ ಏಕದಿನ ಕ್ರಿಕೆಟ್‌ನಲ್ಲಿ 16 ವರ್ಷ 205 ದಿನಗಳಾಗಿದ್ದಾಗ ಶತಕ ಗಳಿಸಿದ್ದರು. 1999ರಲ್ಲಿ ಐರ್ಲೆಂಡ್ ಎದುರಿನ ಪಂದ್ಯದಲ್ಲಿ ಅವರು ಅಜೇಯ 114 ರನ್ ಸಿಡಿಸಿದ್ದರು.

ಆ್ಯಮಿ ಹಂಟರ್ ಅವರು 15ನೇ ವಯಸ್ಸಿನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಐರ್ಲೆಂಡ್ ಮಹಿಳಾ ತಂಡದ ಪರ ಶತಕ ಗಳಿಸಿದ ನಾಲ್ಕನೇ ಬ್ಯಾಟರ್ ಆಗಿದ್ದಾರೆ ಅವರು. 2000ನೇ ಇಸವಿಯ ನಂತರ ಐರ್ಲೆಂಡ್ ಗಳಿಸಿದ ಮೊದಲ ಶತಕ ಇದಾಗಿದೆ. ವಿಶೇಷವೆಂದರೆ, ಆ್ಯಮಿ ಹಿಂದಿನ ಮೂರು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 2,1 ಹಾಗೂ 4 ರನ್ ಮಾತ್ರ ಗಳಿಸಿದ್ದರು.



ಆ್ಯಮಿ ಹಂಟರ್– ಟ್ವಿಟರ್ ಚಿತ್ರ

ಭಾರತ ತಂಡದ ಶುಭಾರಂಭ

ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿ: ನೆದರ್ಲೆಂಡ್ಸ್‌ಗೆ ನಿರಾಸೆ

ಆಹಸ್, ಡೆನ್ಮಾರ್ಕ್ (ಪಿಟಿಐ): ಭಾರತ ಪುರುಷರ ತಂಡವು ಥಾಮಸ್ ಕಪ್ ಫೈನಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ 5-0ಯಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿದೆ.

'ಸಿ' ಗುಂಪಿನ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಅಂಗಣಕ್ಕಿಳಿದ ಭಾರತದ ಕಿದಂಬಿ ಶ್ರೀಕಾಂತ್ 21-12 21-14ರಿಂದ ಜೋರಾನ್ ಕ್ವೀಕೆಲ್ ಅವರ ಸವಾಲು ಮೀರಿದರು. ಇದೇ ಹಾದಿಯಲ್ಲಿ ಸಾಗಿದ ಡಬಲ್ಸ್ ವಿಭಾಗದ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಕೂಡ ಜಯ ದಾಖಲಿಸಿದರು. ನೆದರ್ಲೆಂಡ್ಸ್‌ನ ರುಬೆನ್ ಜಿಲೆ– ಟಿಯೆಸ್ ವ್ಯಾನ್ ಡರ್ ಲೆಕ್ ಅವರನ್ನು 21-19 21-12ರಿಂದ ಪರಾಭವಗೊಳಿಸಿದರು.

ಎದುರಾಳಿ ತಂಡದ ಎದುರು 2-0ಯಿಂದ ಮುನ್ನಡೆ ಗಳಿಸಿದ ಭಾರತ ಅದೇ ಆತ್ಮವಿಶ್ವಾಸದೊಂದಿಗೆ ಮುನ್ನುಗ್ಗಿತು. ಎರಡನೇ ಸುತ್ತಿನ ಸಿಂಗಲ್ಸ್ ಪಂದ್ಯದಲ್ಲಿ ಕಣಕ್ಕಿಳಿದ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಬಿ.ಸಾಯಿ ಪ್ರಣೀತ್ ಅವರು 21-4 21-12ರಿಂದ ರಾಬಿನ್ ಮೆಸ್ಮನ್ ಅವರನ್ನು ಮಣಿಸಿದರು. ಕೇವಲ 27 ನಿಮಿಷಗಳಲ್ಲಿ ನೆದರ್ಲೆಂಡ್ಸ್ ಆಟಗಾರನಿಗೆ ಸೋಲಿನ ರುಚಿ ತೋರಿಸಿದರು.

ಡಬಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಎಂ.ಆರ್.ಅರ್ಜುನ್ – ಧ್ರುವ ಕಪಿಲ ಜೋಡಿಯೂ ಪಾರಮ್ಯ ಮೆರೆಯಿತು. ಇವರಿಬ್ಬರು 21-12 21-13ರಿಂದ ಆ್ಯಂಡಿ ಜೈಜಕ್– ಬ್ರಯಾನ್ ವಾಸಿಂಕ್ ಎದುರು ಜಯಿಸಿ ಭಾರತಕ್ಕೆ 4-0 ಮುನ್ನಡೆ ದೊರಕಿಸಿಕೊಟ್ಟರು. ಸಿಂಗಲ್ಸ್ ವಿಭಾಗದ ಕೊನೆಯ ಹಣಾಹಣಿಯಲ್ಲಿ ಸಮೀರ್ ವರ್ಮಾ ಕೂಡ ಅಬ್ಬರಿಸುವುದರೊಂದಿಗೆ ಭಾರತ ಕ್ಲೀನ್‌ಸ್ವೀಪ್ ಮಾಡಿತು.

ಸಮೀರ್ 21-6 21-11ರಿಂದ ಗಿಜ್ಸ್ ಡ್ಯೂಜ್ ವಿರುದ್ಧ ಮೇಲುಗೈ ಪಡೆದರು.

ಭಾರತದ ಪುರುಷರ ತಂಡವು ಮುಂದಿನ ಪಂದ್ಯದಲ್ಲಿ ತನಗಿಂತ ದುರ್ಬಲ ಎನಿಸಿರುವ ತಾಹಿತಿ ಎದುರು ಆಡಲಿದೆ. ಮಂಗಳವಾರ ಈ ಪಂದ್ಯ ನಿಗದಿಯಾಗಿದೆ. ಮಹಿಳಾ ತಂಡವು 'ಬಿ' ಗುಂಪಿನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಕಣಕ್ಕಿಳಿಯಲಿದೆ.



ಕಿದಂಬಿ ಶ್ರೀಕಾಂತ್– ರಾಯಿಟರ್ಸ್ ಚಿತ್ರ

ಬಾಕ್ಸಿಂಗ್ ತಂಡಕ್ಕೆ ಮರಳಿದ ಕೋಚ್ ದೇವೇಂದ್ರೊ, ಸುರಂಜಯ್

ನವದೆಹಲಿ: ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕಗಳನ್ನು ಗೆದ್ದುಕೊಂಡಿರುವ ಎಂ.ಸುರಂಜಯ್ ಸಿಂಗ್ ಮತ್ತು ಎಲ್.ದೇವೇಂದ್ರೊ ಸಿಂಗ್ ಅವರು ಭಾರತದ ಬಾಕ್ಸಿಂಗ್ ತಂಡದ ಕೋಚ್‌ಗಳಾಗಿ ನೇಮಕಗೊಂಡಿದ್ದಾರೆ. ಗಾಯದ ಸಮಸ್ಯೆಯಿಂದಾಗಿ ತಂಡದಿಂದ ದೂರ ಉಳಿದಿದ್ದ ಅವರು ಈ ತಿಂಗಳಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಪುರುಷರ ತಂಡದ ಕೋಚ್‌ಗಳಾಗಿರುವರು ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ ತಿಳಿಸಿದೆ.

100ಕ್ಕೂ ಹೆಚ್ಚು ರಾಷ್ಟ್ರಗಳಿಂದ 600ರಷ್ಟು ಬಾಕ್ಸರ್‌ಗಳು ಪಾಲ್ಗೊಳ್ಳುವ ವಿಶ್ವ ಚಾಂಪಿಯನ್‌ಷಿಪ್ ಇದೇ ತಿಂಗಳ 24ರಿಂದ ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ಆರಂಭವಾಗಲಿದೆ. ಇದರಲ್ಲಿ ಪಾಲ್ಗೊಳ್ಳುವ ಭಾರತ ತಂಡದ ಅಭ್ಯಾಸ ಶಿಬಿರ ಪಟಿಯಾಲದಲ್ಲಿ ಈ ವಾರ ಆರಂಭವಾಗಲಿದೆ. ಇದಕ್ಕೆ ಒಟ್ಟು 14 ಮಂದಿ ಕೋಚ್‌ಗಳನ್ನು ನೇಮಕ ಮಾಡಲಾಗಿದೆ. ಇವರಲ್ಲಿ 29 ವರ್ಷದ ದೇವೇಂದ್ರೊ ಮತ್ತು 35 ವರ್ಷದ ಸುರಂಜಯ್ ಸೇರಿದ್ದಾರೆ ಎಂದು ಫೆಡರೇಷನ್ ವಿವರಿಸಿದೆ.

ಮುಖ್ಯ ಕೋಚ್ ನರೇಂದ್ರ ರಾಣಾ, ಜೂನಿಯರ್ ತಂಡದ ಮಾಜಿ ಕೋಚ್ ಎಂ.ಎಸ್.ಧಾಕಾ, ಧರ್ಮೇಂದ್ರ ಯಾದವ್ ಮತ್ತು ಮಾಜಿ ಬಾಕ್ಸರ್‌ಗಳಾದ ದಿವಾಕರ್ ಪ್ರಸಾದ್, ಟೋರಕ್ ಖರ್ಪನ್ ಮುಂತಾದವರು ಶಿಬಿರದಲ್ಲಿ ತರಬೇತುದಾರರಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಹೇಮಂತ ಕಲಿತ ತಿಳಿಸಿದ್ದಾರೆ.

ವಿಶೇಷವೆಂದರೆ, ಸುರಂಜಯ್ ಮತ್ತು ದೇವೇಂದ್ರೊ ಜೂನಿಯರ್ ಹಂತದಲ್ಲಿ ಧಾಕಾ ಅವರ ಶಿಷ್ಯರಾಗಿದ್ದರು. 2010ರ ಕಾಮನ್‌ವೆಲ್ತ್ ಗೇಮ್ಸ್ ಮತ್ತು 2009ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸುರಂಜಯ್ ಚಿನ್ನ ಗಳಿಸಿದ್ದರು. ದೇವೇಂದ್ರೊ ಅವರು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಗಳಿಸಿದ್ದು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಮಣಿಪುರದ ಸುರಂಜಯ್ ಅವರನ್ನು 2017ರಲ್ಲಿ ಸಹಾಯಕ ಕೋಚ್ ಆಗಿ ನೇಮಕ ಮಾಡಲಾಗಿತ್ತು. ಆದರೆ ವೈಯಕ್ತಿಕ ಕಾರಣಗಳಿಂದಾಗಿ ಆ ಹುದ್ದೆಯನ್ನು ಅವರು ನಿರಾಕರಿಸಿದ್ದರು. 2009ರಿಂದ 2010ರ ಅವಧಿಯಲ್ಲಿ ಅವರು ಸತತ ಎಂಟು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. ಆದರೆ ಮೊಣಕಾಲಿನಲ್ಲಿ ಕಾಣಿಸಿಕೊಂಡ ನೋವು ಅವರ ವೃತ್ತಿಜೀವನಕ್ಕೆ ಅಡ್ಡಿಯಾಗಿತ್ತು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ಮತ್ತು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದ ದೇವೇಂದ್ರೊ 2020ರಲ್ಲಿ ಪಟಿಯಾಲದ ರಾಷ್ಟ್ರೀಯ ಕ್ರೀಡಾ ಸಂಸ್ಥೆಯಲ್ಲಿ ಕೋಚಿಂಗ್ ಡಿಪ್ಲೋಮಾ ಪೂರ್ಣಗೊಳಿಸಿದ್ದರು.

ಬಯೊಬಬಲ್ ತೊರೆದ ಹಸರಂಗ

ದುಬೈ (ಪಿಟಿಐ): ಆಲ್‌ರೌಂಡರ್ ವಾಣಿಂದು ಹಸರಂಗ ಮತ್ತು ಮಧ್ಯಮ ವೇಗಿ ದುಷ್ಮಂತ ಚಮೀರ ಅವರಿಗೆ ಬಯೊಬಬಲ್ ತೊರೆಯಲು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಅನುಮತಿ ನೀಡಿದೆ.

ಟಿ20 ವಿಶ್ವಕಪ್‌ಗೆ ಸಜ್ಜಾಗುತ್ತಿರುವ ಶ್ರೀಲಂಕಾ ತಂಡವನ್ನು ಸೇರಿಕೊಳ್ಳುವುದಕ್ಕಾಗಿ ಇವರಿಬ್ಬರು ತಂಡ ತೊರೆದಿದ್ದಾರೆ. ಮುಂದಿನ ವಾರ ಆರಂಭವಾಗಲಿರುವ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಶ್ರೀಲಂಕಾ ಆಡಲಿದೆ.

ಆಸ್ಟ್ರೇಲಿಯಾದ ಆ್ಯಡಂ ಜಂಪಾ ಮತ್ತು ಡ್ಯಾನಿಯಲ್ ಸ್ಯಾಮ್ಸ್ ಅವರ ಬದಲಿಗೆ ಹಸರಂಗ ಮತ್ತು ಚಮೀರ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿತ್ತು. ಭಾರತದಲ್ಲಿ ನಡೆದಿದ್ದ ಮೊದಲ ಹಂತದ ಪಂದ್ಯಗಳಲ್ಲಿ ಜಂಪಾ ಹಾಗೂ ಸ್ಯಾಮ್ಸ್ ಪಾಲ್ಗೊಂಡಿದ್ದರು.

ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ವಿತರಣೆ: ಮುಖ್ಯಮಂತ್ರಿ ಬೊಮ್ಮಾಯಿ

ಕರ್ನಾಟಕದಲ್ಲಿ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿದೆ. ಇದರ ಪ್ರಯೋಜನವನ್ನು ಕ್ರೀಡಾಪಟುಗಳು ಪಡೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಟೋಕಿಯೊ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ರಾಜ್ಯದ ಕ್ರೀಡಾಪಟುಗಳು ಮತ್ತು ಕೋಚ್‌ಗಳಿಗೆ ಪ್ರೋತ್ಸಾಹ ಧನ ವಿತರಿಸುವುದಕ್ಕಾಗಿ ರಾಜಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಒಲಿಂಪಿಕ್ಸ್‌ಗೆ ತೆರಳಲು ಕ್ರೀಡಾಪಟುಗಳುಗೆ ತಲಾ ₹ 10 ಲಕ್ಷ ಪ್ರೋತ್ಸಾಹಧನ ನೀಡಲಾಗುತ್ತಿದೆ. ಮುಂದಿನ ಒಲಿಂಪಿಕ್ಸ್‌ಗೆ ಅಗತ್ಯ ತಯಾರಿ ಮಾಡುವಲ್ಲಿ ಸರ್ಕಾರ ಅಥ್ಲೀಟ್‌ಗಳ ಜೊತೆಗೆ ನಿಲ್ಲಲಿದೆ ಎಂದು ಅವರು ಭರವಸೆ ನೀಡಿದರು.

ಕ್ರೀಡಾ ಸಾಧಕರು ಕಠಿಣ ಪರಿಶ್ರಮದ ಮೂಲಕ ಸಾಮರ್ಥ್ಯ ಪ್ರದರ್ಶಿಸುತ್ತಾರೆ. ಅದನ್ನು ಸಮಾಜ ಗುರುತಿಸಬೇಕು. ಭಾರತದ ಕ್ರೀಡಾಪಟುಗಳು ದೊಡ್ಡ ಸಾಹಸಿಗಳು ಎಂದು ಮುಖ್ಯಮಂತ್ರಿಗಳು ಬಣ್ಣಿಸಿದರು.

ಕನ್ನಡಿಗರಾದ ಸುಹಾಸ್, ಅದಿತಿ ಅಶೋಕ್, ಉತ್ತಪ್ಪ, ಕೆ.ಸಿ.ಗಣಪತಿ, ಸುಬೇದಾರ್ ಕುಟ್ಟಪ್ಪ ಅವರನ್ನು ಸನ್ಮಾನಿಸಿ ನಗದು ಪುರಸ್ಕಾರ ನೀಡಲಾಯಿತು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಇದ್ದರು.



ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗಳಿಸಿದ ಸುಹಾಸ್ ಯತಿರಾಜ್ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಕ್ರೀಡಾ ಸಚಿವ ಕೆ.ಸಿ.ನಾರಾಯಣ ಗೌಡ ಇದ್ದರು.

ಟೆನಿಸ್: ಲೇಲಾ ಜಯಭೇರಿ

ಇಂಡಿಯನ್ ವೆಲ್ಸ್, ಅಮೆರಿಕ (ಎಪಿ): ಒಂಬತ್ತನೇ ಶ್ರೇಯಾಂಕದ ಅನಸ್ತಾಸಿಯಾ ಪಾವ್ಲಿಚೆಂಕೊವಾ ಅವರಿಗೆ ಆಘಾತ ನೀಡಿದ ಯುವ ಆಟಗಾರ್ತಿ ಲೇಲಾ ಫರ್ನಾಂಡಸ್, ಬಿಎನ್‌ಪಿ ಪರಿಬಾಸ್ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ಲಗ್ಗೆಯಿಟ್ಟರು.

ಅಮೆರಿಕ ಓಪನ್ ರನ್ನರ್ ಅಪ್ ಆಗಿರುವ ಕೆನಡಾದ ಲೇಲಾ 5-7, 6-3, 6-4ರಿಂದ ರಷ್ಯಾ ಆಟಗಾರ್ತಿಯನ್ನು ಮಣಿಸಿದರು. ಮೊದಲ ಸೆಟ್ ಸೋತರೂ ಎಂದೆಗುಂದದ 23ನೇ ಶ್ರೇಯಾಂಕದ ಲೇಲಾ, ಅನುಭವಿ ಎದುರಾಳಿ ವಿರುದ್ಧ ಗೆದ್ದು ಬೀಗಿದರು.

ಟೂರ್ನಿಯ ಡಬಲ್ಸ್ ವಿಭಾಗದಲ್ಲೂ ಲೇಲಾ ಮುನ್ನಡೆದರು. ಅಮೆರಿಕದ ಕೊಕೊ ಗಫ್ ಜೊತೆಗೂಡಿದ ಅವರು ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಮಹಿಳಾ ಸಿಂಗಲ್ಸ್ ಮತ್ತೊಂದು ಪಂದ್ಯದಲ್ಲಿ ಫ್ರೆಂಚ್ ಓಪನ್ ಚಾಂಪಿಯನ್, ಪೋಲೆಂಡ್‌ನ ಇಗಾ ಸ್ವೆಟೆಕ್ 6-1, 6-0ರಿಂದ ರಷ್ಯಾದ ವೆರೋನಿಕಾ ಕುದರ್ಮೆಟೊವಾ ಎದುರು ಜಯ ಸಾಧಿಸಿದರು.ಮರ್ರೆ ಜಯಭೇರಿ: ಎರಡು ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್, ಬ್ರಿಟನ್‌ನ ಆ್ಯಂಡಿ ಮರ್ರೆ 2016ರ ಬಳಿಕ ಮೊದಲ ಬಾರಿ ಟೂರ್ನಿಯ ಮೂರನೇ ಸುತ್ತು ತಲುಪಿದರು. ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು 5-7, 6-3, 6-2ರಿಂದ ಸ್ಪೇನ್‌ನ 18ರ ಹರೆಯದ ಕಾರ್ಲೋಸ್ ಅಲ್ಕರೆಜ್ ಅವರನ್ನು ಮಣಿಸಿದರು.



ಲೇಲಾ ಫರ್ನಾಂಡಸ್ ಆಟದ ಶೈಲಿ– ಎಎಫ್‌ಪಿ ಚಿತ್ರ

ಕ್ರಿಕೆಟ್: ಕ್ವಾರ್ಟರ್‌ಗೆ ಕರ್ನಾಟಕ ತಂಡಗಳು

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಕರ್ನಾಟಕದ ಪುರುಷ ಮತ್ತು ಮಹಿಳಾ ತಂಡಗಳು ಬಿಸಿಸಿಐ 19 ವರ್ಷದೊಳಗಿನವರ ಏಕದಿನ ಕ್ರಿಕೆಟ್ ಟ್ರೋಫಿ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿವೆ.

ವಿನೂ ಮಂಕಡ್ ಟ್ರೋಫಿಗಾಗಿ ನಡೆಯುತ್ತಿರುವ ಪುರುಷರ ಟೂರ್ನಿಯಲ್ಲಿ ಅಹಮದಾಬಾದ್‌ನ ಮೊಟೇರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕ 76 ರನ್‌ಗಳಿಂದ ತಮಿಳುನಾಡು ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ರಾಜ್ಯ ತಂಡದವರು ನಿಗದಿತ ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 295 ರನ್ ಕಲೆ ಹಾಕಿದರು. ತಂಡದ ಚಿನ್ಮಯ್ ಎನ್.ಎ. (ಔಟಾಗದೆ 80), ಗೌತಮ್ (61) ಮತ್ತು ಶ್ರೇಯಸ್ ಎಸ್.ಪಿ. (60) ಅರ್ಧಶತಕ ದಾಖಲಿಸಿದರು.

ಸವಾಲಿನ ಮೊತ್ತ ಬೆನ್ನತ್ತಿದ ತಮಿಳುನಾಡು ತಂಡವು 45 ಓವರ್‌ಗಳಲ್ಲಿ 219 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಆ ತಂಡದ ಪರ ಭೂಪತಿ ವೈಷ್ಣ ಕುಮಾರ್ (53) ಮಿಂಚಿದರು. ಕರ್ನಾಟಕದ ಯಶೋವರ್ಧನ್ (38ಕ್ಕೆ 2), ಶ್ರೇಯಸ್ ಎಸ್.ಪಿ. (28ಕ್ಕೆ 2) ಮತ್ತು ಮೊಹಸಿನ್ ಖಾನ್ (58ಕ್ಕೆ 2) ಪರಿಣಾಮಕಾರಿ ಬೌಲಿಂಗ್ ಮಾಡಿದರು.

ಕರ್ನಾಟಕ ತಂಡವು ಎಂಟರ-ಘಟ್ಟದಲ್ಲಿ ಬುಧವಾರ ಮಹಾರಾಷ್ಟ್ರ ತಂಡವನ್ನು ಎದುರಿಸಲಿದೆ.

ಬಂಗಾಳ ಮಣಿಸಿದ ಕರ್ನಾಟಕ: ಮಹಿಳೆಯರು: ಸವಿ ಸಿ.ಎಸ್. (15ಕ್ಕೆ 3), ನಿರ್ಮಿತಾ ಸಿ.ಜೆ. (15ಕ್ಕೆ 3) ಹಾಗೂ ಪೂಜಾ ಕುಮಾರಿ (12ಕ್ಕೆ 3) ಅವರ ಭರ್ಜರಿ ಬೌಲಿಂಗ್ ಬಲದಿಂದ ಕರ್ನಾಟಕ ಮಹಿಳೆಯರು ಬಂಗಾಳ ತಂಡವನ್ನು ಮಣಿಸಿದರು.

ಜೈಪುರದ ಆರ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ರಾಜ್ಯ ತಂಡ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಬಂಗಾಳ ತಂಡದವರು 26.4 ಓವರ್‌ಗಳಲ್ಲಿ ಕೇವಲ 69 ರನ್ ಆಲೌಟ್ ಆದರು. ಕರ್ನಾಟಕ ತಂಡ 31.2 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಕೃಷಿಕಾ ರೆಡ್ಡಿ 23 ರನ್ ಗಳಿಸಿದರು.

ಬುಧವಾರ ನಡೆಯುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ಮಹಿಳೆಯರಿಗೆ ದೆಹಲಿ ಸವಾಲು ಎದುರಾಗಿದೆ.

ವಿಶ್ವಕಪ್ ಲಾಂಛನ ಇಭಾ ಬಿಡುಗಡೆ ಮಾಡಿದ ಫಿಫಾ

ನವದೆಹಲಿ (ಪಿಟಿಐ): ಭಾರತದಲ್ಲಿ ಮುಂದಿನ ವರ್ಷ ನಡೆಯಲಿರುವ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಪುಟ್‌ಬಾಲ್ ಟೂರ್ನಿಯ ಅಧಿಕೃತ ಲಾಂಛನ ‘ಇಭಾ’ವನ್ನು ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಸೋಮವಾರ ಬಿಡುಗಡೆ ಮಾಡಿದೆ.ಮಹಿಳೆಯರು ಮತ್ತು ಬಾಲಕಿಯರಲ್ಲಿರುವ ಪ್ರತಿಭೆಯನ್ನು ಜಗತ್ತಿಗೆ ಸಾರಿ ಹೇಳುವುದು ‘ಇಭಾ’ದ ಉದ್ದೇಶವಾಗಿದೆ ಎಂದು ಫಿಫಾ ತಿಳಿಸಿದೆ.

ಮುಂದಿನ ವರ್ಷದ ಅಕ್ಟೋಬರ್ 11ರಿಂದ 30ರ ವರೆಗೆ ಟೂರ್ನಿ ನಡೆಯಲಿದೆ. ಟೂರ್ನಿಗೆ ಸಂಬಂಧಿಸಿದಂತೆ ಇದೊಂದು ಮಹತ್ವದ ಮೈಲುಗಲ್ಲಾಗಿದೆ ಎಂದು ಅಖಿಲ ಭಾರತ ಫುಟ್‌ಬಾಲ್ ಸಮಿತಿಯ ಅಧ್ಯಕ್ಷ ಪ್ರಫುಲ್ ಪಟೇಲ್ ಅಭಿಪ್ರಾಯಪಟ್ಟಿದ್ದಾರೆ.





